ಬುಧವಾರ, ಜೂನ್ 11, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪೂರನ್ ವಿದಾಯ

ವೆಸ್ಟ್ ಇಂಡೀಸ್‌ನ ಬ್ಯಾಟರ್– ವಿಕೆಟ್‌ಕೀಪರ್ 29 ವರ್ಷ ವಯಸ್ಸಿನ ನಿಕೋಲಸ್ ಪೂರನ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮಂಗಳವಾರ ವಿದಾಯ ಘೋಷಿಸಿದರು

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಏಕದಿನ	61	1983	118	3	11
ಟಿ20	106	2275	98	0	13



ರಾಹುಲ್‌ಗೆ ಪಾಕ್ ಕುರಿತು ಕಾಳಜಿ ಹೆಚ್ಚು: ಹಿಮಂತ


ಹಿಮಂತ ಬಿಸ್ವ ಶರ್ಮಾ

ಗುವಾಹಟಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಭಾರತಕ್ಕಿಂತ ಪಾಕಿಸ್ತಾನದ ಬಗ್ಗೆ ಹೆಚ್ಚು ಕಾಳಜಿ ಎಂದು ಅಸ್ಸಾಂ ಮುಖ್ಯ ಮಂತ್ರಿ ಹಿಮಂತ ಬಿಸ್ವ ಶರ್ಮಾ ಮಂಗಳವಾರ ಟೀಕಿಸಿದ್ದಾರೆ.

'ಆಪರೇಷನ್ ಸಿಂಧೂರ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಪಾಕಿಸ್ತಾನಕ್ಕೆ ಪ್ರತ್ಯುತ್ತರ ನೀಡಿದ್ದಾರೆ. ಆದರೆ, 'ನರೇಂದರ್–ಸರೆಂಡರ್' ಎಂದು ಮೂದಲಿಸುವ ಮೂಲಕ ರಾಹುಲ್ ಗಾಂಧಿ ಅವರು ದೇಶದ ಸಶಸ್ತ್ರ ಪಡೆಗಳಿಗೆ ಅವಮಾನಿಸಿದ್ದಾರೆ' ಎಂದು ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆಪರೇಷನ್ ಸಿಂಧೂರ ವೇಳೆ ಭಾರತಕ್ಕೆ ಆಗಿರುವ ನಷ್ಟವೆಷ್ಟು ಎಂದು ಕಾಂಗ್ರೆಸ್ ಕೇಳುತ್ತಿದೆ. ಸಶಸ್ತ್ರ ಪಡೆಗಳಿಗೆ ಕೆಲ ಮಟ್ಟಿನ ನಷ್ಟ ಆಗಿರಬಹುದು. ಆದರೆ, ಯುದ್ಧದ ಪರಿಸ್ಥಿತಿ ಇನ್ನೂ ಮುಂದುವರಿದಿದೆ. ಹೀಗಾಗಿ, ನಮ್ಮ ಪಡೆಗಳು ಪಾಕಿಸ್ತಾನಕ್ಕೆ ಎಷ್ಟು ಹಾನಿ ಮಾಡಿವೆ ಎಂದು ನಾವು ಕೇಳಬೇಕು' ಎಂದರು.

'ಪಾಕಿಸ್ತಾನಕ್ಕೆ ಎಷ್ಟು ಹಾನಿ ಉಂಟು ಮಾಡಲಾಗಿದೆ ಎಂದು ರಾಹುಲ್ ಗಾಂಧಿ ಅವರು ಪ್ರಧಾನಿ ಮೋದಿ ಅವರನ್ನು ಕೇಳಿದ್ದ ಪಕ್ಷದಲ್ಲಿ, 70 ಉಗ್ರರನ್ನು ಕೊಲ್ಲಲಾಗಿದ್ದು, ಎಂಟು ವಿಮಾನ ನಿಲ್ದಾಣಗಳನ್ನು ನಾಶ ಮಾಡಲಾಗಿದೆ ಎಂದು ಮೋದಿ ಉತ್ತರಿಸುತ್ತಿದ್ದರು' ಎಂದೂ ಶರ್ಮಾ ಹೇಳಿದರು.

ಉಗ್ರರ ನೆಲೆ ಧ್ವಂಸ

ರಜೌರಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ತನಮಂಡಿ ಪ್ರದೇಶದ ಡರ್‍ರಾ ಬಾರಚಾರ ಗ್ರಾಮ ದಲ್ಲಿದ್ದ ಉಗ್ರರ ಅಡಗುತಾಣ ವೊಂದನ್ನು ಸೇನೆ ಮತ್ತು ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಧ್ವಂಸ ಗೊಳಿಸಿದ್ದಾರೆ. ಅಡಗುತಾಣದಿಂದ 10 ಗ್ರೆನೇಡ್ ಲಾಂಚರ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಯಾರನ್ನೂ ಬಂಧಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಪ್ರಚೋದಿಸಿದರೆ ಮುಗಿಸುತ್ತೇವೆ'

ಉಗ್ರರು ಪಾಕ್‌ನಲ್ಲಿ ಅಡಗಿದ್ದರೂ ಪ್ರತೀಕಾರ ಖಚಿತ: ಎಸ್‌.ಜೈಶಂಕರ್ ಎಚ್ಚರಿಕೆ

ಬೆಲ್ಜಿಯಂ (ಪಿಟಿಐ): 'ಭಯೋತ್ಪಾದಕ ದಾಳಿಗಳಿಂದ ನಮ್ಮನ್ನು ಪ್ರಚೋದಿಸಿದರೆ ಪಾಕಿಸ್ತಾನದ ಒಳನುಗ್ಗಿ ಹೊಡೆಯುತ್ತೇವೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಎಚ್ಚರಿಕೆ ನೀಡಿದ್ದಾರೆ.

ಐರೋಪ್ಯ ರಾಷ್ಟ್ರಗಳ ಪ್ರವಾಸದಲ್ಲಿರುವ ಜೈಶಂಕರ್ ಅವರು, 'ಪಹಲ್ಗಾಮ್ ಮಾದರಿಯ ಕ್ರೂರ ಕೃತ್ಯಗಳನ್ನು ನಡೆಸಿದರೆ, ಭಯೋತ್ಪಾದಕ ಸಂಘಟನೆಗಳ ಮುಖಂಡರು ಮುಯ್ಯಿಗೆ ಮುಯ್ಯಿ ಎನ್ನುವ ಸ್ಥಿತಿ ಎದುರಿಸಬೇಕಾಗುತ್ತದೆ' ಎಂದರು.

'ಪಾಕಿಸ್ತಾನ ಸಾವಿರಾರು ಭಯೋತ್ಪಾದಕರಿಗೆ ತರಬೇತಿ ನೀಡುತ್ತಿದೆ. ಅವರನ್ನು ಭಾರತದ ಮೇಲೆ ಛೂ ಬಿಡುತ್ತಿದೆ. ಇದರೊಂದಿಗೆ ಬದುಕಲು ನಾವು ಸಿದ್ಧರಿಲ್ಲ. ಉಗ್ರರ ನಾಯಕರು ಪ್ರತೀಕಾರ ಎದುರಿಸ ಬೇಕಾಗುತ್ತದೆ. ಪಾಕಿಸ್ತಾನದ ಒಳಗೆ ಅಡಗಿದ್ದರೂ ಬಿಡದೇ ಮುಗಿಸುತ್ತೇವೆ' ಎಂದು ಜೈಶಂಕರ್ ಕಠಿಣ ಸಂದೇಶ ರವಾನೆ ಮಾಡಿದರು.

'ನಮ್ಮ ಯುದ್ಧ ವಿಮಾನಗಳು ಮತ್ತು ಕ್ಷಿಪಣಿಗಳು ಪಾಕಿಸ್ತಾನದ ಎಂಟು ಪ್ರಮುಖ ವಾಯುನೆಲೆಗಳ ಮೇಲೆ ದಾಳಿ ನಡೆಸಿ ದೊಡ್ಡ ಹಾನಿ ಮಾಡಿವೆ' ಎಂದು ತಿಳಿಸಿದರು.

ಐರೋಪ್ಯ ರಾಷ್ಟ್ರಗಳಲ್ಲಿ ವಿದೇಶಾಂಗ ಸಚಿವ: ಬೆಲ್ಜಿಯಂ ಮತ್ತು ಲಕ್ಸಮ್‌ಬರ್ಗ್ ಪ್ರವಾಸದಲ್ಲಿರುವ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಸೋಮವಾರ ಐರೋಪ್ಯ ಸಂಸತ್ತಿನ ಸದಸ್ಯರನ್ನು ಭೇಟಿಯಾದರು. ಐರೋಪ್ಯ ಒಕ್ಕೂಟ, ಬೆಲ್ಜಿಯಂ ಮತ್ತು ಲಕ್ಸಮ್‌ಬರ್ಗ್‌ನ ಭಾರತೀಯ ರಾಯಭಾರಿ ಸೌರಭ್ ಕುಮಾರ್ ಜತೆಯಲ್ಲಿದ್ದರು.


ಬೆಲ್ಜಿಯಂ ಪ್ರವಾಸದಲ್ಲಿರುವ ವಿದೇಶಾಂಗ ಸಚಿವ ಎಸ್‌. ಜೈಶಂಕರ್ ಅವರು ಐರೋಪ್ಯ ಯೂನಿಯನ್‌ನ ಉಪಾಧ್ಯಕ್ಷೆ ಕಾಜಾ ಕಲ್ಲಾಸ್ ಅವರನ್ನು ಭೇಟಿಯಾಗಿ ಚರ್ಚಿಸಿದರು –ಪಿಟಿಐ ಚಿತ್ರ

ಪ್ರವಾಸದ ಬಗ್ಗೆ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಸಚಿವರು, ' ಐರೋಪ್ಯ ಸಂಸತ್ತಿನ ವಿದೇಶಾಂಗ ವ್ಯವಹಾರಗಳ ಸಮಿತಿ ಮುಖ್ಯಸ್ಥ ಡೇವಿಡ್ ಮೈಕ್ ಎಲಿಸ್ಟರ್, ಸ್ಯಾಂಡ್ರೋ ಗೋಜಿ ನೇತೃತ್ವದ ಐರೋಪ್ಯ ಮತ್ತು ಇಂಗ್ಲೆಂಡ್ ಸಂಸದೀಯ ನಿಯೋಗ ಮತ್ತು ಗ್ರೀಕ್ ಸಂಸದ ನಿಕೋಸ್ ಪಾಪಂಡ್ರೆವು ಅವರ ಭೇಟಿ ಫಲಪ್ರದವಾಗಿತ್ತು' ಎಂದು ಹೇಳಿದ್ದಾರೆ.

ಸೋಮವಾರ ಸಂಜೆ ಅನಿವಾಸಿ ಭಾರತೀಯ ಸಮುದಾಯದ ಸದಸ್ಯರ ಜೊತೆಯೂ ಜೈಶಂಕರ್ ಸಂವಾದ ನಡೆಸಿದರು.

'ಭಯೋತ್ಪಾದನೆಗೂ ಪಾಕ್‌ಗೂ ಚಾರಿತ್ರಿಕ ನಂಟು'

'ಭಯೋತ್ಪಾದನೆಯನ್ನು ದ್ವಿಪಕ್ಷೀಯ ಸಮಸ್ಯೆ ಎಂದು ಬಿಂಬಿಸುವುದಕ್ಕಿಂತ ಜಾಗತಿಕ ಸಮಸ್ಯೆಯೆಂದೇ ಪರಿಗಣಿಸಬೇಕು' ಎಂದು ಪ್ರತಿಪಾದಿಸಿದ ಜೈಶಂಕರ್, ಜಾಗತಿಕವಾಗಿ ನಡೆದ ಭಯೋತ್ಪಾದನೆ ಕೃತ್ಯಗಳಿಗೂ ಪಾಕಿಸ್ತಾನಕ್ಕೂ ಇರುವ ಚಾರಿತ್ರಿಕ ನಂಟನ್ನು ಎತ್ತಿ ತೋರಿಸಿದರು.

ಬ್ರೆಜಿಲ್‌ನ ವಿದೇಶಾಂಗ ಸಚಿವ ಮ್ಯಾಕ್ಸಿಮ್ ಪ್ರಿವೋಟ್ ಅವರೊಂದಿಗೆ 'ಆಪರೇಷನ್ ಸಿಂಧೂರ' ಕುರಿತು ಅವರು ಚರ್ಚಿಸಿದರು. 2016ರಲ್ಲಿ ನಡೆದ ಬ್ರಸೆಲ್ಸ್ ಮೇಲಿನ ಉಗ್ರರ ದಾಳಿ ಉಲ್ಲೇಖಿಸಿದ ಸಚಿವರು, 'ಹಲವು ದೇಶಗಳಿಗೆ ಭಯೋತ್ಪಾದನೆ ಇಂದು ಸವಾಲಾಗಿದೆ. ಒಂದು ಗುಂಪು ಇದನ್ನು ನಡೆಸುತ್ತದೆ ಎಂಬುದು ನಿಮಗೆ ಗೊತ್ತು. ಆದರೆ ಒಂದು ದೇಶ ರಾಜಾರೋಷವಾಗಿ ಇದನ್ನೇ (ಭಯೋತ್ಪಾದನೆ) ತನ್ನ ನೀತಿ ಮಾಡಿಕೊಂಡಿದೆ' ಎಂದು ಟೀಕಿಸಿದರು.

'ಇಲ್ಲೂ (ಐರೋಪ್ಯ ರಾಷ್ಟ್ರಗಳು) ಭಯೋತ್ಪಾದನೆ ನಡೆಯುತ್ತದೆ. ಕಳೆದ 20–30 ವರ್ಷಗಳನ್ನು ನೋಡಿದರೆ ಈ ಕೃತ್ಯಗಳ ಮೂಲ ಪಾಕಿಸ್ತಾನವೇ ಆಗುತ್ತಿದೆ' ಎಂದರು.

ಇದೇ 13ರಂದು ಚಾಲನೆ • ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆಗಳ ವ್ಯಾಪ್ತಿ

ಕೋಮು ಹಿಂಸೆ ನಿಗ್ರಹ: ರೆಡ್ಡಿಗೆ ಹೊಣೆ

• ಪ್ರವೀಣ್ ಕುಮಾರ್ ಪಿ.ವಿ.

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕೋಮುಹಿಂಸೆ ನಿಗ್ರಹಿಸಲು ಸರ್ಕಾರ ಹೊಸದಾಗಿ ಕಾರ್ಯಪಡೆ ರಚಿಸಿದ್ದು, ಇದರ ಕಾರ್ಯಾಚರಣೆಗೆ ಇದೇ 13ರಂದು ಚಾಲನೆ ನೀಡಲು ಸಿದ್ಧತೆಗಳು ನಡೆದಿವೆ.

ಡಿಐಜಿ ದರ್ಜೆಯ ಅಧಿಕಾರಿ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲಿರುವ ಈ ಕಾರ್ಯಪಡೆಯಲ್ಲಿ ಒಟ್ಟು 248 ಸಿಬ್ಬಂದಿ ಹಾಗೂ ಮೂರು ಕಂಪನಿಗಳು ಇರಲಿವೆ. ಸದ್ಯಕ್ಕೆ ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ಅವರಿಗೆ ಈ ವಿಶೇಷ ಕಾರ್ಯಪಡೆಯ ಹೊಣೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದೆ. ಇದೇ 13 ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ಈ ಕಾರ್ಯಪಡೆಯನ್ನು ಉದ್ಘಾಟಿಸಲಿದ್ದಾರೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

'ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವುದಕ್ಕೆ ವಿಶೇಷ ಕಾರ್ಯಪಡೆ ಸಜ್ಜಾಗಿದೆ. ಮೂರು ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ಈ ಕಾರ್ಯಪಡೆಯ ಕೇಂದ್ರ ಕಚೇರಿ ಮಂಗಳೂರಿನಲ್ಲೇ ಇರಲಿದೆ. ಕಾರ್ಯಪಡೆಯಲ್ಲಿ ತಲಾ 80 ಸಿಬ್ಬಂದಿಯನ್ನು ಒಳಗೊಂಡ ಮೂರು ಕಂಪನಿಗಳು ಇರಲಿವೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಗಳಿಗೆ ತಲಾ ಒಂದು ಕಂಪನಿಗಳನ್ನು ನಿಯೋಜಿಸಲಾಗುತ್ತದೆ' ಎಂದು ಸುಧೀರ್ ಕುಮಾರ್ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಗುಪ್ತವಾರ್ತೆ ಘಟಕ: ದ್ವೇಷ ಭಾಷಣ, ಉದ್ರೇಕಕಾರಿ ಘಟನೆಗಳು ಮತ್ತು ಕೋಮು ಸಂಬಂಧಿತ ಘಟನೆಗಳಿಗೆ ಸಂಬಂಧಿಸಿ ಗುಪ್ತ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಮೇಲ್ವಿಚಾರಣೆ ಮಾಡಲು ತಾಂತ್ರಿಕ ಕೋಶವನ್ನು ಒಳಗೊಂಡ ಗುಪ್ತವಾರ್ತೆ ಘಟಕ ವನ್ನು ಈ ವಿಶೇಷ ಕಾರ್ಯ ಪಡೆ ಹೊಂದಿರಲಿದೆ. ಸಂಭಾವ್ಯ ಕೋಮು ಹಿಂಸಾಚಾರ ತಪ್ಪಿಸಲು, ಕೋಮು ಗಲಭೆಯಂತಹ ಸಂಚುಗಳನ್ನು ವಿಫಲಗೊಳಿಸುವಲ್ಲಿ ಈ ಘಟಕವು ಮಹತ್ವದ ಪಾತ್ರ ನಿಭಾಯಿಸಲಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

'ಕೋಮು ಹಿಂಸಾಚಾರದಲ್ಲಿ ತೊಡಗುವ ಗುಂಪುಗಳನ್ನು ನಿಯಂತ್ರಿಸಲೆಂದೇ ವಿಶೇಷ ತರಬೇತಿ ಪಡೆದ ಸಿಬ್ಬಂದಿ ಈ ಕಾರ್ಯಪಡೆ ಯಲ್ಲಿ ಇರಲಿದ್ದಾರೆ. ಕೋಮುಗಲಭೆ ಸಂಭವಿಸಿದರೆ, ಅದರ ನಿಯಂತ್ರಣಕ್ಕೆ ಈ ಕಾರ್ಯಪಡೆಯ ಸಿಬ್ಬಂದಿಯನ್ನು ಬಳಸಿಕೊಳ್ಳಲಿದ್ದೇವೆ. ದ್ವೇಷ ಭಾಷಣ ಮಾಡುವ, ಕೋಮು ಹಿಂಸಾಚಾರಕ್ಕೆ ಸಂಚು ರೂಪಿಸಿದ ಹಿನ್ನೆಲೆ ಇರುವ ವ್ಯಕ್ತಿಗಳನ್ನು ಗುರುತಿಸಿ, ಅವರ ಚಟುವಟಿಕೆ ಮೇಲೆ ವಿಶೇಷ ಕಾರ್ಯಪಡೆಯ ಸಿಬ್ಬಂದಿ ನಿಗಾ ಇಡಲಿದ್ದಾರೆ' ಎಂಬುದು ಮೂಲಗಳ ವಿವರಣೆ.

ನಕ್ಸಲ್ ನಿಗ್ರಹ ಪಡೆಯಲ್ಲಿದ್ದ (ಎಎನ್‌ಎಫ್) 656 ಸಿಬ್ಬಂದಿಯಲ್ಲಿ 248 ಸಿಬ್ಬಂದಿಯನ್ನು ಕೋಮು ಹಿಂಸೆ ನಿಗ್ರಹ ಪಡೆಗೆ ನಿಯೋಜಿಸಲಾಗಿದೆ.

ಕೋಮು ಹಿಂಸೆ ನಿಗ್ರಹ ಪಡೆ: ಹುದ್ದೆಗಳ ವಿವರ

ಹುದ್ದೆ	ಸಂಖ್ಯೆ
ಡಿಐಜಿ	1
ಡಿವೈಎಸ್‌ಪಿ	1
ಸಹಾಯಕ ಕಮಾಂಡೆಂಟ್	1
ಇನ್‌ಸ್ಪೆಕ್ಟರ್	4
ಪಿಎಸ್‌ಐ	16
ಹೆಡ್‌ಕಾನ್‌ಸ್ಟೆಬಲ್	60
ಕಾನ್‌ಸ್ಟೆಬಲ್	150
ಅನುಯಾಯಿ	15



ದ್ವೇಷ ಭಾಷಣ ಮಾಡುವ, ಕೋಮು ಹಿಂಸೆಗೆ ಸಂಚು ರೂಪಿಸಿದ ಹಿನ್ನೆಲೆಯ ವ್ಯಕ್ತಿಗಳನ್ನು ಗುರುತಿಸಿ, ಅವರ ಚಟುವಟಿಕೆ ಮೇಲೆ ಕಾರ್ಯಪಡೆ ನಿಗಾ ಇಡಲಿದೆ.

ಸುಧೀರ್ ಕುಮಾರ್ ರೆಡ್ಡಿ,
ಕಾರ್ಯಪಡೆ ಮುಖ್ಯಸ್ಥ

ಎಎನ್‌ಎಫ್ ಮುಂದುವರಿಕೆ

ಪಶ್ಚಿಮ ಘಟ್ಟ ಪ್ರದೇಶದಲ್ಲಿ ನಕ್ಸಲ್ ಚಟುವಟಿಕೆ ನಿಯಂತ್ರಿಸಲು ರಾಜ್ಯ ಸರ್ಕಾರವು 2005ರಲ್ಲಿ ನಕ್ಸಲ್ ನಿಗ್ರಹ ಪಡೆಯನ್ನು (ಎಎನ್‌ಎಫ್) ರಚಿಸಿತ್ತು. ಎಎನ್‌ಎಫ್‌ನಲ್ಲಿ 667 ಮಂಜೂರಾದ ಹುದ್ದೆಗಳಿವೆ. ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಯೋಜನೆಯಡಿ ಆರು ಮಂದಿ ನಕ್ಸಲರು ಶರಣಾದ ಬಳಿಕ ಎಎನ್‌ಎಫ್ ಅನ್ನು ವಿಸರ್ಜಿಸಲು ರಾಜ್ಯ ಸರ್ಕಾರ ನಿರ್ಧರಿಸಿತ್ತು. ಈ ಕುರಿತು 2025–26ನೇ ಸಾಲಿನ ಬಜೆಟ್ ಭಾಷಣದಲ್ಲೂ ಉಲ್ಲೇಖಿಸಲಾಗಿತ್ತು. ಛತ್ತೀಸಗಢ, ಜಾರ್ಖಂಡ್ ರಾಜ್ಯಗಳ ಕೆಲವು ನಕ್ಸಲರು ಕರ್ನಾಟಕ, ಕೇರಳ, ತಮಿಳುನಾಡು ಗಡಿ ಪ್ರದೇಶಗಳಿಗೆ ಸ್ಥಳಾಂತರಗೊಳ್ಳುತ್ತಿದ್ದಾರೆ ಎಂದು ಗುಪ್ತಚರ ಇಲಾಖೆಯು ಮಾಹಿತಿ ನೀಡಿರುವುದರಿಂದ ಎಎನ್‌ಎಫ್ ಅನ್ನು ಕನಿಷ್ಠ 3 ವರ್ಷವಾದರೂ ಮುಂದುವರಿಸಬೇಕು ಎಂದು ಡಿಜಿಪಿ ಮತ್ತು ಐಜಿಪಿ ಅವರು ಸಲಹೆ ನೀಡಿದ್ದರು. ಹಾಗಾಗಿ ಎಎನ್‌ಎಫ್ ಅನ್ನು ಮುಂದುವರಿಸಲು ಸರ್ಕಾರ ನಿರ್ಧರಿಸಿದೆ. ಕೋಮು ಹಿಂಸೆ ನಿಗ್ರಹ ಪಡೆಗೆ ಸಿಬ್ಬಂದಿಯನ್ನು ನಿಯೋಜಿಸಿದ ಬಳಿಕ ಉಳಿಯುವ 376 ಹುದ್ದೆಗಳು ಎಎನ್‌ಎಫ್‌ನಲ್ಲಿ ಮುಂದುವರಿಯಲಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾರ್ಯಪಡೆಯ ಕಾರ್ಯಗಳು

- ದ್ವೇಷ ಭಾಷಣ, ಉದ್ರೇಕಕಾರಿ ಚಟುವಟಿಕೆ ಮೇಲೆ ನಿಗಾ
- ಕೋಮು ಹಿಂಸಾಚಾರ ಸಂಬಂಧಿ ಚಟುವಟಿಕೆ ಮೇಲೆ ಕಣ್ಗಾವಲು
- ವಿಶ್ವಾಸ ವೃದ್ಧಿಸುವ ಕ್ರಮಗಳನ್ನು ಕೈಗೊಳ್ಳುವುದು
- ಮೂಲಭೂತವಾದಿ ಚಟುವಟಿಕೆ ಗುರುತಿಸಿ ನಿಗ್ರಹಿಸುವುದು

ಪ್ರಧಾನಿ ಭೇಟಿಯಾದ ಸರ್ವಪಕ್ಷಗಳ ನಿಯೋಗ


ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂರ' ಬಳಿಕ ಭಯೋತ್ಪಾದನೆ ಕುರಿತು ಭಾರತದ ನಿಲುವು ದೃಢಪಡಿಸಲು ವಿವಿಧ ದೇಶಗಳಿಗೆ ಪ್ರವಾಸ ತೆರಳಿದ್ದ ಸರ್ವಪಕ್ಷ ನಿಯೋಗಗಳ ಸದಸ್ಯರನ್ನು ಪ್ರಧಾನಿ ನರೇಂದ್ರ ಮೋದಿ ಬುಧವಾರ ಇಲ್ಲಿ ಭೇಟಿ ಮಾಡಿದರು.

ಪ್ರವಾಸ ಕೈಗೊಂಡಿದ್ದ ಸಂಸದರು ಈ ವೇಳೆ ಪ್ರಧಾನಿ ಅವರ ಜೊತೆಗೆ ಅನುಭವ ಹಂಚಿಕೊಂಡರು. ವಿವಿಧ ಪಕ್ಷಗಳಿಗೆ ಸೇರಿದ ಸುಮಾರು 50 ಮಂದಿ ಹಾಲಿ ಸಂಸದರು ಪ್ರವಾಸ ಕೈಗೊಂಡಿದ್ದರು.

ಮಾಜಿ ಸಂಸದರು, ಮಾಜಿ ರಾಯಭಾರಿಗಳೂ ನಿಯೋಗದಲ್ಲಿದ್ದು, ಒಟ್ಟು 33 ದೇಶಗಳಿಗೆ ಭೇಟಿ ನೀಡಿದ್ದರು. ನಾಲ್ಕು ನಿಯೋಗದ ನೇತೃತ್ವವನ್ನು ಎನ್‌ಡಿಎ ಪಕ್ಷಗಳ ಸದಸ್ಯರು, ಮೂರು ನಿಯೋಗಗಳ ನೇತೃತ್ವವನ್ನು ಕ್ರಮವಾಗಿ ಕಾಂಗ್ರೆಸ್, ಡಿಎಂಕೆ ಮತ್ತು ಎನ್‌ಸಿಪಿ (ಎಸ್‌ಪಿ) ಸಂಸದರು ವಹಿಸಿದ್ದರು.

ಭಾರತೀಯ ವಿದ್ಯಾರ್ಥಿಯ ಕೈಗೆ ಕೋಳ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ ಉದ್ಯಮಿ

ನ್ಯೂಯಾರ್ಕ್ (ಪಿಟಿಐ): ನೆವಾರ್ಕ್ ಲಿಬರ್ಟಿ ವಿಮಾನ ನಿಲ್ದಾಣದಲ್ಲಿ ಭಾರತೀಯ ವಿದ್ಯಾರ್ಥಿಯೊಬ್ಬನ ಕೈಗೆ ಕೋಳ ತೊಡಿಸಿ ಪೊಲೀಸರು ಕರೆದೊಯ್ಯುತ್ತಿದ್ದುದನ್ನು ಭಾರತೀಯ ಅಮೆರಿಕನ್ ಉದ್ಯಮಿ ಕುನಾಲ್ ಜೈನ್ ಚಿತ್ರೀಕರಿಸಿದ್ದು, ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.



'ಕೈಗೆ ಕೋಳ ತೊಡಿಸಲಾಗಿದ್ದ ಯುವಕ ಅಳುತ್ತಿದ್ದ. ಆತನನ್ನು ಅಪರಾಧಿ ಎಂಬಂತೆ ನಡೆಸಿಕೊಳ್ಳ ಲಾಗುತ್ತಿತ್ತು. ಇದನ್ನು ಅಸಹಾಯಕತೆ ಯಿಂದ ನೋಡಬೇಕಾಯಿತು. ಇದು ಹೃದಯವಿದ್ರಾವಕ ದೃಶ್ಯ' ಎಂದು ಜೈನ್ ಹೇಳಿದ್ದಾರೆ.

ವಿದ್ಯಾರ್ಥಿಯ ಕೈಗೆ ಕೋಳ ತೊಡಿಸಿದ್ದನ್ನು 'ಮಾನವ ದುರಂತ' ಎಂದು ಕರೆದಿರುವ ಅವರು, ಈ ಘಟನೆಯತ್ತ ತುರ್ತು ಗಮನ ಹರಿಸಬೇಕು ಮತ್ತು ವಿದ್ಯಾರ್ಥಿಯ ನೆರವಿಗೆ ಬರಬೇಕು' ಎಂದು ಆಗ್ರಹಿಸಿದ್ದಾರೆ. ಈ ವಿಡಿಯೊವನ್ನು ಭಾರತೀಯ ರಾಯಭಾರಿ ಕಚೇರಿಯ 'ಎಕ್ಸ್' ಖಾತೆಗೆ ಟ್ಯಾಗ್ ಮಾಡಿದ್ದಾರೆ.

'ಆ ವಿದ್ಯಾರ್ಥಿ 'ನಾನು ಹುಚ್ಚನಲ್ಲ, ಈ ಅಧಿಕಾರಿಗಳು ನನ್ನನ್ನು ಹುಚ್ಚನೆಂದು ಸಾಬೀತುಪಡಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಕೂಗುತ್ತಿದ್ದ' ಎಂದು ಜೈನ್ ಹೇಳಿದ್ದಾರೆ.

ಮೌಲ್ಯಮಾಪನ ಭತ್ಯೆ ಬಿಡುಗಡೆಗೆ ಆಗ್ರಹ

ಬೆಂಗಳೂರು: ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ–1 ಮತ್ತು ಪರೀಕ್ಷೆ–2ರ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿದ ಉಪನ್ಯಾಸಕರಿಗೆ ಸಂಭಾವನೆ ಮತ್ತು ಭತ್ಯೆಗಳನ್ನು ಪಾವತಿಸುವಂತೆ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಒತ್ತಾಯಿಸಿದೆ.

ಈ ಕುರಿತು ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಎಸ್.ಬಿ. ಮಾಲೀಪಾಟೀಲ ಅವರು, 2025–26ನೇ ಸಾಲಿನ ಬಜೆಟ್‌ನಲ್ಲಿ ಪದವಿಪೂರ್ವ ಪರೀಕ್ಷೆಗಳ ವೆಚ್ಚಕ್ಕಾಗಿಯೇ ₹78 ಕೋಟಿ ಮೀಸಲಿಡ ಲಾಗಿದೆ. ಪರೀಕ್ಷೆ–1 ಮತ್ತು ಪರೀಕ್ಷೆ–2ರ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿದ ಉಪನ್ಯಾಸಕರಿಗೆ ಇದುವರೆಗೂ ಹಣ ಸಂದಾಯವಾಗಿಲ್ಲ ಎಂದು ದೂರಿದ್ದಾರೆ.

ಶ್ರೀಗಂಧದ ಮರ ಸಹಿತ ಭೂಸ್ವಾಧೀನಕ್ಕೆ ಕಡಿಮೆ ಬೆಲೆ ನಿಗದಿ ಆರೋಪ

ಹೈಟೆನ್ಷನ್ ಟವರ್ ಏರಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ತರೀಕೆರೆ (ಚಿಕ್ಕಮಗಳೂರು): ಹಳಿಯೂರು ಗ್ರಾಮದಲ್ಲಿ ಪ್ರತಿಭಟನೆಯ ಬ್ಯಾನರ್ ಪೊಲೀಸರು ಕಿತ್ತು ಹಾಕಿದ್ದಾರೆ ಎಂದು ಆರೋಪಿಸಿ ರೈತರೊಬ್ಬರು ಹೈಟೆನ್ಷನ್ ವಿದ್ಯುತ್ ಮಾರ್ಗದ ಟವರ್ ಏರಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಒಟ್ಟು 8 ಎಕರೆ ಜಾಗದಲ್ಲಿ 22 ರೈತರು ಸೇರಿ ಶ್ರೀಗಂಧದ ಮರ ಬೆಳೆದಿದ್ದರು. 3 ಎಕರೆ 30 ಗುಂಟೆ ಜಾಗ ರಾಷ್ಟ್ರೀಯ ಹೆದ್ದಾರಿಗೆ ಸ್ವಾಧೀನ ವಾಗಿದ್ದು, ಕಡಿಮೆ ಪರಿಹಾರ ನಿಗದಿ ಮಾಡಲಾಗಿದೆ ಎಂಬುದು ರೈತರ ಆರೋಪ. ಕರ್ನಾಟಕ ಸೋಪ್ಸ್ ಅ್ಯಂಡ್ ಡಿಟರ್ಜೆಂಟ್ ಲಿಮಿಟೆಡ್ ಅಂದಾಜಿನ ಪ್ರಕಾರ ₹62 ಕೋಟಿ ಪರಿಹಾರ ನೀಡಬೇಕಿದ್ದು, ₹1.50 ಕೋಟಿ ಪರಿಹಾರ ನಿಗದಿ ಮಾಡಲಾಗಿದೆ. ಇದರಿಂದ ಅನ್ಯಾಯವಾಗಿದೆ ಎಂದು ಆರೋಪಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದ್ದರು.

ಬ್ಯಾನರ್‌ಗಳನ್ನು ಸೋಮವಾರ ರಾತ್ರಿ ಪೊಲೀಸರು ತೆಗೆದುಕೊಂಡು ಹೋಗಿದ್ದಾರೆ ಎಂದು ಆರೋಪಿಸಿ ರೈತ ಟಿ.ಎನ್. ವಿಶುಕುಮಾರ್ ಮಂಗಳವಾರ ಮುಂಜಾನೆ ಟವರ್ ಏರಿ ಪ್ರತಿಭಟನೆ ನಡೆಸಿದರು. ಪೆಟ್ರೋಲ್ ತುಂಬಿದ ಬಾಟಲಿಯನ್ನು ಕೊರಳಿಗೆ ಕಟ್ಟಿಕೊಂಡಿದ್ದು, ಪೊಲೀಸರು ಹತ್ತಿರ ಬಂದರೆ ಬೆಂಕಿ ಹಚ್ಚಿಕೊಳ್ಳುವುದಾಗಿ ಎಚ್ಚರಿಸಿದ್ದರು.

ಪೊಲೀಸರು, ಅಗ್ನಿಶಾಮಕ, ಮೆಸ್ಕಾಂ, ಕೆಪಿಟಿಸಿಎಲ್ ಸಿಬ್ಬಂದಿ ಬಂದು ಮನವಿ ಮಾಡಿದರೂ ಕೆಳಗೆ ಇಳಿಯಲಿಲ್ಲ. ಬಳಿಕ ಉಪ ವಿಭಾಗಾಧಿಕಾರಿ ಕೆ.ಜೆ. ಕಾಂತರಾಜ್, ಡಿವೈಎಸ್‌ಪಿ ಹಾಲಮೂರ್ತಿ ಅವರು ಸ್ಥಳಕ್ಕೆ ಬಂದು ಮಾಹಿತಿ ಪಡೆದರು.

'ಈ ಬಗ್ಗೆ ಹೆದ್ದಾರಿಯ ಅಧಿಕಾರಿಗಳು, ರೈತ ಸಂಘ ಮತ್ತು ಹಸಿರು ಸೇನೆಯ ಮುಖಂಡ ಕೆ.ಟಿ.ಗಂಗಾಧರ್ ನೇತೃತ್ವದಲ್ಲಿ ಸಭೆ ನಡೆಸಿ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಲಾಗುವುದು' ಎಂದು ಭರವಸೆ ನೀಡಿದರು. ನಂತರ ವಿಶುಕುಮಾರ್ ಪ್ರತಿಭಟನೆ ಹಿಂಪಡೆಯಲು ಒಪ್ಪಿದರು. ಅವರನ್ನು ಟವರ್‌ನಿಂದ ಕೆಳಗಿಳಿಸ ಲಾಯಿತು.


ಹಳಿಯೂರು ಗ್ರಾಮದಲ್ಲಿ ಹೈಟೆನ್ಷನ್ ವಿದ್ಯುತ್ ಮಾರ್ಗದ ಟವರ್ ಏರಿ ಕುಳಿತಿದ್ದ ರೈತ ಟಿ.ಎನ್‌. ವಿಶುಕುಮಾರ್ ಅವರ ಮನವೊಲಿಸಿದ ಅಧಿಕಾರಿಗಳು

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

50 ಸ್ಥಳಗಳಲ್ಲಿ '3ಡಿ ಮ್ಯಾಪಿಂಗ್'

- ದೇಶದಲ್ಲಿ ಭಯೋತ್ಪಾದನೆ ನಿಗ್ರಹದ ಭಾಗವಾಗಿ ಎನ್‌ಎಸ್‌ಜಿಯಿಂದ ಕ್ರಮ
- ಮ್ಯಾಪಿಂಗ್ ಮಾಡಲಾಗುತ್ತಿರುವ ಸ್ಥಳಗಳು

17	21	14
ಧಾರ್ಮಿಕ ಸ್ಥಳಗಳು	ಪರಮಾಣು ಸ್ಥಾವರಗಳು	ಇತರ ಮೂಲಸೌಕರ್ಯ ವ್ಯವಸ್ಥೆಗಳು



ಆಳ-ಅಗಲ
'ಚಿಂತಕರ ಚಾವಡಿ'ಗೆ ಎಂಥವರು ಬೇಕು?

'ಪರಿಷತ್ ಪಟ್ಟಿಗೆ ಅಸಮಾಧಾನ' 5

ಅಣು ವಿದ್ಯುತ್ ಸ್ಥಾವರ: ಸಂಪುಟಕ್ಕೆ ಪ್ರಸ್ತಾವ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,391	25,104	₹1 ಲಕ್ಷ (ಬೆಂಗಳೂರು)	₹1.12 ಲಕ್ಷ (ಬೆಂಗಳೂರು)	85.57

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಗೆ ತಾತ್ವಿಕ ಒಪ್ಪಿಗೆ ನೀಡಲು 'ಕೈ' ಹೈಕಮಾಂಡ್ ಸೂಚನೆ

ಮತ್ತೊಮ್ಮೆ ಜಾತಿ ಜನಗಣತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ' (ಜಾತಿ ಜನಗಣತಿ) ವರದಿ ಜಾರಿಗೆ ಕೆಲವು ಸಚಿವರ ಅಪಸ್ವರ, ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯದ ತೀವ್ರ ವಿರೋಧಕ್ಕೆ ಮಣಿದಿರುವ ಕಾಂಗ್ರೆಸ್ ಹೈಕಮಾಂಡ್, ವರದಿಗೆ ಒಪ್ಪಿಗೆ ನೀಡಿ, ಗೊಂದಲಗಳ ನಿವಾರಣೆಗೆ ಮರು ಗಣತಿ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸೂಚನೆ ನೀಡಿದೆ.

2015ರಲ್ಲಿ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಜಾತಿ ಜನಗಣತಿ ವರದಿಯ ಕುರಿತು ಚರ್ಚಿಸಲು ಇದೇ 12ರಂದು ವಿಶೇಷ ಸಚಿವ ಸಂಪುಟ ಸಭೆ ನಿಗದಿಯಾಗಿದೆ. ಈ ಮಧ್ಯೆ, ಉಭಯ ನಾಯಕರನ್ನು ದೆಹಲಿಗೆ ಕರೆಸಿಕೊಂಡು ಚರ್ಚೆ ನಡೆಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, 'ಜಾತಿ ಜನಗಣತಿ ವಿಚಾರದಲ್ಲಿ ಯಾರ ಅಪಸ್ವರವೂ ಇಲ್ಲದಂತೆ ನೋಡಿಕೊಳ್ಳಬೇಕು' ಎಂದು ನಿರ್ದೇಶನ ನೀಡಿದ್ದಾರೆ.

11ನೇ ಪುಟ ನೋಡಿ





ರಣದೀಪ್ ಸಿಂಗ್ ಸುರ್ಜೇವಾಲ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ಚರ್ಚೆ ನಡೆಸಿದರು

ಪರಿಷತ್‌ಗೆ ನಾಮನಿರ್ದೇಶನ: ಮರುಪರಿಶೀಲನೆ

ವಿಧಾನಪರಿಷತ್ತಿನಲ್ಲಿ ಖಾಲಿ ಇರುವ ನಾಲ್ಕು ಸ್ಥಾನಗಳ ನಾಮನಿರ್ದೇಶನಕ್ಕೆ ಈಗಾಗಲೇ ಅನುಮೋದಿಸಿರುವ ಪಟ್ಟಿಯನ್ನು ಮರು ಪರಿಶೀಲಿಸಲು ಕಾಂಗ್ರೆಸ್ ಹೈಕಮಾಂಡ್ ಮುಂದಾಗಿದೆ.

'ಪರಿಷ್ಕೃತ ಪಟ್ಟಿ ಕಳುಹಿಸುವುದಾಗಿ ವರಿಷ್ಠರು ಮುಖ್ಯಮಂತ್ರಿಗೆ ತಿಳಿಸಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಈ ನಾಲ್ಕು ಸ್ಥಾನಗಳಿಗೆ ದಿನೇಶ್ ಅಮಿನ್ ಮಟ್ಟು, ರಮೇಶ್ ಬಾಬು, ಡಿ.ಜಿ. ಸಾಗರ್ ಮತ್ತು ಆರತಿಕೃಷ್ಣ ಅವರನ್ನು ಶಿಫಾರಸು ಮಾಡಲಾಗಿತ್ತು. ಆದರೆ, ಈ ನಾಲ್ವರ ಪಟ್ಟಿಗೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಸೇರಿದಂತೆ ರಾಜ್ಯ ಕಾಂಗ್ರೆಸ್‌ನ ಕೆಲವು ಹಿರಿಯ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದರು.

11ನೇ ಪುಟ ನೋಡಿ

ಕಾಲ್ತುಳಿತ: ಕಿವಿಮಾತು ಹೇಳಿದ ವರಿಷ್ಠರು

ಕಾಲ್ತುಳಿತದ ಘಟನೆ ಬಗ್ಗೆ ವಿವರಣೆ ಪಡೆದ ಕಾಂಗ್ರೆಸ್ ಹೈಕಮಾಂಡ್, ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಬೇಕು ಎಂದು ಕಿವಿಮಾತು ಹೇಳಿದೆ.

'ದೆಹಲಿಯಲ್ಲಿ ನಡೆದ ಸಭೆಯಲ್ಲಿ, 'ಇಂತಹ ದುರ್ಘಟನೆಯಿಂದ ಸರ್ಕಾರದ ವರ್ಚಸ್ಸಿಗೆ ಆಗಿರುವ ಧಕ್ಕೆಯನ್ನು ಹೋಗಲಾಡಿಸಲು ಏನು ಕ್ರಮ ವಹಿಸಿದ್ದೀರಿ' ಎಂದು ವರಿಷ್ಠರು ರಾಜ್ಯ ನಾಯಕರನ್ನು ಪ್ರಶ್ನಿಸಿದರು. 'ಸರ್ಕಾರದ ತಪ್ಪೇನೂ ಇಲ್ಲ ಎಂದು ಜನರಿಗೆ ಮನವರಿಕೆ ಮಾಡಿಕೊಡುವ ಕೆಲಸವನ್ನು ರಾಜ್ಯದ ಹಿರಿಯ ನಾಯಕರು ಮಾಡುತ್ತಿದ್ದಾರೆ' ಎಂದು ನಾಯಕರು ಉತ್ತರಿಸಿದರು' ಎಂದು ಗೊತ್ತಾಗಿದೆ.

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಿದ್ದರಾಮಯ್ಯ, 'ಕಾಲ್ತುಳಿತ ಘಟನೆಯ ಬಳಿಕ ಸರ್ಕಾರ ತೆಗೆದುಕೊಂಡ ಕ್ರಮಗಳು ಸಮರ್ಪಕವಾಗಿವೆ ಎಂದು ವರಿಷ್ಠರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ' ಎಂದು ತಿಳಿಸಿದರು.

ಕಾಲ್ತುಳಿತ ಘಟನೆಯ ತನಿಖೆಗೆ ಜಿಲ್ಲಾಧಿಕಾರಿಯ ನೇತೃತ್ವದಲ್ಲಿ ಮ್ಯಾಜಿಸ್ಟೀರಿಯಲ್ ತನಿಖೆ, ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ನೇತೃತ್ವದ ಏಕಸದಸ್ಯ ಆಯೋಗ ರಚಿಸಿ ನ್ಯಾಯಾಂಗ ತನಿಖೆ, ಐವರು ಪೊಲೀಸ್ ಅಧಿಕಾರಿಗಳ ಅಮಾನತು, ಗುಪ್ತಚರ ಇಲಾಖೆಯ ಮುಖ್ಯಸ್ಥರ ಬದಲಾವಣೆ, ರಾಜಕೀಯ ಕಾರ್ಯದರ್ಶಿಯ ಬದಲಾವಣೆಯಂತಹ ಕ್ರಮಗಳ ಬಗ್ಗೆ ವರಿಷ್ಠರಿಗೆ ವಿವರಿಸಿದ್ದೇವೆ. ಏಕಸದಸ್ಯ ಆಯೋಗದ ತನಿಖಾ ವರದಿಯನ್ನು ಆಧರಿಸಿ, ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಅವರು ವಿವರಿಸಿದರು. 'ಕಾಲ್ತುಳಿತ ಘಟನೆಯ ಬಗ್ಗೆ ವರಿಷ್ಠರಿಗೆ ಸಂಪೂರ್ಣ ಮಾಹಿತಿ ನೀಡಿ ಸತ್ಯಾಸತ್ಯತೆ ವಿವರಿಸಿದ್ದೇವೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೆ.ಸಿ. ವೇಣುಗೋಪಾಲ್ ಪ್ರತಿಕ್ರಿಯಿಸಿ, 'ಪ್ರತಿಯೊಂದು ಜೀವದ ಬಗ್ಗೆಯೂ ಕಾಳಜಿ ವಹಿಸುತ್ತೇವೆ. ಒಂದು ದುರದೃಷ್ಟಕರ ಘಟನೆ ಸಂಭವಿಸಿದೆ. ಏನಾಯಿತು ಎಂಬುದನ್ನು ನಿಖರವಾಗಿ ಕಂಡುಹಿಡಿಯಲು ಕರ್ನಾಟಕ ಸರ್ಕಾರ ಈಗಾಗಲೇ ನ್ಯಾಯಾಂಗ ತನಿಖೆಗೆ ಆದೇಶಿಸಿದೆ' ಎಂದರು.

'ಈ ವಿಷಯದಲ್ಲಿ ಸ್ಪಷ್ಟವಾದ ಜನಪರ ಮನೋಭಾವ ಇರಬೇಕು ಎನ್ನುವುದು ಪಕ್ಷದ ನಿಲುವು' ಎಂದೂ ಅವರು ಒತ್ತಿ ಹೇಳಿದರು.

ದೇಶದ ಜನಸಂಖ್ಯೆ 146 ಕೋಟಿ

ಭಾರತದಲ್ಲಿ ಫಲವಂತಿಕೆ ದರದ ಕುಸಿತ: ವಿಶ್ವಸಂಸ್ಥೆ ವರದಿ

ನವದೆಹಲಿ (ಪಿಟಿಐ): ಭಾರತದ ಒಟ್ಟು ಜನಸಂಖ್ಯೆ 146 ಕೋಟಿ ತಲುಪಿದೆ ಎಂದು ಜನಸಂಖ್ಯೆಯ ಕುರಿತು ವಿಶ್ವಸಂಸ್ಥೆ ಬಿಡುಗಡೆಗೊಳಿಸಿದ ವರದಿ ತಿಳಿಸಿದೆ.


ಭಾರತವು ವಿಶ್ವದಲ್ಲೇ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗಿ ಮುಂದುವರಿಯಲಿದೆ ಎಂದು ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ (ಯುಎನ್‌ಎಫ್‌ಪಿಎ) ಬಿಡುಗಡೆ ಮಾಡಿರುವ '2025ರ ವಿಶ್ವ ಜನಸಂಖ್ಯಾ ಸ್ಥಿತಿಗತಿ' ವರದಿ ಹೇಳಿದೆ.

ದೇಶದಲ್ಲಿ ಫಲವಂತಿಕೆ ದರ (ಫರ್ಟಲಿಟಿ ರೇಟ್) 1.9ಕ್ಕೆ ಕುಸಿತ ಕಂಡಿದೆ ಎಂಬುದನ್ನು ವರದಿ ಬಹಿರಂಗಪಡಿಸಿದೆ. ಜನಸಂಖ್ಯೆಯ ಮಟ್ಟ ಕಾಯ್ದುಕೊಳ್ಳಲು 2.1ರಷ್ಟು ಫಲವಂತಿಕೆ ದರಇರಬೇಕು.

ಸರಾಸರಿಯಾಗಿ ಭಾರತೀಯ ಮಹಿಳೆಯರು ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ಜನಸಂಖ್ಯೆಯ ಮಟ್ಟವನ್ನು ಕಾಪಾಡಿಕೊಳ್ಳಲು ಅಗತ್ಯವಿರುವುದಕ್ಕಿಂತ ಕಡಿಮೆ ಮಕ್ಕಳನ್ನು ಹೊಂದಿದ್ದಾರೆ ಎಂದು ವರದಿ ಹೇಳಿದೆ.

ಈ ವರದಿಯು ಜನಸಂಖ್ಯಾ ಸ್ವರೂಪ, ಫಲವಂತಿಕೆ ಮತ್ತು ಜನರ ಜೀವಿತಾವಧಿಯಲ್ಲಿನ ಪ್ರಮುಖ ಬದಲಾವಣೆಗಳನ್ನು ಬಹಿರಂಗಪಡಿಸಿದ್ದು, ಜನಸಂಖ್ಯಾ ಸ್ವರೂಪದಲ್ಲಿ ಒಟ್ಟಾರೆ ಪರಿವರ್ತನೆಯಾಗಿರುವುದನ್ನು ಸೂಚಿಸುತ್ತದೆ.

11ನೇ ಪುಟ ನೋಡಿ




- 1960ರಲ್ಲಿ ದೇಶದ ಜನಸಂಖ್ಯೆ 43 ಕೋಟಿಯಷ್ಟಿದ್ದಾಗ ಮಹಿಳೆಯರು ಸರಾಸರಿ ಆರು ಮಕ್ಕಳನ್ನು ಹೊಂದಿರುತ್ತಿದ್ದರು
- ದೇಶದಲ್ಲಿ ಈಗ ಮಹಿಳೆಯರು ಸರಾಸರಿ ಎರಡು ಮಕ್ಕಳನ್ನು ಹೊಂದಿದ್ದಾರೆ

ವರದಿಯಲ್ಲೇನಿದೆ?

- ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ ಭಾರತವು 146.39 ಕೋಟಿ ಜನಸಂಖ್ಯೆಯೊಂದಿಗೆ ವಿಶ್ವದಲ್ಲೇ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಆಗಿದೆ
- ಸುಮಾರು 40 ವರ್ಷಗಳ ಬಳಿಕ ದೇಶದ ಜನಸಂಖ್ಯೆ 170 ಕೋಟಿಗೆ ತಲುಪಲಿದೆ. ಆ ಬಳಿಕ ಜನಸಂಖ್ಯೆ ಕುಸಿತ ಪ್ರಾರಂಭವಾಗುವ ನಿರೀಕ್ಷೆಯಿದೆ

ಯುವಶಕ್ತಿ...

ಭಾರತದಲ್ಲಿ ಶಿಶು ಜನನ ಪ್ರಮಾಣ ಕಡಿಮೆಯಾಗುತ್ತಿದ್ದರೂ, ಯುವ ಜನರ ಸಂಖ್ಯೆ ಗಮನಾರ್ಹವಾಗಿಯೇ ಇದೆ ಎಂದು ವರದಿ ತಿಳಿಸಿದೆ.



₹100 ಕೋಟಿ ಮೌಲ್ಯದ ನಿವೇಶನ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮುಡಾ) ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು ₹100 ಕೋಟಿ ಮೌಲ್ಯದ 92 ನಿವೇಶನಗಳನ್ನು ಸೋಮವಾರ ಮುಟ್ಟುಗೋಲು ಹಾಕಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿಯವರು ಕಳೆದುಕೊಂಡ ಜಮೀನಿಗೆ ಪರಿಹಾರಾತ್ಮಕವಾಗಿ14 ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದ ತನಿಖೆ ಆರಂಭಿಸಿದ್ದ ಇ.ಡಿಯು, 1,000ಕ್ಕೂ ಹೆಚ್ಚು ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವುದನ್ನು ಪತ್ತೆ ಮಾಡಿತ್ತು. ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ಅವರ ಅವಧಿಯಲ್ಲಿ, ಅಕ್ರಮ ಹಂಚಿಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆದಿವೆ ಎಂದು ಇ.ಡಿ ಹೇಳಿತ್ತು.

ಮುಡಾ ಪ್ರಕರಣ

ಪ್ರಾಧಿಕಾರವು ದಶಕಗಳ ಹಿಂದೆ ಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ ಪರಿಹಾರ ನೀಡದಿದ್ದ ಮತ್ತು ಪರಿಹಾರದ ನಿವೇಶನಗಳು ಹಂಚಿಕೆ ಆಗದೇ ಇರುವ ಪ್ರಕರಣಗಳನ್ನೇ ಅಕ್ರಮಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ರಿಯಲ್ ಎಸ್ಟೇಟ್ ಉದ್ಯಮಿಗಳು ಮೂಲ ಮಾಲೀಕರಿಂದ ಜಿಪಿಎ ಮಾಡಿಸಿಕೊಂಡು, ಮುಡಾಗೆ ಪರಿಹಾರ ಅರ್ಜಿ ಸಲ್ಲಿಸುತ್ತಿದ್ದರು. ಮುಡಾವು ಅದಕ್ಕೆ ನಿವೇಶನಗಳನ್ನು ಹಂಚಿಕೆ ಮಾಡುತ್ತಿತ್ತು ಎಂದು ಇ.ಡಿ ಮೂಲಗಳು ತಿಳಿಸಿವೆ.

11ನೇ ಪುಟ ನೋಡಿ

ಕಾಲ್ತುಳಿತ: ವರದಿಗೆ 12ರ ತನಕ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌ಸಿಬಿ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾದ ಕಾಲ್ತುಳಿತದಲ್ಲಿ 11 ಮಂದಿ ಸಾವನ್ನಪ್ಪಿದ ಘಟನೆಗೆ ಸಂಬಂಧಿಸಿದ ವಸ್ತುಸ್ಥಿತಿ ವರದಿಯನ್ನು ಇದೇ 12ಕ್ಕೆ ಮುಚ್ಚಿದ ಲಕೋಟೆಯಲ್ಲಿ ನೇರವಾಗಿ ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ವಸ್ತುಸ್ಥಿತಿ ವರದಿಯನ್ನು ಇಂದು ಸಲ್ಲಿಸಲಾಗಿಲ್ಲ. ಘಟನಾನಂತರದ ಬೆಳವಣಿಗೆಗಳಲ್ಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಲಾಗಿದೆ' ಎಂದರು.

6ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ರಸ್ತೆ ಗುಂಡಿ: ತ್ವರಿತವಾಗಿ ಮುಚ್ಚಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಬೇಕು ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳ ಸಭೆಯಲ್ಲಿ ಮಂಗಳವಾರ ಮಾತನಾಡಿದ ಅವರು, ಮುಖ್ಯ ರಸ್ತೆ, ಉಪ ಮುಖ್ಯರಸ್ತೆಗಳಿಗೆ ಮೊದಲ ಆದ್ಯತೆ ನೀಡಿ, ಮಳೆ ಆರಂಭವಾಗುವುದಕ್ಕೆ ಮುನ್ನವೇ ಎಲ್ಲ ಗುಂಡಿಗಳನ್ನು ಮುಚ್ಚಬೇಕು ಎಂದು ಆದೇಶಿಸಿದರು.

ಮಳೆ ಬೀಳುವ ಸಂದರ್ಭದಲ್ಲೂ ಕೋಲ್ಡ್ ಮಿಕ್ಸ್ ಬಳಸಿಕೊಂಡು ರಸ್ತೆ ಗುಂಡಿ ಮುಚ್ಚಬೇಕು. ಡಾಂಬರೀಕರಣ ವಾಗುತ್ತಿರುವ ರಸ್ತೆಗಳಿಗೆ ತ್ವರಿತಗತಿಯಲ್ಲಿ ಕಾಮಗಾರಿ ಮುಗಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಕೆ.ಆರ್. ಪುರದ ಸಾಯಿ ಲೇಔಟ್ ಜಲಾವೃತ ವಾಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಈಗಾಗಲೇ ಜಾಕ್ ವೆಲ್ ನಿರ್ಮಾಣ ಮಾಡಿದ್ದು, ಅದರ ಮೂಲಕ ನೀರನ್ನು ಹೊರ ಹಾಕುವ ವ್ಯವಸ್ಥೆ ಮಾಡಲಾಗಿದೆ. ಅದರ ಜೊತೆಗೆ ಪಾಲಿಕೆ ವತಿಯಿಂದ ಪಂಪ್ ಸೆಟ್‌ಗಳನ್ನು ಸ್ಥಳದಲ್ಲಿ ಶಾಶ್ವತವಾಗಿಟ್ಟು, ಜಲಾವೃತವಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

‘ಸಣ್ಣ ಅರಣ್ಯ ನಿರ್ಮಾಣಕ್ಕೆ ಕ್ರಮವಹಿಸಿ’

ಸಾರ್ವಜನಿಕ ಸ್ಥಳಗಳನ್ನು ಗುರುತಿಸಿ ಸಣ್ಣ ಅರಣ್ಯಗಳನ್ನು ನಿರ್ಮಾಣ ಮಾಡಲು ಕ್ರಮ ವಹಿಸಬೇಕು. ಈ ಸಂಬಂಧ ಸ್ಥಳಗಳನ್ನು ಗುರುತಿಸಿದ ಬಳಿಕ ಸಣ್ಣ ಅರಣ್ಯ ನಿರ್ಮಾಣಕ್ಕೆ ಕ್ರಮ ವಹಿಸಬೇಕು. ಕಸದ ಸಮಸ್ಯೆ, ಬೀದಿದೀಪ, ರಸ್ತೆ ಗುಂಡಿ ಸೇರಿದಂತೆ ಇನ್ನಿತರೆ ವಿಷಯಗಳ ಕುರಿತು ಸಹಾಯವಾಣಿ ಸಂಖ್ಯೆ, ವಾಟ್ಸ್‌ಆ್ಯಪ್‌ಗೆ, ಸಹಾಯ 2.0ಗೆ ಬರುವ ದೂರುಗಳಿಗೆ ಸ್ಪಂದಿಸಬೇಕೆಂದು ಮಹೇಶ್ವರ್ ರಾವ್ ಸೂಚಿಸಿದರು.

‘ಹೊಸ ತಂತ್ರಜ್ಞಾನ ಬಳಸಿ ಗಣತಿ’

ಬೆಂಗಳೂರು: ‘ಮರು ಜಾತಿ ಜನಗಣತಿ ನಡೆಸಲು ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿರುವುದು ಸ್ವಾಗತಾರ್ಹ. ಹಿಂದಿನ ಲೋಪದೋಷಗಳನ್ನು ಸರಿಪಡಿಸಿಕೊಂಡು ನೂತನ ತಂತ್ರಜ್ಞಾನ ಅಳವಡಿಸಿಕೊಂಡು ಗಣತಿ ನಡೆಸಬೇಕು’ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ತಿಳಿಸಿದೆ.

ಈ ಕುರಿತು ಹೇಳಿಕೆ ನೀಡಿರುವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು, ‘ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ವೈಜ್ಞಾನಿಕವಾಗಿಲ್ಲ ಮತ್ತು ಪಾರದರ್ಶಕವಾಗಿಲ್ಲ ಎಂದು ಆಧಾರ ಸಮೇತವಾಗಿ ಮಹಾಸಭಾ ಪ್ರತಿಭಟಿಸುತ್ತಲೇ ಬಂದಿದೆ’ ಎಂದು ಹೇಳಿದ್ದಾರೆ.

‘ಜಾತಿ ಜನಗಣತಿಗೆ ಮಹಾಸಭಾದ ವಿರೋಧವಿಲ್ಲ. ಆದರೆ, ವೈಜ್ಞಾನಿಕವಾಗಿ, ಸಮಗ್ರವಾಗಿ, ಆಧಾರ್ ಜೋಡಣೆ, ಎಐ ತಂತ್ರಜ್ಞಾನ ಬಳಸಿಕೊಂಡು ಅತ್ಯಾಧುನಿಕ ಪದ್ಧತಿ ಮೂಲಕ ಮರು ಗಣತಿ ನಡೆಸಬೇಕು ಎಂದು ಒತ್ತಾಯಿಸುತ್ತಲೇ ಬಂದಿದ್ದೇವೆ’ ಎಂದು ತಿಳಿಸಿದ್ದಾರೆ.

‘ಗೊಂದಲ ಪರಿಹಾರವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮರು ಜಾತಿಗಣತಿ ಮಾಡಲು ಮುಂದಾಗಿರುವ ಸರ್ಕಾರದ ನಿರ್ಧಾರದಿಂದ ಗೊಂದಲಗಳು ಬಗೆಹರಿಯಬೇಕು, ನಿಗದಿತ ಕಾಲಾವಧಿಯಲ್ಲಿ ಸಮೀಕ್ಷೆ ಮುಗಿಯಬೇಕು’ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅಭಿಪ್ರಾಯಪಟ್ಟರು.

‘ಹಿಂದುಳಿದ ವರ್ಗಗಳ ಆಯೋಗ ಈ ಹಿಂದೆ ನಡೆಸಿದ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ಸರ್ಕಾರ ತಾತ್ವಿಕವಾಗಿ ಒಪ್ಪುತ್ತದೆ ಎಂದು ಹೇಳಿತ್ತು. ಆದರೆ, ಮಠಾಧೀಶರು, ಧಾರ್ಮಿಕ ಮುಖಂಡರು, ವಿವಿಧ ಸಂಘಟನೆಗಳು, ಪ್ರಮುಖ ಜಾತಿ ಸಂಘಟನೆಗಳು ಮರು ಜಾತಿಗಣತಿಗೆ ಒತ್ತಾಯಿಸಿದ್ದರು. ಈ ಹಿಂದೆ ಮಾಡಿದ ಜಾತಿ ಗಣತಿಯಲ್ಲಿ ಹಲವು ಗೊಂದಲಗಳಿವೆ ಎಂದು ಆಕ್ಷೇಪಿಸಿದ್ದವು. ಮರು ಜಾತಿಗಣತಿಯಿಂದ ಎಲ್ಲವೂ ಸರಿಹೋಗುವ ವಿಶ್ವಾಸವಿದೆ’ ಎಂದು ಹೇಳಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕಾಂಗ್ರೆಸ್ ವರಿಷ್ಠರಿಗೆ ಮರು ಜಾತಿಗಣತಿಗೆ ನಿರ್ಣಯಿಸಿ ಅಭಿನಂದನಾರ್ಹ ಕೆಲಸ ಮಾಡಿದ್ದಾರೆ’ എಂದು ತಿಳಿಸಿದರು.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123.
ಇ–ಮೇಲ್: nelamangala.pa@gmail.com Phone: 9663046622

ಸಂಖ್ಯೆ: ನೆಯೋಪ್ರಾ:CLU:25:2025-26 ದಿನಾಂಕ: 04–06–2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಟಿ.ಬೇಗೂರು ಗ್ರಾಮವು** “ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ” ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ:01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **“ವ್ಯವಸಾಯ”** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ‘ಕೈಗಾರಿಕೆ’** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **“ವ್ಯವಸಾಯ” ವಲಯದಿಂದ “ಕೈಗಾರಿಕೆ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1. ಶ್ರೀ ಎನ್.ಬಿ.ನಾಗರಾಜು ಬಿನ್ ಎನ್.ಸಿ.ಬಸವರಾಜ 2. ಎನ್.ಬಿ.ಮೋಹನ್ ಬಿನ್ ಎನ್.ಸಿ.ಬಸವರಾಜು	ನೆಲಮಂಗಲ/ ಕಸಬಾ/ ಟಿ.ಬೇಗೂರು	207/7	02–08	ವ್ಯವಸಾಯ	ಕೈಗಾರಿಕೆ

ಷರಾ:– ಪ್ರಶ್ನಿತ ಜಮೀನುಗಳಲ್ಲಿ **ಕೈಗಾರಿಕೆ** ಚಟುವಟಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಸದರಿ ಚಟುವಟಿಕೆಯಿಂದಾಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **“ವ್ಯವಸಾಯ ವಲಯದಿಂದ ಕೈಗಾರಿಕೆ ಉದ್ದೇಶಕ್ಕೆ”** ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾಪ್ರ/1162/2025–26

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

ESQUIRE
WANTED
SALES EXECUTIVE
(IMMEDIATE APPOINTMENT)
LOCATION: BENGALURU
Minimum 3 years experience in plastic house ware items.
ESQUIRE MULTIPLAST PVT. LTD. BENGALURU
93886 18681
dk@esquireplastics.com
www.esquireworld.com

Engg/ Production Technical

Engineers Recruitment
Draftsmen: BE / Diploma Civil (3 to 4 years Experienced) - 6 Nos
Site Engineers: BE / Diploma Civil (Frehers / Experienced) - 10 Nos
Shiprama Consulting Engineers Pvt. Ltd. Bangalore.
E-mail id: shiprama888@gmail.com
Contact No: 9964339888 / 9742765165

STAR INFRATECH
A Leading Construction company in Karnataka looking for talent acquisition for the following positions

TECHNICAL
- **PROJECT MANAGER** 15-20 Years’ Experience (Layouts/Road/Canal) - 5 Positions
- **DEPUTY PROJECT MANAGER** 12-15 Years’ Exp (Layouts/Road/Canal) - 5 Positions
- **ASST PROJECT MANAGER** 8-12 Years’ Exp (Layouts/Road/Canal) - 5 Positions
- **SR. ENGINEER (QS)** 8-15 Years’ Exp (Layouts/Road/Canal) - 10 Positions
- **SR. ENGINEER (QC)** 8-12 Years’ Exp (Layouts/Road/Canal) - 10 Positions
- **JR. ENGINEER (QC** 5-8 Years’Exp (Layouts/Road/Canal) - 10 Positions
- **SR. ENGINEERS** 5-8 Years’ Exp (Layouts/Road/Canal) - 10 Positions
- **ENGINEER** 3-5 Years’ Exp (Layouts/Road/Canal) - 10 Positions
- **SURVEYORS** Above 5 Years’ Experience (Layouts/Road/Canal) -10 Positions

QUALIFICATION: - BE/B.TECH/DCE

NON-TECHNICAL
- **SR. EXECUTIVE (ACCOUNTS)** 8-10 Years’ Exp (Construction Industry)-10 Positions
- **STORE MANAGER** 10-15 Years’ Exp (Construction Industry)-05 Positions
- **EXECUTIVE (STORES)** 6-10 Years’ Exp (Construction Industry)-05 Positions
- **SR.SAFETY OFFICER** 8-10 Years’ Exp (Construction Industry)-05 Positions
- **SAFETY ENGINEER** 5-8 Years’ Exp (Construction Industry)-05 Positions

Experience in handling major projects highly preferable. Location all over Karnataka.
Walk In Interview:
Date: 17.06.2025 (Timings 11 AM to 4 PM)
#177,6th Main, KEB Layout, Sanjay Nagar, Bangalore-560094.
Ph:+91 80 2341 2304/05
Email Id: hr.starinfratech09@gmail.com

THIRUMALA VIDYA NIKETHAN SCHOOL
#29, G.D Park Extn, Vyalikaval, Bangalore - 560003
Ph: 080-23447560 / 23447570, Email: tvns1984@gmail.com
WALK – IN INTERVIEW on 16-06-2025
For the post of Social Science, Computer P.E.Teacher, Kannada, English (FL), Maths, Science, Sanskrit Teachers - for Primary & High School. Nursery trained teachers are also required.
Essential Qualification : Graduate/Post Graduate with B.Ed, B.PEd. Interested and eligible candidates may attend the walk - in Interview between 9:00 am to 12:15 pm on 16/6/2025 in the School premises, along with filled application form, attested copies of testimonials & bio-data.
Principal
Thirumala Vidya Nikethan School

SRI LAL BAHADUR SHASTRY MEMORIAL HIGH SCHOOL
No.19/01, 1st Cross, Cholurpalya, Magadi Road Post, Bengaluru-560023.
WANTED
Part time Teacher to teach English Medium High School Science (CBZ) and Maths Subject
Daily Between : 03-30 p.m. to 06-00 p.m. (Except on Saturday).
Contact between 10-00 a.m. to 04-00 p.m.
Sd/- Secretary
Mobile Number : 9449976761

Sahakara Bhishma Shri K. H. Patil Memorial Trust's
K. H. PATIL SCHOOL OF LAW, BENGALURU
Affiliated to Karnataka State Law University, Hubballi / Approved by Bar Council of India
Grameena Bhavan, #6, 13th Cross Road, Jnanabharathi 2nd Block, BDA Layout, Amma Ashram Road, Bengaluru-56.
Email: khpsl.blr@gmail.com | website: https://www.khplawschool.in
Contact No: 9035354809
Applications invited for
ASST. PROFESSOR
in Law, Political Science, Commerce, Kannada & English & Assistant Librarian
Submit Application with Resume, marks cards and degree certificates to the **Principal, K. H. Patil School of Law, Bengaluru**, in-person, by post, or by e-mail on or **before** 20/06/2025.
Sd/- Chairman Sd/- Hon. Secretary

MORNING STAR English School Ramachandrapuram (Rajajinagar Entrance) Requires B.Sc Computer Science Lady Teacher to handle Classes and Administration Work. Contact: 9845018480

WANTED TEACHERS FOR KANNADA ABDUL BARI'S HIGH SCHOOL Near Coles Park, Frazer Town Whatsapp 9353111888

PRERANA GLOBAL ACADEMY
WE ARE HIRING!
TEACHERS
- Aged between 21 & 50 who can Speak English Fluently
- Ready to relocate & Teach Spoken English to School Students anywhere in Karnataka
- Good Remuneration
- Free Training
- Free Accommodation Provided

Send your Resume through Preranatgs1@gmail.com
WhatsApp: +91 78998 06077

JYOTI NIVAS COLLEGE AUTONOMOUS
Koramangala, Bangalore-560 095
Ph: 080-25530137
Fax: 25533886
www.jyotinivas.org
REQUIRES
Assistant Professors
In Psychology, Computer Science, Mathematics French, English, History & Placement Officer.
Qualification: PG First Class with NET / KSET Ph.D from a reputed University.
Apply to the Principal Jyoti Nivas College Autonomous
info@jyotinivas.org on or before 14-06-2025

WANTED PHYSICS/ Social/ English/ Science, Computer Teachers, salary 25k to 35k. MATHA'S INTERNATIONAL SCHOOL, 11 km HOSUR MAIN ROAD B,lore-68. Call 9449814917/ 8277258609

Teachers/ Professors

REQUIRED TEACHERS. Aditya Public High School, #607, 21st cross, LaxmanRaoNagar, Koramangala 1st stage, Vivekanagar Post, Bangalore-47. Required Qualified TEACHERS for Primary & High School, Qualification: SSLC, PUC-NTT, D.Ed, B.Ed, Freshers or Experienced with attractive salary. Contact: 8073093749/ 9481255196.

NTT, SCIENCE, Maths, English, Kannada, Hindi, Social Science, Computer Science, PE Teacher for reputed CBSE School. High salary offered. 9449835744/ 9535601743.

EUROKIDS SCHOOL, Laggere, Bengaluru requires TRAINED TEACHERS for Pre Primary. Contact: 9513333186 eurokids.laggere@gmail.com

DRAWING, KANNADA TEACHER Wanted for immediate appointment Contact with Resume & Certificates, Principal CAMLIN ENGLISH SCHOOL, 4th Cross, Near 7th Main Bus Stop, Hampinagar, Bangalore-560104. Phone: 080-23301363

TEACHER REQUIRED for Social Studies, Kannada and Scouts and Guides, contact whatsapp 9901501185 and email kenmoreschool@gmail.com

Manager

WANTED OPERATIONS MANAGER
(DEFENCE PERSONNEL CAN ALSO APPLY)
Committed and experienced manager able to oversee and supervise the repairs, maintenance and operations of the college. Co-ordinate with vendors, service providers and contractors.
E-Mail cbbhandarijaincollege@gmail.com
Ph: 8951556740

Drivers

DRIVERS WANTED with Yellow Badge and Good Experience Preferred Staying in and around Basavanagudi: 9019282328

HRD & Admin

WANTED FIELD / recruitment officers for a reputed Facilities & Security Management company. Salary-35K-50K Contact - 8050290580/8310882699

Hotel

WANTED IMMEDIATELY MANAGERS, COOKS, ASSISTANTS, CLEANERS, WAITERS, CASHIERS Very Good Salary. Gents/Ladies Walkin: UNCLE'S KITCHEN RESTAURANTS, UNCLE'S STAY HOMES Call: 99000-54462

Accounts & Finance

LEADING TIMBER Industry Kumbalgodu Near Mysore Road; Requires: Lady Accountant, Sales Man, above 5 years experience, Minimum Degree; Mob: 9886465289

REAL ESTATE SELLING

Commercial Building

Chamarajpet

SALE: COMMERCIAL Complex (5 Floors) Chamarajpet, Mysore Road, Site 5296 Sft. Construction (without Beams) 19,000+.Sft. Call: 9341260793.

Sites

Mathikere

FOR SALE BDA site 30X45 west facing Residential property in Gokula Ist-stage, I phase, Bengaluru 560054 opp. Raghavendraswamy Mutt, contact: 9740016633, 9448031007, 9341122514

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

VFM HONDA adjoining Furnished Office at 100 Pai Layout, Old Madras Road, 6200 sqft 04 car parks 30 2W parks with 105 WorkStations @ 60/- per sqft. Call 9980450000

Flats

PRIME GUEST House /staff quarters Space for Lease in Jaya Mahal extension, BangaloreLocated in a peaceful and central area, this new building is ideal for corporates, PSUs, and large institutions to house their guests or staff.Available•2 spacious 3-bedroom apartments•1 elegant 2-bedroom apartment•Adequate parking and modern lift facilitiesReach out now for more details.ph 9848128438

PERSONAL

Change of Name

I, MAMATA. S.N, residing at Bengaluru-16 have changed my name as MAMATA NAKKARAGUNDI, vide affidavit dated 10/06/2025 before Notary K.S. Bammappanavar, Bengaluru

MIR THAFAZUL HUSSAIN S/O MIR KHASIM ALI (late) residing at Alipur Gauribidanur taluk Chikkaballapur district karnataka have changed my name to MIR TAFAZUL HUSSAIN vide affidavit dated 10.06.2025 before notary Muniswamy gowda Gauribidanur.

I, UMESH S/o Annappa have changed my name to UMESH DIGGE vide affidavit dated: 10/6/2025 Before Notary Shreeshail B.Gobbani Bangalore.

EDUCATION CORNER

RV Institute of Management
Approved by AICTE, Accredited by NAAC with ‘A+’grade | Autonomous Institution Affiliated to Bengaluru City University
Go,change the world
Autonomous Institution of Excellence

Register for **PGCET/KMAT 2025**
one week intensive coaching for **MBA** now & get admission in your dream institution..
Mode of coaching **Hybrid** (Offline in the Campus & Online platform - Zoom)
Date: 13th June to 19th June 2025 (One Week)
Registration fee **Rs.500/-** (Includes certificate & study material)
Scan QR code below to register online & pay the fee
SCAN ME
Time 9.00am to 2.00pm (on all days)
PGCET Code B252

Placement Summary for 2022-2024	
Total no. of Companies	57
Total No. of Students in the college	180
Total No. of Students not opted / not eligible for Placements	12
Total No. of Students opted for Placements	168
Total No. of Students Placed	151
Percentage	90%
Highest package	11.5 L/A
Average package	6.27 L/A

Top 15 Rankers who join our institution from PGCET (within 100 Rank) will be given a merit scholarship of Rs 50,000/-.
Scholarship of Rs 50,000/- to Top 15 Academic Performers in MBA 1st year (above 7.0 CGPA)
Please call: 90089 60025 / 080 42540300, for more information
E-mail : rvimpgcet@gmail.com Website : www.rvim.edu.in

RAMAN GROUP OF INSTITUTIONS
12, Magadi Main Road, Kamakshipalya, (Near Sumanahalli Bus Stop) Bengaluru-560079
Website: www.ramaneducation.org

RAMAN P.U. COLLEGE
In association with Deeksha Vedantu
Science + Integrated ◆ Commerce
Contact: 9686162639 / 9686162637

RAMAN DEGREE COLLEGE
BBA | BCom | BCA
Contact: 9686162639 / 9686162637

RAMAN POLYTECHNIC & ITI
◆ Civil ◆ Mechanical ◆ Electrical ◆ Electronics ◆ Computer Science ◆ Automobile ◆ Fitter ◆ Electronic Mechanic ◆ Electrician
Contact: 6360903500 / 8050066771

RAMAN SCHOOL OF NURSING - GNM
Contact: 8050488623 / 8880959499

CALIFORNIA PUBLIC SCHOOL
ICSE & State Syllabus. Nursery to X Standard
Contact: 9481305504 / 8197104255

RMN-25602

EDUCATIONAL

Special Courses

PHYSICS FACULTY cum Project Promotor-IITJAM, MSc/PhD, Malleswaram. Contact- centreforphysics001@gmail.com

'ಜನಾಕ್ರೋಶ ಯಾತ್ರೆ' ತಡೆಗೆ ಬಿಜೆಪಿ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಕ್ಷೇತ್ರದ ಅಭಿವೃದ್ಧಿ ಕಡೆಗಣಿಸಿರುವುದರ ವಿರುದ್ಧ ಮಂಗಳವಾರ ಹಮ್ಮಿಕೊಂಡಿದ್ದ 'ಬ್ಯಾಟರಾಯನಪುರ ಜನಾಕ್ರೋಶ ಯಾತ್ರೆ' ತಡೆದಿರುವುದನ್ನು ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ ಖಂಡಿಸಿದ್ದಾರೆ.

'ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ ನೀತಿ, ತೆರಿಗೆ ಹೆಚ್ಚಳ, ದುರಾಡಳಿತ, ಭ್ರಷ್ಟಾಚಾರ, ಸ್ವಜನಪಕ್ಷಪಾತದ ವಿರುದ್ಧ ಜೂನ್ 10ರಂದು 'ಬ್ಯಾಟರಾಯನಪುರ ಜನಾಕ್ರೋಶ ಯಾತ್ರೆ'ಯ ಹೆಸರಿನಲ್ಲಿ, ಬೃಹತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕುರಿತು ಸ್ಥಳೀಯ ಬಿಬಿಎಂಪಿ ಕಚೇರಿಗೆ ಮನವಿ ಸಲ್ಲಿಸಲು ತೆರಳುವಾಗ, ಪೊಲೀಸರು ಹಾಗೂ ಕೆಲವು ಅಧಿಕಾರಿಗಳು ತಡೆದಿದ್ದಾರೆ' ಎಂದು ಹೇಳಿದ್ದಾರೆ.

'ಜನಸಾಮಾನ್ಯರ ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವ ಪ್ರಯತ್ನವಾಗಿದೆ. ಈ ಮೂಲಕ ಜನರ ಸಮಸ್ಯೆಗಳನ್ನು ಸರ್ಕಾರಕ್ಕೆ ತಿಳಿಸದಂತೆ ತಡೆಹಿಡಿಯುವ ವ್ಯವಸ್ಥಿತ ತಂತ್ರ ನಡೆಸಲಾಗುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.

'ಕ್ಷೇತ್ರದ ಶಾಸಕರು ಜನರ ಆಕ್ರೋಶವನ್ನು ಕೇಳಿಸಿಕೊಳ್ಳಲು ಸಿದ್ಧರಿಲ್ಲವೇ? ಅಥವಾ ಕೇಳಿಸಿಕೊಳ್ಳುವುದರಿಂದ ತಪ್ಪಿಸಿಕೊಳ್ಳಲು ಹೀಗೆಲ್ಲ ಷಡ್ಯಂತ್ರ ಮಾಡಲಾಗುತ್ತಿದೆಯೇ? ಎಂಬುದು ಸೇರಿದಂತೆ ಹಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಶಾಸಕರು ಇವುಗಳಿಗೆಲ್ಲ ಉತ್ತರಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಹೀಗೆ ಪ್ರಶ್ನಿಸಿದ್ದಕ್ಕೆ ನನ್ನನ್ನು ಹಾಗೂ ಸ್ಥಳೀಯ ಬಿಜೆಪಿ ಮುಖಂಡರನ್ನು ಸ್ಥಳೀಯ ಪೊಲೀಸ್ ಅಧಿಕಾರಿಗಳನ್ನು ಬಳಸಿಕೊಂಡು ಗೃಹಬಂಧನದಲ್ಲಿ ಇರಿಸಲಾಗಿದೆ' ಎಂದು ದೂರಿದ್ದಾರೆ.

ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಹೇಳಿಕೆ

ಅರ್ಕಾವತಿ ನದಿ ಪುನರುಜ್ಜೀವನಕ್ಕೆ ತಜ್ಞರ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರ್ಕಾವತಿ ನದಿ ಪುನಶ್ಚೇತನ ಪ್ರಕ್ರಿಯೆ ನಡೆಯುತ್ತಿದ್ದು, ಈ ಸಂಬಂಧ ತಜ್ಞರ ಸಮಿತಿ ರಚನೆ ಜೊತೆಗೆ ಸಾರ್ವಜನಿಕ, ಖಾಸಗಿ (ಪಿಪಿಪಿ) ಸಹಭಾಗಿತ್ವದಡಿ ನದಿ ಪುನರುಜ್ಜೀವನಕ್ಕೆ ಯೋಜನೆ ರೂಪಿಸಲು ನಿರ್ಧರಿಸಲಾಗಿದೆ' ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಜಲಮಂಡಳಿ ಕೇಂದ್ರ ಕಚೇರಿಯಲ್ಲಿ ಮಂಗಳವಾರ ನದಿ ಪುನಶ್ಚೇತನ ಪಾಲುದಾರರೊಂದಿಗೆ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.

'ನಂದಿ ಬೆಟ್ಟದಿಂದ ತಿಪ್ಪಗೊಂಡನಹಳ್ಳಿ(ಟಿ.ಜಿ.ಹಳ್ಳಿ)ವರೆಗೆ 53 ಕಿ.ಮೀ ಉದ್ದ, 1400 ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಅರ್ಕಾವತಿ ನದಿಯ ಪಾತ್ರವಿದೆ. ಅರ್ಕಾವತಿ ನದಿ ಪುನಶ್ಚೇತನಕ್ಕೆ ಸರ್ಕಾರದ ಹಲವಾರು ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತಿತರರ ಪಾಲುದಾರಿಕೆಯೊಂದಿಗೆ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ' ಎಂದು ವಿವರಿಸಿದರು.

'ಎತ್ತಿನಹೊಳೆಯಿಂದ ಟಿ.ಜಿ. ಹಳ್ಳಿ ಜಲಾಶಯಕ್ಕೆ ನೀರು ಬಂದಿದ್ದರೆ ಎರಡೂ ನದಿಗಳ ನೀರನ್ನು ಮಿಶ್ರ ಮಾಡಿ ಪೂರೈಸುವ ಉದ್ದೇಶವಿತ್ತು. ಬೆಂಗಳೂರು ನಗರದಲ್ಲಿ ಉಂಟಾದ ಕೈಗಾರಿಕಾ ಬೆಳವಣಿಗೆ, ಕೈಗಾರಿಕಾ ತ್ಯಾಜ್ಯ, ಪರಿಸರ ಮಾಲಿನ್ಯ, ಒಳಚರಂಡಿಯಂತಹ ಗಂಭೀರ ಸಮಸ್ಯೆಯಿಂದ ಟಿ.ಜಿ.ಹಳ್ಳಿ ಜಲಾಶಯದ ನೀರು ಮಲಿನಗೊಂಡಿದ್ದು, ಕುಡಿಯಲು ಯೋಗ್ಯವಿಲ್ಲ. ಹೀಗಾಗಿ ಪುನಶ್ಚೇತನ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಳ್ಳುವ ಅಗತ್ಯವಿದೆ' ಎಂದು ತಿಳಿಸಿದರು.

ಸಭೆಯಲ್ಲಿ ಜಲಮಂಡಳಿಯ ಮುಖ್ಯ ಎಂಜಿನಿಯರ್, ಮೂಲಸೌಕರ್ಯ ಅಭಿವೃದ್ಧಿ ನಿಗಮದ ಸಲಹೆಗಾರರು, ಬಿಬಿಎಂಪಿ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಉನ್ನತ ಅಧಿಕಾರಿಗಳು, ಡಿಎಂಎ, ಕೆಐಎಡಿಬಿ, ಕೆಎಸ್‌ಪಿಸಿಬಿ, ಬಿಡಿಎ, ಜಲಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ, ದೊಡ್ಡಬಳ್ಳಾಪುರ, ಮಾದನಾಯಕನಹಳ್ಳಿ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಪಾನಿ ಅರ್ಥ್, ಬಯೋಮ್ ಟ್ರಸ್ಟ್, ಆರ್ಟ್ ಆಫ್ ಲಿವಿಂಗ್, ಐಐಎಸ್ಸಿ ವಿಜ್ಞಾನಿಗಳು ಉಪಸ್ಥಿತರಿದ್ದರು.

'ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ'



ವಿ.ರಾಮ್ ಪ್ರಸಾತ್ ಮನೋಹರ್

'ಐಡೆಕ್ ಸಂಸ್ಥೆ, ಈಗಾಗಲೇ ಹೆಸರಘಟ್ಟ, ಮಾದನಾಯಕನಹಳ್ಳಿ, ಬಿಬಿಎಂಪಿ ಪ್ರದೇಶದ ನದಿ ತಟದಲ್ಲಿ ಸಮಗ್ರ ಅಧ್ಯಯನ ನಡೆಸಿದ್ದು, ಪುನಶ್ಚೇತನಕ್ಕಾಗಿ ವರದಿ ಸಿದ್ಧಪಡಿಸುತ್ತಿದೆ. ಪಿಪಿಪಿ ಮಾದರಿಯಲ್ಲಿ ಅರ್ಕಾವತಿ ನದಿಯನ್ನು ಪುನರುಜ್ಜೀವನಗೊಳಿಸುವ ಯೋಜನೆ ರೂಪಿಸಲಾಗುತ್ತಿದೆ' ಎಂದು ರಾಮ್‌ಪ್ರಸಾತ್ ಮನೋಹರ್ ವಿವರಿಸಿದರು.

'ನದಿ ಪಾತ್ರದಲ್ಲಿ ಜಲಮಂಡಳಿಯ ವ್ಯಾಪ್ತಿ ಪ್ರದೇಶ ಶೇ 15ರಷ್ಟು ಇದೆ. ಪುನಶ್ಚೇತನಕ್ಕೆ ಸಂಬಂಧಪಟ್ಟಂತೆ ಹಲವು ಸ್ವಯಂ ಸೇವಾ ಸಂಸ್ಥೆಗಳು ಸಹ ಅಧ್ಯಯನ ಮಾಡಿವೆ. ಎಲ್ಲರನ್ನೊಳಗೊಂಡ ತಜ್ಞರ ಸಮಿತಿ ರಚಿಸಿ ಪುನಶ್ಚೇತನ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು' ಅವರು ತಿಳಿಸಿದರು.

ತಡೆಬೇಲಿಗೆ ಡಿಕ್ಕಿ ಹೊಡೆದು ಗರ್ಭಿಣಿ ಜೀಬ್ರಾ ಸಾವು

ಆನೇಕಲ್: ಗರ್ಭಿಣಿ ಜೀಬ್ರಾವೊಂದು ತಡೆಬೇಲಿಗೆ ಡಿಕ್ಕಿ ಹೊಡೆದು ಮೃತಪಟ್ಟಿರುವ ಘಟನೆ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಮಂಗಳವಾರ ಮುಂಜಾನೆ ನಡೆದಿದೆ.

ಮೂರೂವರೆ ವರ್ಷದ ಕಾವ್ಯಾ ಮೃತ ಜೀಬ್ರಾ. ಒಂಬತ್ತು ತಿಂಗಳ ಗರ್ಭಿಣಿ. ಕೆಲ ದಿನಗಳಲ್ಲಿಯೇ ಮರಿಗೆ ಜನ್ಮ ನೀಡಬೇಕಾಗಿತ್ತು. ಆದರೆ, ಮಂಗಳವಾರ ಮುಂಜಾನೆ 4 ಗಂಟೆ ಸುಮಾರಿನಲ್ಲಿ ಆವರಣದ ತಡೆ ಬೇಲಿಗೆ ಡಿಕ್ಕಿ ಹೊಡೆದು ಮೃತಪಟ್ಟಿದೆ.

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 9 ಜೀಬ್ರಾಗಳಿದ್ದವು. ಈ ಪೈಕಿ ಕಾವ್ಯಾ ಸಾವನ್ನಪ್ಪಿದರಿಂದ ಎರಡು ಗಂಡು, ಆರು ಹೆಣ್ಣು ಸೇರಿದಂತೆ ಎಂಟು ಜೀಬ್ರಾಗಳಿವೆ.

ಇಇ ಪ್ರದೀಪ್‌ಗೆ ₹25 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ಹಕ್ಕು ಕಾಯ್ದೆಯಂತೆ ಮಾಹಿತಿ ನೀಡದ, ಆಯೋಗದ ವಿಚಾರಣೆಗೂ ಹಾಜರಾಗದ ಬಿಬಿಎಂಪಿ ಬ್ಯಾಟರಾಯನಪುರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಪ್ರದೀಪ್ ಅವರಿಗೆ ರಾಜ್ಯ ಮಾಹಿತಿ ಆಯೋಗ ₹25 ಸಾವಿರ ದಂಡ ವಿಧಿಸಿದೆ.

ಬಸವೇಶ್ವರ ನಗರದ ನಿವಾಸಿ ರವಿಕುಮಾರ್ ಅವರು ಬ್ಯಾಟರಾಯನಪುರ ವಿಭಾಗದ ಕಚೇರಿ ವ್ಯಾಪ್ತಿಯಲ್ಲಿ ನಿರ್ವಹಿಸಿದ ಕಾಮಗಾರಿಗಳ ಪಟ್ಟಿ ನೀಡುವಂತೆ 2024ರ ಅ.25ರಂದು ಕೋರಿದ್ದರು. ಮಾಹಿತಿ ಅಧಿಕಾರಿ ಪ್ರದೀಪ್ ಮಾಹಿತಿ ನೀಡಿರಲಿಲ್ಲ. ಪ್ರಥಮ ಮೇಲ್ಮನವಿ ಪ್ರಾಧಿಕಾರದ ವಿಚಾರಣೆ ನಡೆಸಿದರೂ ಮಾಹಿತಿ ನೀಡಿರಲಿಲ್ಲ. ಅರ್ಜಿದಾರರು, ಕರ್ನಾಟಕ ಮಾಹಿತಿ ಆಯೋಗಕ್ಕೆ ದ್ವಿತೀಯ ಮೇಲ್ಮನವಿ ಸಲ್ಲಿಸಿದ್ದರು. ಮಾಹಿತಿ ಆಯುಕ್ತ ರುದ್ರಣ್ಣ ಹರ್ತಿಕೋಟೆ ಮಾರ್ಚ್ 27, ಮೇ 6ರಂದು ನಡೆಸಿದ ವಿಚಾರಣೆಗೆ ಪ್ರದೀಪ್ ಹಾಜರಾಗಿರಲಿಲ್ಲ. ಹೀಗಾಗಿ, ₹25 ಸಾವಿರ ದಂಡ ವಿಧಿಸಿದ್ದು, ಅರ್ಜಿದಾರರಿಗೆ ₹3 ಸಾವಿರ ಪರಿಹಾರ ನೀಡುವಂತೆ ಆದೇಶಿಸಿದ್ದಾರೆ.

39,789 ವಿದ್ಯಾರ್ಥಿಗಳು ಪದವಿಗೆ ಅರ್ಹ; ವಿದ್ಯಾರ್ಥಿನಿಯರೇ ಮೇಲುಗೈ

ಬೆಂಗಳೂರು ನಗರ ವಿವಿ: ಇಂದು ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸೆಂಟ್ರಲ್ ಕಾಲೇಜು ಸಭಾಂಗಣದಲ್ಲಿ ಜೂನ್ 11ರಂದು ಬೆಳಿಗ್ಗೆ 11ಕ್ಕೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ನಾಲ್ಕನೇ ಘಟಿಕೋತ್ಸವ ಆಯೋಜಿಸಲಾಗಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಗೊಂಡ ನಂತರ ವಿಶ್ವವಿದ್ಯಾಲಯದಿಂದ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆಯುತ್ತಿರುವ ಮೊದಲ ತಂಡವಾಗಿದ್ದು, 7,285 ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ 39,789 ವಿದ್ಯಾರ್ಥಿಗಳು ಪದವಿಗೆ ಅರ್ಹರಾಗಿದ್ದಾರೆ. ಇದರಲ್ಲಿ ಶೇ 58.84ರಷ್ಟು ವಿದ್ಯಾರ್ಥಿನಿಯರು ಮತ್ತು ಶೇ 41.15ರಷ್ಟು ವಿದ್ಯಾರ್ಥಿಗಳಿದ್ದಾರೆ ಎಂದು ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ.ಕೆ.ಆರ್. ಜಲಜಾ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಉಪಸ್ಥಿತರಿರುವರು. ಬಿಹಾರ ಹೈಕೋರ್ಟ್ ನ್ಯಾಯಮೂರ್ತಿ ಪಿ.ಬಿ. ಭಜಂತ್ರಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದು ಹೇಳಿದರು.

ಒಂಬತ್ತು ಮಂದಿ ಪಿಎಚ್.ಡಿ. ಪದವಿಗೆ ಅರ್ಹರಾಗಿದ್ದಾರೆ. ಇದರಲ್ಲಿ ಗಣಿತದಲ್ಲಿ ಆರು, ರಸಾಯನ ವಿಜ್ಞಾನದಲ್ಲಿ ಒಬ್ಬರು ಮತ್ತು ಶಿಕ್ಷಣ ವಿಷಯದಲ್ಲಿ ಇಬ್ಬರು ಪಿಎಚ್.ಡಿ ಪದವಿ ಸ್ವೀಕರಿಸಲಿದ್ದಾರೆ.

ಘಟಿಕೋತ್ಸವದಲ್ಲಿ 64 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಮತ್ತು ನಗದು ಬಹುಮಾನ ನೀಡಲಾಗುತ್ತದೆ. ಇದರಲ್ಲಿ ಸ್ನಾತಕೋತ್ತರ ಪದವಿಯ 48 ವಿದ್ಯಾರ್ಥಿಗಳು ಇದ್ದಾರೆ. ಈ ಪೈಕಿ 39 ವಿದ್ಯಾರ್ಥಿನಿಯರು, 9 ಮಂದಿ ವಿದ್ಯಾರ್ಥಿಗಳು. ಸ್ನಾತಕ ಪದವಿಯಲ್ಲಿ 9 ಮಂದಿ ಚಿನ್ನದ ಪದಕ ಪಡೆದಿದ್ದು, ಇದರಲ್ಲಿ 6 ವಿದ್ಯಾರ್ಥಿನಿಯರು, ಮೂವರು ವಿದ್ಯಾರ್ಥಿಗಳು ಎಂದು ಅವರು ವಿವರಿಸಿದರು.

ರ್‍ಯಾಂಕ್ ವಿಜೇತರಲ್ಲಿ 57 ವಿದ್ಯಾರ್ಥಿಗಳು ಬೆಂಗಳೂರು ನಗರ ವಿಶ್ವವಿದ್ಯಾಲಯ ಸ್ಥಾಪಿಸಿರುವ 41 ಚಿನ್ನದ ಪದಕಗಳು ಮತ್ತು ನಗದು ಬಹುಮಾನ ಹಾಗೂ ವಿವಿಧ ದಾನಿಗಳು ಸ್ಥಾಪಿಸಿರುವ ಒಟ್ಟು 16 ಚಿನ್ನದ ಪದಕಗಳನ್ನು ಸ್ವೀಕರಿಸಲಿದ್ದಾರೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಶ್ವವಿದ್ಯಾಲಯದ ಕುಲಸಚಿವ ಟಿ.ಜವರೇಗೌಡ ಹಾಜರಿದ್ದರು.

ಚಿನ್ನದ ಪದಕ ಪಡೆದವರ ಪ್ರತಿಕ್ರಿಯೆ



ಅನುಷಾ ಎಸ್.

ಚಿನ್ನದ ಪದಕ ವಿಜೇತರಲ್ಲಿ ಅನೇಕರಿಗೆ ಇದು ಸುಲಭದ 'ಸಾಧನೆ' ಆಗಿರಲಿಲ್ಲ. ಶೈಕ್ಷಣಿಕ ನಿರ್ವಹಣೆ ಮತ್ತು ಮನೆಯಲ್ಲಿ ಜವಾಬ್ದಾರಿಗಳ ನಡುವೆ ಪರಿಶ್ರಮದೊಂದಿಗೆ ಈ ಗುರಿ ತಲುಪಿದ್ದಾರೆ.

ಎಂ.ಎಸ್ಸಿ ರಸಾಯನ ವಿಜ್ಞಾನದಲ್ಲಿ ಐದು ಚಿನ್ನದ ಪದಕ ಪಡೆದಿರುವ ಅನುಷಾ ಅವರ ತಂದೆ ಕೃಷಿಕರು. ತಾಯಿ ಗಾರ್ಮೆಂಟ್ ಉದ್ಯೋಗಿ. 'ಪದವಿಯಲ್ಲಿ ಭೌತವಿಜ್ಞಾನ, ರಸಾಯನ ವಿಜ್ಞಾನ ಮತ್ತು ಗಣಿತ ಸಂಯೋಜನೆಯ ತೆಗೆದುಕೊಂಡೆ. ರಸಾಯನ ವಿಜ್ಞಾನ ನನ್ನನ್ನು ಆಕರ್ಷಿಸಿತು. ಮುಂದೆ ಸರ್ಕಾರಿ ಉದ್ಯೋಗಗಳ ನೇಮಕಾತಿ ಪರೀಕ್ಷೆಗಳನ್ನು ಬರೆಯುವ ಯೋಚನೆ ಇದೆ' ಎಂದು ಅನುಷಾ ತಿಳಿಸಿದರು.



ಸಂಜನಾ ಆರ್.ಎಸ್.

ವಿ.ವಿ ಪುರಂ ಕಲಾ ಮತ್ತು ವಾಣಿಜ್ಯ ಕಾಲೇಜಿನ ವಿದ್ಯಾರ್ಥಿನಿ ಸಂಜನಾ ಆರ್.ಎಸ್. ಬಿ.ಕಾಂನಲ್ಲಿ ಮೂರು ಚಿನ್ನದ ಪದಕಗಳನ್ನು ಪಡೆದಿದ್ದಾರೆ. ತಂದೆ ಬ್ಯಾಂಕ್‌ವೊಂದರಲ್ಲಿ ವಾಚ್‌ಮನ್ ಆಗಿದ್ದಾರೆ. ಮನೆ ನಿರ್ವಹಣೆಗಾಗಿ ಸಹೋದರ 10ನೇ ತರಗತಿಗೆ ಓದು ನಿಲ್ಲಿಸಿ, ಉದ್ಯೋಗಕ್ಕೆ ಸೇರಿದ್ದಾರೆ.

'ನನ್ನ ಅಣ್ಣನೇ ನನ್ನನ್ನು ಓದಿಸಿದ್ದು. ನನಗೆ ಚಾರ್ಟರ್ಡ್ ಅಕೌಂಟಂಟ್ ಆಗಬೇಕೆಂಬ ಕನಸಿದೆ. ಸದ್ಯ ಖಾಸಗಿ ಸಂಸ್ಥೆಯಲ್ಲಿ ಅಕೌಂಟಂಟ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದರು.



ಪ್ರಿಯಾ ಬಾಲಚಂದ್ರ

ಚಿನ್ನದ ಪದಕ ವಿಜೇತರಲ್ಲಿ ಪ್ರಿಯಾ ಬಾಲಚಂದ್ರ ತುಸು ವಿಭಿನ್ನ. ಇವರು 56ನೇ ವಯಸ್ಸಿನಲ್ಲಿ ಸೆಂಟ್ರಲ್ ಕಾಲೇಜಿನ ವಿದೇಶಿ ಭಾಷಾ ವಿಭಾಗ ದಿಂದ ಫ್ರೆಂಚ್‌ನಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಎರಡು ಚಿನ್ನದ ಪದಕಗಳನ್ನು ಪಡೆದಿದ್ದಾರೆ. ಫ್ರೆಂಚ್‌ನಲ್ಲಿ ಡಿಪ್ಲೊಮಾ ಪಡೆದು, 22 ವರ್ಷಗಳ ನಂತರ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

'ನಾನು ಅಲೈಯನ್ಸ್ ಫ್ರಾಂಚೈಸ್‌ನಲ್ಲಿ ಉದ್ಯೋಗ ಮಾಡಿದ್ದೇನೆ. ಕೆಲವು ಶಾಲೆಗಳಲ್ಲಿ ಫ್ರೆಂಚ್ ಕಲಿಸಿದ್ದೇನೆ. ಎರಡು ವರ್ಷ ವಿರಾಮ ತೆಗೆದುಕೊಂಡು, ಈಗ ಫ್ರೆಂಚ್‌ನಲ್ಲಿ ಎಂಎ ಪೂರೈಸಿದ್ದೇನೆ. ಪಿಎಚ್.ಡಿ ಮಾಡುವ ಕನಸಿದೆ' ಎಂದು ಅವರು ಪ್ರತಿಕ್ರಿಯಿಸಿದರು.

'ನಂದಿ'ಗೆ ಪ್ರವಾಸಿಗರ ಪ್ರವೇಶ ನಿರ್ಬಂಧ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿ ಗಿರಿಧಾಮದಲ್ಲಿ ಜೂನ್ 19ರಂದು ರಾಜ್ಯ ಸಚಿವ ಸಂಪುಟ ಸಭೆ ನಡೆಯಲಿದೆ.

ಹೀಗಾಗಿ, ಜೂನ್ 16ರ ಸಂಜೆ 6ರಿಂದ 20ರ ಬೆಳಿಗ್ಗೆ 5ರವರೆಗೆ ಪ್ರವಾಸಿಗರು, ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದೆ. ಜೂನ್ 17ರಿಂದ 19ರವರೆಗೆ ಗಿರಿಧಾಮದಲ್ಲಿನ ವಸತಿ ನಿಲಯದ ಕೊಠಡಿಗಳನ್ನು ಮುಂಗಡವಾಗಿ ಕಾಯ್ದಿರಿಸುವಿಕೆಯನ್ನು ನಿಷೇಧಿಸಲಾಗಿದೆ ಎಂದು ಡಿ.ಸಿ ಪಿ.ಎನ್. ರವೀಂದ್ರ ತಿಳಿಸಿದ್ದಾರೆ.

ಗಿರಿಧಾಮಕ್ಕೆ ಹೋಗಲು ಮತ್ತು ಬರಲು ಒಂದೇ ರಸ್ತೆ ಇರುವುದರಿಂದ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ಕಡಿದಾದ ತಿರುವುಗಳಿವೆ. ವಾಹನಗಳು ಮತ್ತು ಪ್ರವಾಸಿಗರನ್ನು ನಿಯಂತ್ರಿಸುವುದು ಕಷ್ಟವಾಗುತ್ತದೆ.

ಅಪಘಾತಗಳಾಗುವ ಸಾಧ್ಯತೆ ಹೆಚ್ಚಿರುತ್ತದೆ. ಮುನ್ನೆಚ್ಚರಿಕೆ ಕ್ರಮವಾಗಿ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಹಳೆಯ ಬಟ್ಟೆಗಳ ಸಂಗ್ರಹ, ವಿಲೇವಾರಿ ಕುರಿತು ಕಾರ್ಯಾಗಾರ: ಅತಿಥಿಗಳು: ಪಿ.ಜಿ.ಆರ್. ಸಿಂಧ್ಯ, ವರಿಂದರ್ ಗಂಭೀರ್, ಆಯೋಜನೆ ಮತ್ತು ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 11ರಿಂದ

ಡಾ.ಎಚ್. ನರಸಿಂಹಯ್ಯ ನೆನಪಿನ ಸಾಂಸ್ಕೃತಿಕ ಉತ್ಸವ: ಉದ್ಘಾಟನೆ: ಅರ್ಚನಾ ಉಡುಪ, ಭಕ್ತಿ ಸಂಗೀತ, ಗಾಯನ: ಚಂದನ ಮುರಳೀಧರ, ಹಾರ್ಮೋನಿಯಂ: ವಿಶ್ವಜಿತ್ ಕಿಣಿ, ತಬಲಾ: ಸತ್ಯ ಪ್ರಮೋದ್, ಮಂಜೀರ: ಕಾರ್ತಿಕ್ ಜಿ. ದತ್, ಆಯೋಜನೆ: ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ, ಬೆಂಗಳೂರು ಲಲಿತಕಲಾ ಪರಿಷತ್, ಸ್ಥಳ: ಮಲ್ಟಿ ಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಜಯನಗರ, ಸಂಜೆ 4.30ರಿಂದ

'ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್' ಪ್ರಶಸ್ತಿ ಪ್ರದಾನ: ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಸ್ವೀಕರಿಸುವವರು: ಹಂಪ ನಾಗರಾಜಯ್ಯ, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಅತಿಥಿ: ಪಿ. ಮಲ್ಲಿಕಾರ್ಜುನಪ್ಪ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5



ಹಂಪ ನಾಗರಾಜಯ್ಯ

'ಜಸ್ಟೀಸ್ ಕೆ.ಎಸ್. ಹೆಗ್ಡೆ ಚಾರಿಟಬಲ್ ಫೌಂಡೇಷನ್' ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಎನ್. ವಿನಯ ಹೆಗ್ಡೆ, ಪ್ರಶಸ್ತಿ ಸ್ವೀಕರಿಸುವವರು: ಸುಧಾ ಮೂರ್ತಿ, ಉಪಸ್ಥಿತಿ: ಎನ್.ಆರ್. ಶೆಟ್ಟಿ, ಎನ್. ಸಂತೋಷ್ ಹೆಗ್ಡೆ, ಎಂ. ಶಾಂತರಾಮ ಶೆಟ್ಟಿ, ಆಯೋಜನೆ ಮತ್ತು ಸ್ಥಳ: ನಿಟ್ಟೆ ಎಜುಕೇಷನ್ ಟ್ರಸ್ಟ್, ನಿಟ್ಟೆ ಡಿಮ್ಡ್ ವಿ.ವಿ, ಯಲಹಂಕ, ಸಂಜೆ 5.30

'ಸೇವಾ ಸಿಂಧೂರ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಅತಿಥಿ: ಎಂ. ಕೃಷ್ಣಪ್ಪ, ಅಧ್ಯಕ್ಷತೆ: ಮಹೇಶ ಜೋಶಿ, ಅಂಗವಿಕಲರಿಗೆ ಗಾಲಿ ಕುರ್ಚಿ ವಿತರಣೆ: ಸಿ. ಸೋಮಶೇಖರ್, ಅಭಿನಂದನೆ: ಶುಭಾ ಧನಂಜಯ, ಪ್ರಶಸ್ತಿ ಸ್ವೀಕರಿಸುವವರು: ಬಿ.ಕೆ. ಸುಮಿತ್ರ, ಪ್ರೇಮಕವಿ ಕೆ. ಕಲ್ಯಾಣ್, ಶ್ರೀಧರ್ ಸಾಗರ್, ಡಾ. ನಾಗಲಕ್ಷ್ಮಿ ಚೌಧರಿ, ಜಾಹ್ನವಿ ಕಾರ್ತಿಕ್, ಆರ್. ಶ್ರೀಧರ್, ಜಿ. ಬಾಬು, ಜೋಶ್ ಮ್ಯಾಥಿವ್, ಜಗದೀಶ್ ಜಿ., ಡಾ. ರಾಮ್‌ಪ್ರಸಾತ್ ಮನೋಹರ್, ವೆಂಕಟಾಚಲಪತಿ ಆರ್., ಆಯೋಜನೆ: ಅಕ್ಷಯಧಾಮ ಫೌಂಡೇಷನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6


ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ನಗರದ ನಯನ ಸಭಾಂಗಣದಲ್ಲಿ ಮಂಗಳವಾರ ಧಮ್ಮಭೂಮಿ ಚಾರಿಟಬಲ್ ಟ್ರಸ್ಟ್, ನಮನಚಂದ್ರು ಸ್ನೇಹ ಬಳಗ ಆಯೋಜಿಸಿದ್ದ ನಮನಚಂದ್ರು 'ಸೃಜನವಂತ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ ಮತ್ತು ಚಿಂತಕ ಬಂಜಗೆರೆ ಜಯಪ್ರಕಾಶ್ ಸಮಾಲೋಚನೆಯಲ್ಲಿ ತೊಡಗಿದರು. ರಾಮನಗರದ ಆದಿಚುಂಚನಗಿರಿ ಶಾಖಾ ಮಠದ ಅನ್ನದಾನೇಶ್ವರನಾಥ ಸ್ವಾಮೀಜಿ, ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಎಸ್. ಬಾಲಾಜಿ ಮತ್ತು ಎಚ್.ಜಿ. ಪ್ರಭಾಕರ್ ಉಪಸ್ಥಿತರಿದ್ದರು
–ಪ್ರಜಾವಾಣಿ ಚಿತ್ರ

ಆಹಾರ ಮೇಳ ನಾಳೆಯಿಂದ 14ರವರೆಗೆ

ಬೆಂಗಳೂರು: ನಗರದ ತುಮಕೂರು ರಸ್ತೆಯ ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ಜೂ. 12ರಿಂದ 14ರವರೆಗೆ ಆಹಾರ ಮೇಳ ನಡೆಯಲಿದೆ. ಮೀಡಿಯಾ ಡೇ ಮಾರ್ಕೆಟಿಂಗ್ ಆಯೋಜಿಸುತ್ತಿರುವ ಮೇಳದಲ್ಲಿ ಪಾನೀಯ, ಆಹಾರ, ಕುಕ್ಕಟೋದ್ಯಮ, ಪಶು ಸಂಗೋಪನೆ, ಅಡುಗೆ ಮನೆ ಪರಿಕರಗಳು ಪ್ರದರ್ಶನಗೊಳ್ಳಲಿವೆ. ಆಹಾರೋದ್ಯಮದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಪ್ರದರ್ಶಿಸಲಾಗುತ್ತಿದೆ.





ಉದ್ದವಾದ ಭಾರತದ ಕರಾವಳಿ!

ಸುಧೀರ ಎಚ್. ಎಸ್.

ನೀವು ಎಂದಾದರೂ ಭೂಪಟದಲ್ಲಿ ಕರಾವಳಿ ರೇಖೆಯನ್ನು ನೋಡಿದಾಗ, ಅದರ ಆಕಾರ ಎಷ್ಟೆಲ್ಲಾ ಬಾಗಿದೆ ಎಂದು ಯೋಚಿಸಿದ್ದೀರಾ? ಅಂತಹ ಕರಾವಳಿಯ ಉದ್ದವನ್ನು ಅಳೆಯುವುದು ನಿಜಕ್ಕೂ ಒಂದು ಸವಾಲು. ಏಕೆಂದರೆ, ನೀವು ಕರಾವಳಿಯನ್ನು ಎಷ್ಟು ಸೂಕ್ಷ್ಮವಾಗಿ, ಎಷ್ಟು ಹತ್ತಿರದಿಂದ ನೋಡುತ್ತೀರಿ ಎನ್ನುವುದರ ಮೇಲೆ ಅದರ ಉದ್ದ ನಿರ್ಧಾರವಾಗುತ್ತದೆ!

ಇದನ್ನು 'ಫ್ರ್ಯಾಕ್ಟಲ್' ಎಂದು ಕರೆಯುವ ಗಣಿತದ ಪರಿಕಲ್ಪನೆಗೆ ಹೋಲಿಸಬಹುದು. ನೀವು ಹತ್ತಿರದಿಂದ 'ಜೂಮ್' ಮಾಡಿದಂತೆಲ್ಲಾ, ಹಿಂದೆ ಕಾಣಿಸದ ಹೊಸ ಹೊಸ ಸಣ್ಣ ಕೊಲ್ಲಿಗಳು, ಒಳಹರಿವುಗಳು ಮತ್ತು ಬಾಗಿದ ಪ್ರದೇಶಗಳು ಕಾಣಿಸಿಕೊಳ್ಳುತ್ತವೆ; ಇದರಿಂದ ಉದ್ದ ಹೆಚ್ಚಾಗುತ್ತ ಹೋಗುತ್ತದೆ.

ನಮ್ಮ ಭಾರತದ ಕರಾವಳಿ ಉದ್ದದ ಬಗ್ಗೆ ಈಗ ಇಂತಹದ್ದೇ ಒಂದು ಹೊಸ, ಆಶ್ಚರ್ಯಕರ ಮಾಹಿತಿ ಹೊರಬಿದ್ದಿದೆ! ಹಿಂದೆ, 1970ರ ದಶಕದಿಂದ ನಾವು 7,516.60 ಕಿಲೋಮೀಟರ್ ಎಂದು ನಂಬಿದ್ದ ಭಾರತದ ಅಧಿಕೃತ ಕರಾವಳಿಯ ಉದ್ದವನ್ನು ಈಗ ಮರು ಲೆಕ್ಕಾಚಾರ ಮಾಡಲಾಗಿದ್ದು, ಅದು ಬೃಹತ್ ಪ್ರಮಾಣದಲ್ಲಿ ಏರಿಕೆಯಾಗಿ 11,098.81 ಕಿಲೋಮೀಟರ್‌ಗಳಿಗೆ ಏರಿದೆ ಎಂದು ಭಾರತೀಯ ಸಮೀಕ್ಷಾ ಸಂಸ್ಥೆ (ಸರ್ವೆ ಆಫ್ ಇಂಡಿಯಾ) ಘೋಷಿಸಿದೆ.

ಈ ಬೃಹತ್ ಬದಲಾವಣೆ ಯಾಕೆ?

ಈ ಹೆಚ್ಚಳವು ದೇಶದ ಭೂಭಾಗದಲ್ಲಿ ಭೌತಿಕ ಬದಲಾವಣೆಯಿಂದ ಆಗಿಲ್ಲ; ಬದಲಿಗೆ ಆಧುನಿಕ ಅಳತೆ ವಿಧಾನಗಳು ಮತ್ತು ಸುಧಾರಿತ ತಂತ್ರಜ್ಞಾನಗಳನ್ನು ಬಳಸಿದ್ದರಿಂದ ಆಗಿದೆ. ಕರಾವಳಿಯ ಸೂಕ್ಷ್ಮ ವಿವರಗಳನ್ನು ಈಗ ಹಿಂದೆಂದಿಗಿಂತಲೂ ಹೆಚ್ಚು ನಿಖರವಾಗಿ ಅಳೆಯಲಾಗಿದೆ. ಈ ಮಹತ್ವದ ಕಾರ್ಯದಲ್ಲಿ ಭಾರತೀಯ ಸಮೀಕ್ಷಾ ಸಂಸ್ಥೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (DST) ಮತ್ತು ರಾಷ್ಟ್ರೀಯ ಜಲವಿಜ್ಞಾನ ಸಂಸ್ಥೆ (ನ್ಯಾಷನಲ್ ಹೈಡ್ರೋಗ್ರಾಫಿಕ್ ಆರ್ಗನೈಸೇಷನ್) ಸೇರಿದಂತೆ ಹಲವು ಸರ್ಕಾರಿ ಸಂಸ್ಥೆಗಳು ಸಹಕರಿಸಿವೆ.

ಹೊಸ ಅಳತೆಗೆ ಕಾರಣಗಳು


ಈಗ ಕರಾವಳಿ ರೇಖೆಯನ್ನು 'ಉಬ್ಬರವಿಳಿತದ ರೇಖೆ' (ಹೈ-ವಾಟರ್ ಲೈನ್) ಆಧಾರದ ಮೇಲೆ ಅಳೆಯಲಾಗಿದೆ. ಇದಕ್ಕಾಗಿ 2011ರ ಎಲೆಕ್ಟ್ರಾನಿಕ್ ನ್ಯಾವಿಗೇಷನ್ ಚಾರ್ಟ್‌ಗಳನ್ನು (ENCs) ಬಳಸಲಾಗಿದೆ. ಹಿಂದೆ 1:4,500,000 ಅಥವಾ ಅದಕ್ಕಿಂತ ಚಿಕ್ಕ ಪ್ರಮಾಣದ ನಕ್ಷೆಗಳನ್ನು ಬಳಸಲಾಗುತ್ತಿತ್ತು. ಈಗ 1:250,000 ಎಂಬ ದೊಡ್ಡ ಪ್ರಮಾಣದ ನಕ್ಷೆಗಳನ್ನು ಬಳಸಲಾಗಿದೆ. ಈ ದೊಡ್ಡ ಪ್ರಮಾಣದ ನಕ್ಷೆಗಳು ಹಿಂದೆ ಕೈಬಿಟ್ಟಿದ್ದ ಅನೇಕ ಸಣ್ಣ ವಿವರಗಳನ್ನೂ ಸೆರೆಹಿಡಿಯಲು ಸಹಾಯ ಮಾಡಿವೆ.

ಆಧುನಿಕ ಭೌಗೋಳಿಕ ಮಾಹಿತಿ ವ್ಯವಸ್ಥೆ (GIS) ಸಾಫ್ಟ್‌ವೇರ್, ಲಿಡಾರ್-ಜಿ.ಪಿ.ಎಸ್. (LIDAR-GPS) ಬಳಸಿ ನಕ್ಷೆ ತಯಾರಿಸಿರುವುದಕ್ಕೆ ಹಲವೆಡೆ ಡ್ರೋನ್ ಇಮೇಜಿಂಗ್ ಮತ್ತು ಉಪಗ್ರಹದ ಬಳಕೆಯೊಂದಿಗೆ ಅಳತೆ (ಸ್ಯಾಟಲೈಟ್ ಅಲ್ಟಿಮಿಟ್ರಿ) ತಂತ್ರಜ್ಞಾನಗಳನ್ನು ಬಳಸಿದೆ. ಇದರಿಂದ ಕರಾವಳಿಯ ಅತಿ ಸೂಕ್ಷ್ಮ ವಿವರಗಳಾದ ಕೊಲ್ಲಿಗಳು, ನದೀಮುಖಗಳು, ಸಣ್ಣ ಒಳಹರಿವುಗಳು ಮತ್ತು ಇತರ ಸಣ್ಣ ಅಕ್ರಮಗಳನ್ನು ಸಹ ನಿಖರವಾಗಿ ಅಳೆಯಲು ಸಾಧ್ಯವಾಗಿದೆ. ವಿಶ್ವ ಜಿಯೋಡೆಟಿಕ್ ವ್ಯವಸ್ಥೆ 1984 (WGS84) ಎಂಬ ಜಾಗತಿಕ ವ್ಯವಸ್ಥೆಗೂ ಇದನ್ನು ಅನುಸರಿಸಲಾಗಿದೆ.

ದ್ವೀಪಗಳ ಸೇರ್ಪಡೆ

211.	ಶಾಂತಮ್ಮ ಕೋಂ ವೆಂಕಟೇಶ್ .ಜಿ	ಶಾಂತಮ್ಮ ಕೋಂ ವೆಂಕಟೇಶ್ .ಜಿ	112/1	0–01	–	0–01
212.	ಶಾಂತಮ್ಮ ಕೋಂ ವೆಂಕಟೇಶ್ .ಜಿ	ಶಾಂತಮ್ಮ ಕೋಂ ವೆಂಕಟೇಶ್ .ಜಿ	112/2	1–11	–	1–11
213.	ಲಿಂಗಪ್ಪ ಬಿನ್ ಗಂಗಾಧರಪ್ಪ	ಲಿಂಗಪ್ಪ ಬಿನ್ ಗಂಗಾಧರಪ್ಪ	113/1	2–01	–	2–01
214.	ಗಂಗಪ್ಪ ಮತ್ತು ಮರಿಯಪ್ಪ	ಗಂಗಪ್ಪ ಮತ್ತು ಮರಿಯಪ್ಪ	113/2	1–01	–	1–01
215.	ಹರೀಶ್ ಮೃತ್ಯುಂಜಯಪ್ಪ ನೆಸ್ವಿ ಬಿನ್ ಮೃತ್ಯುಂಜಯಪ್ಪ	ಹರೀಶ್ ಮೃತ್ಯುಂಜಯಪ್ಪ ನೆಸ್ವಿ ಬಿನ್ ಮೃತ್ಯುಂಜಯಪ್ಪ	121/1	0–26	–	0–26
216.	ಮೋಹನ್ ಕುಮಾರ್ ಹೆಚ್ ಬಿನ್ ಹಾಲಪ್ಪ, ಕಿರಣ್ ಕುಮಾರ್ ಹನಸವಾಡಿ ಹಾಲಪ್ಪ ಬಿನ್ ಹಾಲಪ್ಪ	ಮೋಹನ್ ಕುಮಾರ್ ಹೆಚ್ ಬಿನ್ ಹಾಲಪ್ಪ, ಕಿರಣ್ ಕುಮಾರ್ ಹನಸವಾಡಿ ಹಾಲಪ್ಪ ಬಿನ್ ಹಾಲಪ್ಪ	121/2	1–12	–	1–12
217.	ಹರೀಶ್ ಮೃತ್ಯುಂಜಯಪ್ಪ ನೆಸ್ವಿ ಬಿನ್ ಮೃತ್ಯುಂಜಯಪ್ಪ	ಹರೀಶ್ ಮೃತ್ಯುಂಜಯಪ್ಪ ನೆಸ್ವಿ ಬಿನ್ ಮೃತ್ಯುಂಜಯಪ್ಪ	121/5	0–21	–	0–21
218.	ಜಿ.ಜಯರಾಂ ಬಿನ್ ಗಂಗೇಗೌಡ	ಜಿ.ಜಯರಾಂ ಬಿನ್ ಗಂಗೇಗೌಡ	122/1	0–20	–	0–20
219.	ಜುಂಜಪ್ಪ ಬಿನ್ ಗಂಗಯ್ಯ	ಜುಂಜಪ್ಪ ಬಿನ್ ಗಂಗಯ್ಯ	122/2	4–05	0–04	4–01
220.	ಬಿ.ಎಸ್. ಕೃಷ್ಣಪ್ಪ ಬಿನ್ ಸಿದ್ದಪ್ಪ	ಬಿ.ಎಸ್. ಕೃಷ್ಣಪ್ಪ ಬಿನ್ ಸಿದ್ದಪ್ಪ	123/1	1–08.08	0–01.08	1–07
221.	ಹನುಮಕ್ಕ ಕೋಂ ಹನುಮಂತರಾಯಪ್ಪ ಬಿ ಎಸ್ ಹನುಮಂತರಾಯಪ್ಪ ಬಿನ್ ಸಿದ್ದಪ್ಪ ಅಲಿಯಾಸ್ ಸಿದ್ದಯ್ಯ	ಹನುಮಕ್ಕ ಕೋಂ ಹನುಮಂತರಾಯಪ್ಪ ಬಿ ಎಸ್ ಹನುಮಂತರಾಯಪ್ಪ ಬಿನ್ ಸಿದ್ದಪ್ಪ ಅಲಿಯಾಸ್ ಸಿದ್ದಯ್ಯ	123/2	1–09.08	0–00.08	1–09
222.	ರಾಜಕುಮಾರ್ ಬಿನ್ ಲೇಟ್ ಪುಟ್ಟಚಾರ್	ರಾಜಕುಮಾರ್ ಬಿನ್ ಲೇಟ್ ಪುಟ್ಟಚಾರ್	124/1	0–18.08	0–03.08	0–15
223.	ಸಿದ್ದಪ್ಪ ಬಿನ್ ಕೆಂಪಯ್ಯ	ಸಿದ್ದಪ್ಪ ಬಿನ್ ಕೆಂಪಯ್ಯ	124/2	1–20	–	1–20
224.	ಕೆಂಪಯ್ಯ ಬಿನ್ ಸಿದ್ದಯ್ಯ	ಕೆಂಪಯ್ಯ ಬಿನ್ ಸಿದ್ದಯ್ಯ	124/3	0–39.08	0–01.08	0–38
225.	ಜಯಲಕ್ಷ್ಮೀ ಉರುಫ್ ಜಯಲಕ್ಷ್ಮಮ್ಮ ಕೋಂ ಶಿವಣ್ಣ .ಹೆಚ್.ಟಿ	ಜಯಲಕ್ಷ್ಮೀ ಉರುಫ್ ಜಯಲಕ್ಷ್ಮಮ್ಮ ಕೋಂ ಶಿವಣ್ಣ .ಹೆಚ್.ಟಿ	124/4	0–38	0–01	0–37
226.	ಜಯಮ್ಮ ಕೋಂ ಲೇಟ್ ಕೆಂಪಯ್ಯ	ಜಯಮ್ಮ ಕೋಂ ಲೇಟ್ ಕೆಂಪಯ್ಯ	125	3–37	0–02	3–35
227.	ಚಿಕ್ಕಮಾರಯ್ಯ ಬಿನ್ ಪುಟ್ಟಮಾರಯ್ಯ ಪುಟ್ಟಮಾರಯ್ಯ ಬಿನ್ ಚಿಕ್ಕಮಾರಯ್ಯ ಗಂಗಚನ್ನಯ್ಯ ಬಿನ್ ಚಿಕ್ಕಮಾರಯ್ಯ ಮಂಗಳಮ್ಮ ಬಿನ್ ಮುನಿಯಪ್ಪ ಮಂಜುಳ ಕೋಂ ಕೃಷ್ಣಮೂರ್ತಿ ಶ್ರೀನಿವಾಸಮೂರ್ತಿ ಬಿನ್ ಲೇಟ್ ಕೆಂಪಯ್ಯ	ಚಿಕ್ಕಮಾರಯ್ಯ ಬಿನ್ ಪುಟ್ಟಮಾರಯ್ಯ ಪುಟ್ಟಮಾರಯ್ಯ ಬಿನ್ ಚಿಕ್ಕಮಾರಯ್ಯ ಗಂಗಚನ್ನಯ್ಯ ಬಿನ್ ಚಿಕ್ಕಮಾರಯ್ಯ ಮಂಗಳಮ್ಮ ಬಿನ್ ಮುನಿಯಪ್ಪ ಮಂಜುಳ ಕೋಂ ಕೃಷ್ಣಮೂರ್ತಿ ಶ್ರೀನಿವಾಸಮೂರ್ತಿ ಬಿನ್ ಲೇಟ್ ಕೆಂಪಯ್ಯ	126	3–37	–	3–37
228.	ರಾಜಕುಮಾರ್ ಬಿನ್ ಪುಟ್ಟಶಾಮಾಚಾರಿ ಜಯಮ್ಮ ಕೋಂ ಲೇಟ್ ಕೆಂಪಯ್ಯ	ರಾಜಕುಮಾರ್ ಬಿನ್ ಪುಟ್ಟಶಾಮಾಚಾರಿ ಜಯಮ್ಮ ಕೋಂ ಲೇಟ್ ಕೆಂಪಯ್ಯ	135	3–36	0–07	3–29
229.	ಸರ್ಕಾರಿ ಬೀಳು	ಸರ್ಕಾರಿ ಬೀಳು	136	3–37	–	3–37
230.	ಮಂಜುನಾಥ ಎಂ ಬಿನ್ ಮುನಿಯಪ್ಪರೆಡ್ಡಿ	ಮಂಜುನಾಥ ಎಂ ಬಿನ್ ಮುನಿಯಪ್ಪರೆಡ್ಡಿ	140	4–00	–	4–00
231.	ಎ.ರಾಜಣ್ಣ ಬಿನ್ ಅರಸಪ್ಪ	ಎ.ರಾಜಣ್ಣ ಬಿನ್ ಅರಸಪ್ಪ	144/1	0–20	–	0–20
232.	ರುಕ್ಮಾಂಗದ ಚಾರಿ ಎನ್ ಬಿನ್ ಲೇಟ್ ನಾರಾಯಣಸ್ವಾಮಿ, ಎನ್ ಬಾಲಕೃಷ್ಣ ಚಾರಿ ಬಿನ್ ಲೇಟ್ ನಾರಾಯಣಸ್ವಾಮಿ	ರುಕ್ಮಾಂಗದ ಚಾರಿ ಎನ್ ಬಿನ್ ಲೇಟ್ ನಾರಾಯಣಸ್ವಾಮಿ, ಎನ್ ಬಾಲಕೃಷ್ಣ ಚಾರಿ ಬಿನ್ ಲೇಟ್ ನಾರಾಯಣಸ್ವಾಮಿ	144/3	0–20	–	0–20
233.	ವೆಂಕಟಾಚಲಯ್ಯ ಬಿನ್ ಲೇಟ್ ರಂಗಪ್ಪ ಗೋವಿಂದರಾಜು ಬಿನ್ ಲೇಟ್ ರಂಗಪ್ಪ ಆರ್. ರಂಗಸ್ವಾಮಿ ಬಿನ್ ಲೇಟ್ ರಂಗಪ್ಪ	ವೆಂಕಟಾಚಲಯ್ಯ ಬಿನ್ ಲೇಟ್ ರಂಗಪ್ಪ ಗೋವಿಂದರಾಜು ಬಿನ್ ಲೇಟ್ ರಂಗಪ್ಪ ಆರ್. ರಂಗಸ್ವಾಮಿ ಬಿನ್ ಲೇಟ್ ರಂಗಪ್ಪ	145	2–00	–	2–00
234.	ಆರ್. ಮಂಜುನಾಥ್ ಬಿನ್ ಲೇಟ್ ರಂಗಸ್ವಾಮಯ್ಯ ಅಲಿಯಾಸ್ ರಂಗಶಾಮಯ್ಯ	ಆರ್. ಮಂಜುನಾಥ್ ಬಿನ್ ಲೇಟ್ ರಂಗಸ್ವಾಮಯ್ಯ ಅಲಿಯಾಸ್ ರಂಗಶಾಮಯ್ಯ	146	2–00	–	2–00
235.	ಲಕ್ಷ್ಮೀದೇವಮ್ಮ .ಜಿ.ಹೆಚ್ ಕೋಂ ಕೆ.ಎನ್. ಗೋಪಾಲ್	ಲಕ್ಷ್ಮೀದೇವಮ್ಮ .ಜಿ.ಹೆಚ್ ಕೋಂ ಕೆ.ಎನ್. ಗೋಪಾಲ್	147/1	1–20	–	1–20
236.	ಲಕ್ಷ್ಮೀದೇವಮ್ಮ .ಜಿ.ಹೆಚ್ ಕೋಂ ಕೆ.ಎನ್. ಗೋಪಾಲ್	ಲಕ್ಷ್ಮೀದೇವಮ್ಮ .ಜಿ.ಹೆಚ್ ಕೋಂ ಕೆ.ಎನ್. ಗೋಪಾಲ್	147/2	0–20	–	0–20
237.	ಚಿಕ್ಕಹನುಮಯ್ಯ ಬಿನ್ ಹನುಮಯ್ಯ	ಚಿಕ್ಕಹನುಮಯ್ಯ ಬಿನ್ ಹನುಮಯ್ಯ	148	2–00	–	2–00
238.	ಶ್ರೀರಾಮ ಬಿನ್ ಲೇಟ್ ವೆಂಕಟೇಶ ಮುನಿರಾಜು ಬಿನ್ ಲೇಟ್ ವೆಂಕಟೇಶ	ಶ್ರೀರಾಮ ಬಿನ್ ಲೇಟ್ ವೆಂಕಟೇಶ ಮುನಿರಾಜು ಬಿನ್ ಲೇಟ್ ವೆಂಕಟೇಶ	149/1	1–20	–	1–20
239.	ಲಕ್ಷ್ಮೀದೇವಮ್ಮ .ಜಿ.ಹೆಚ್ ಕೋಂ ಕೆ.ಎನ್. ಗೋಪಾಲ್	ಲಕ್ಷ್ಮೀದೇವಮ್ಮ .ಜಿ.ಹೆಚ್ ಕೋಂ ಕೆ.ಎನ್. ಗೋಪಾಲ್	149/2	0–20	–	0–20
240.	ಬಿ.ಎಸ್. ಹೇಮಾ ಕೋಂ ಲೇಟ್ ಕಿರಣ್ ರಘು ಬಿನ್ ಲೇಟ್ ಗಂಗೇಗೌಡ	ಬಿ.ಎಸ್. ಹೇಮಾ ಕೋಂ ಲೇಟ್ ಕಿರಣ್ ರಘು ಬಿನ್ ಲೇಟ್ ಗಂಗೇಗೌಡ	150	1–00	–	1–00
241.	ಗಂಗಹನುಮಕ್ಕ ಕೋಂ ಕೆಂಪರಾಮಯ್ಯ	ಗಂಗಹನುಮಕ್ಕ ಕೋಂ ಕೆಂಪರಾಮಯ್ಯ	151	4–00	–	4–00



ಕರ್ನಾಟಕ ಚಿತ್ರಕಲಾ ಪರಿಷತ್ತು ಆಯೋಜಿಸಿದ್ದ ದೃಶ್ಯೋತ್ಸವ- ಚಿತ್ರಕಲಾ ಮಹಾವಿದ್ಯಾಲಯದ ವಾರ್ಷಿಕ ಕಲಾ ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಹಾಗೂ ಗ್ರಾಹಕರು ವಸ್ತ್ರಗಳನ್ನು ವೀಕ್ಷಿಸಿದರು. ಜೂನ್ 15 ರವರೆಗೆ ಈ ಪ್ರದರ್ಶನ ನಡೆಯಲಿದೆ ಚಿತ್ರ: ರಂಜು ಪಿ.

ಪೀಣ್ಯ ಕೈಗಾರಿಕಾ ಪ್ರದೇಶ ಇನ್ನು 'ಪೀಣ್ಯ ವಿಶೇಷ ಹೂಡಿಕೆ ವಲಯ'

ಗ್ರೇಟರ್ ಬೆಂಗಳೂರು ವ್ಯಾಪ್ತಿಗೆ ಟಿಡಿಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಪಡೆದುಕೊಳ್ಳುವ 'ಅಭಿವೃದ್ಧಿ ಹಕ್ಕು ಪ್ರಮಾಣಪತ್ರ (ಡಿಆರ್‌ಸಿ) ಅಥವಾ ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿಡಿಆರ್) ಪತ್ರಗಳನ್ನು 'ಗ್ರೇಟರ್ ಬೆಂಗಳೂರು' ವ್ಯಾಪ್ತಿಯಲ್ಲಿ ಬಳಸಿಕೊಳ್ಳಲು ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಬಿಬಿಎಂಪಿ ವ್ಯಾಪ್ತಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಾಗೂ ಬೆಂಗಳೂರು- ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ (ಬಿಎಂಐಸಿಪಿಎ) ಸೇರಿದಂತೆ ಒಂದಕ್ಕಿಂತ ಹೆಚ್ಚು ಸ್ಥಳೀಯ ಯೋಜನಾ ಪ್ರಾಧಿಕಾರಗಳ ಪ್ರದೇಶವನ್ನು ಹೊಂದಿದೆ.

ಹೀಗಾಗಿ, ಬಿಬಿಎಂಪಿಯು 2020ರ ಜುಲೈ 27ರಂದು ಪ್ರಸ್ತಾವ ಸಲ್ಲಿಸಿ, ಡಿಆರ್‌ಸಿಗಳನ್ನು ಬಿಬಿಎಂಪಿಯ ಯಾವುದೇ ಪ್ರದೇಶದಲ್ಲಿ ಉಪಯೋಗಿಸಿಕೊಳ್ಳಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿತ್ತು.

'ಇದನ್ನು ಪರಿಗಣಿಸಿರುವ ಸರ್ಕಾರ- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಕೆಟಿಸಿಪಿ) ಕಾಯ್ದೆ 1961ರ ಸೆಕ್ಷನ್ 13ಕ್ಕೆ ತಿದ್ದುಪಡಿ ತಂದಿದೆ. ಇದರಿಂದ, ಬಿಬಿಎಂಪಿ ಅಥವಾ ಗ್ರೇಟರ್ ಬೆಂಗಳೂರು ಪ್ರದೇಶದ (ಜಿಬಿಎ) ವ್ಯಾಪ್ತಿ ಹಾಗೂ ಮುಂದೆ ಜಿಬಿಎಗೆ ಸೇರಿಕೊಳ್ಳುವ ಪ್ರದೇಶದಲ್ಲಿ ಡಿಸಿಆರ್ ಅಥವಾ ಟಿಡಿಆರ್ ಅನ್ನು ಬಳಸಿಕೊಳ್ಳಬಹುದು. ಇದಕ್ಕೆ ಬಿಡಿಎ, ಬಿಎಂಐಸಿಪಿಎ ಸೇರಿದಂತೆ ಯಾವುದೇ ಯೋಜನಾ ಪ್ರಾಧಿಕಾರದ ವ್ಯಾಪ್ತಿ ಅಡ್ಡಿಯಾಗುವುದಿಲ್ಲ ಎಂದು ಜೂನ್ 10ರಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

'ಪೀಣ್ಯ ವಿಶೇಷ ಹೂಡಿಕೆ ವಲಯ': ನಗರದ ಪೀಣ್ಯ 1, 2, 3 ಹಾಗೂ ನಾಲ್ಕನೇ ಹಂತದ ಕೈಗಾರಿಕಾ ಪ್ರದೇಶವನ್ನು 'ಪೀಣ್ಯ ವಿಶೇಷ ಹೂಡಿಕೆ ವಲಯ'ವನ್ನಾಗಿ ಹೆಸರಿಸಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಆದೇಶಿಸಿದೆ.

ನೆಲಗದರನಹಳ್ಳಿ, [illegible], ಚೊಕ್ಕಸಂದ್ರ, ಪೀಣ್ಯದ ಹಲವು ಸರ್ವೆ ನಂಬರ್‌ಗಳಲ್ಲಿ 1,416 ಎಕರೆ ವ್ಯಾಪ್ತಿಯಲ್ಲಿರುವ ಪೀಣ್ಯ ಕೈಗಾರಿಕಾ ಪ್ರದೇಶವನ್ನು, ಕರ್ನಾಟಕ ವಿಶೇಷ ಹೂಡಿಕೆ ವಲಯ ಕಾಯ್ದೆ 2022ರಂತೆ 'ಪೀಣ್ಯ ವಿಶೇಷ ಹೂಡಿಕೆ ವಲಯ'ವನ್ನಾಗಿ ನಿಗದಿಪಡಿಸಲಾಗಿದೆ. ಈ ವಲಯಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯನ್ನು (ಕೆಐಎಡಿಬಿ) 'ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ'ವನ್ನಾಗಿ ಆದೇಶಿಸಲಾಗಿದೆ. 'ಪೀಣ್ಯ ವಿಶೇಷ ಹೂಡಿಕೆ ವಲಯ'ವನ್ನು ಕೈಗಾರಿಕಾ ಟೌನ್‌ಶಿಪ್ ಆಗಿ ಪರಿಗಣಿಸಲಾಗಿದ್ದು, ಎಲ್ಲ ರೀತಿಯ ನಿರ್ವಹಣೆಯನ್ನು ಕೆಐಎಡಿಬಿಗೆ ವಹಿಸಲಾಗಿದೆ.

ಕಾಯ್ದೆ ಪ್ರಶ್ನಿಸಿ ಪಿಐಎಲ್

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2025 ಅನ್ನು ಸಂವಿಧಾನ ಬಾಹಿರ' ಎಂದು ಘೋಷಿಸುವಂತೆ ಕೋರಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

ಅರ್ಜಿಯಲ್ಲಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತ ಮತ್ತು ರಾಜ್ಯ ಚುನಾವಣಾ ಆಯೋಗದ ಆಯುಕ್ತರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಸಿನಿಮಾ ನಿರ್ದೇಶಕ ಟಿ.ಎಸ್.ನಾಗಾಭರಣ, ಜಿ.ಮಂಜುನಾಥ ರಾಜು ಮತ್ತು ಜಿ.ಎಸ್.ರೇಣುಕ ಪ್ರಸಾದ್ ಸಲ್ಲಿಸಿರುವ ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

'ಬೆಂಗಳೂರಿನ ಆಡಳಿತ, ನಿರ್ವಹಣೆಯನ್ನು ನೇರವಾಗಿ ತನ್ನ ಹತೋಟಿಗೆ ತೆಗೆದುಕೊಳ್ಳುವ ಹುನ್ನಾರದಿಂದ ಸರ್ಕಾರ ಈ ಪ್ರಾಧಿಕಾರ ರಚನೆ ಮಾಡಿದೆ. ಇದರಿಂದ, ಚುನಾಯಿತರಲ್ಲದ ವ್ಯಕ್ತಿಗಳಿಗೆ ಹೆಚ್ಚಿನ ಅಧಿಕಾರ ಸಿಗಲಿದೆ. ಇದು ಅಧಿಕಾರ ವಿಕೇಂದ್ರೀಕರಣ ಮತ್ತು ಸ್ಥಳೀಯ ಸರ್ಕಾರಗಳ ಬಲವರ್ಧನೆಯ ತತ್ವಕ್ಕೆ ಪೆಟ್ಟುಕೊಡಲಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ಮಿತ್ರಾ ವೆಂಕಟ್ರಾಜುಗೆ 'ಕಸಾಪ ದತ್ತಿ ಪ್ರಶಸ್ತಿ'



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ'ಗೆ ಕಥೆಗಾರ್ತಿ ಮಿತ್ರಾ ವೆಂಕಟ್ರಾಜು ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ.

ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿಗೆ ಆಯ್ಕೆಯಾಗಿರುವ ಮಿತ್ರಾ ವೆಂಕಟ್ರಾಜು ಮೂಲತಃ ಕುಂದಾಪುರದವರು. ಸದ್ಯ ಮುಂಬೈನಲ್ಲಿ ನೆಲಸಿದ್ದಾರೆ. ಇವರು ಕನ್ನಡದ ಪ್ರಮುಖ ಕಥೆಗಾರ್ತಿಯರಲ್ಲಿ ಒಬ್ಬರಾಗಿದ್ದು, 'ರುಕುಮಾಯಿ', 'ಹಕ್ಕಿ ಮತ್ತು ಅವಳು', 'ಮಾಯಕದ ಸತ್ಯ', 'ನನ್ನಕ್ಕ ನಿಲೂಫರ್' ಎಂಬ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಪಾಚಿ ಕಟ್ಟಿದ ಪಗಾರ' ಅವರ ಕಾದಂಬರಿ, ಅನುವಾದ ಕ್ಷೇತ್ರದಲ್ಲೂ ಅವರು ಕೆಲಸ ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕ್ಷುಲ್ಲಕ ಪ್ರಕರಣ: ಪೊಲೀಸರಿಗೆ ಕಠಿಣ ಎಚ್ಚರಿಕೆ

ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೆ..!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈಯಕ್ತಿಕ ದ್ವೇಷದ ಬಲಿಪೀಠ ಏರಿ ಕ್ಷುಲ್ಲಕ ಕಾರಣಗಳಿಗಾಗಿ ಅಪರಾಧ ನ್ಯಾಯ ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಳ್ಳುವ ಪ್ರಕರಣಗಳಲ್ಲಿ ಪೊಲೀಸರು ಅತ್ಯಂತ ಮುತುವರ್ಜಿಯಿಂದ ಮುಂದುವರಿಯಬೇಕು' ಎಂದು ಹೈಕೋರ್ಟ್, ಪೊಲೀಸರಿಗೆ ಕಠಿಣ ಎಚ್ಚರಿಕೆ ನೀಡಿದೆ.

'ತೊಂದರೆ ನೀಡುತ್ತಿದೆ ಎಂಬ ಕಾರಣವನ್ನು ಮುಂದುಮಾಡಿ ಬೆಕ್ಕನ್ನು ಒತ್ತೆಯಾಳಾಗಿ ಇಟ್ಟುಕೊಂಡಿದ್ದಾರೆ' ಎಂದು ಆರೋಪಿಸಲಾದ ಪ್ರಕರಣವನ್ನು ರದ್ದುಪಡಿಸುವಂತೆ ಕೋರಿದ್ದ ಆನೇಕಲ್ ತಾಲ್ಲೂಕಿನ ಶಿಕಾರಿಪಾಳ್ಯದ ಸಿರಾಜ್ ಲೇಔಟ್ ನಿವಾಸಿ ತಾಹಾ ಹುಸೈನ್ (31) ಅವರ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ನನ್ನ ಮನೆಯ ಬೆಕ್ಕು ಕಳವಾಗಿದೆ ಎಂದು ಆರೋಪಿಸುವ ಮೂಲಕ ನಾಟಕದ ಅಂಕಗಳನ್ನೇ ಹೊಸೆದಿರುವ ಈ ಪ್ರಕರಣದ ದೂರುದಾರ ಮಹಿಳೆ ನಿಖಿತಾ ಅಂಜನಾ ಅಯ್ಯರ್ ವಿರುದ್ಧ ತಾಹಾ ಹುಸೈನ್ ಕ್ರಿಮಿನಲ್ ಪ್ರಕರಣ ದಾಖಲಿಸಲು ಸ್ವತಂತ್ರರಿದ್ದಾರೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ತಾಹಾ ಹುಸೈನ್ ವಿರುದ್ಧ ಆನೇಕಲ್‌ನ ನಾಲ್ಕನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಿ ಆದೇಶಿಸಿದೆ.

'ಇಂತಹವುಗಳಿಂದ ನ್ಯಾಯಾಂಗದ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಿದಂತಾಗುವುದನ್ನು ಹೊರತುಪಡಿಸಿ ಬೇರಾವುದೇ ಪುರುಷಾರ್ಥ ಸಾಧನೆಯಾಗುವುದಿಲ್ಲ. ಈ ಪ್ರಕರಣದಲ್ಲಿ ಡೈಸಿ ಎಂಬ ಬೆಕ್ಕಿಗೆ ನ್ಯಾಯ ಪಡೆಯಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಪೊಲೀಸರು ಕಠಿಣ ಎಚ್ಚರಿಕೆಗೆ ಅರ್ಹರಾಗಿದ್ದಾರೆ' ಎಂದು ಕಿಡಿಕಾರಿದೆ.

ಏನೀ ವಿಚಿತ್ರ ಪ್ರಕರಣ?



ಇಂತಹ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯನ್ನು ಮುಂದುವರಿಸಲು ಹೈಕೋರ್ಟ್ ಅನುಮತಿ ನೀಡಿದ್ದೇ ಆದರೆ, ಅದು ನ್ಯಾಯಾಂಗದ ವಿಡಂಬನೆಯಾಗುತ್ತದೆ
ಎಂ.ನಾಗಪ್ರಸನ್ನ, ಹೈಕೋರ್ಟ್ ನ್ಯಾಯಮೂರ್ತಿ

'ನಾನು ಸಾಕಿದ್ದ ಡೈಸಿ ಬೆಕ್ಕನ್ನು ತಾಹಾ ಹುಸೈನ್ ತಮ್ಮ ಮನೆಯಲ್ಲಿ ಒತ್ತೆಯಾಳಾಗಿ ಇಟ್ಟುಕೊಂಡಿದ್ದಾರೆ. ಇದು ನಮ್ಮ ಮನೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಪತ್ತೆಯಾಗಿದೆ. ನಮ್ಮ ಬೆಕ್ಕನ್ನು ವಾಪಸು ಕೊಡುವಂತೆ ನಾನು ಹೋಗಿ ಕೇಳಿದಾಗ ತಾಹಾ ಹುಸೈನ್ ನನಗೆ ಅವಾಚ್ಯ ಶಬ್ದಗಳಿಂದ ಬೈದು, ಲೈಂಗಿಕ ಸನ್ನೆ ಮಾಡಿ, ಇನ್ನೊಮ್ಮೆ ನಮ್ಮ ಮನೆ ಬಳಿ ಬಂದರೆ ಪ್ರಾಣಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿ ಸಿರಾಜ್ ಲೇಔಟ್‌ನ ನಿವಾಸಿ ನಿಖಿತಾ ಅಂಜನಾ ಅಯ್ಯರ್ (41) ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ದೂರಿನ ಅನ್ವಯ ತಾಹಾ ಹುಸೈನ್ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 504, 506 ಮತ್ತು 509ರ ಅಡಿಯಲ್ಲಿ ಜೀವ ಬೆದರಿಕೆ, ಶಾಂತಿಭಂಗ ಮತ್ತು ಮಹಿಳೆಯ ಘನತೆಗೆ ಧಕ್ಕೆ ತಂದ ಆರೋಪದಡಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು. ತನಿಖೆ ನಡೆಸಿದ್ದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ದೇವರಾಜ್ ಹಾಗೂ ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ವಾದ ಮಂಡಿಸಿದ್ದರು.

ಲೋಕಾಯುಕ್ತ ದಾಳಿ

ಕೋಲಾರ: ಭೂಪರಿವರ್ತನೆ ಹಾಗೂ ಖಾತೆ ಮಾಡಿಕೊಡಲು ಹಣ ಪಡೆಯುತ್ತಿದ್ದ ಜಿಲ್ಲಾಧಿಕಾರಿ ಕಚೇರಿ ಮೂವರು ಸಿಬ್ಬಂದಿ ಮಂಗಳವಾರ ಜಿಲ್ಲಾ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಮೂವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಬೃಂದಾವನ ಪ್ರವೇಶ ಶುಲ್ಕ ಮತ್ತೆ ಏರಿಕೆ!

ಮಂಡ್ಯ: ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಅಣೆಕಟ್ಟೆಯ ವಿಶ್ವವಿಖ್ಯಾತ 'ಬೃಂದಾವನ' ಉದ್ಯಾನದ ಪ್ರವೇಶ ಶುಲ್ಕವನ್ನು ಜೂನ್ 1ರಿಂದ ಮತ್ತೆ ಏರಿಕೆ ಮಾಡಲಾಗಿದ್ದು, ಪ್ರವಾಸಿಗರ ಅಸಮಾಧಾನಕ್ಕೆ ಕಾರಣವಾಗಿದೆ.

ಕಾವೇರಿ ನೀರಾವರಿ ನಿಗಮದಿಂದ ಬೃಂದಾವನ ಪ್ರವೇಶದ್ವಾರದ ಶುಲ್ಕ, ವಾಹನ ಪಾರ್ಕಿಂಗ್ ಹಾಗೂ ಬೃಂದಾವನ ಮುಖ್ಯರಸ್ತೆ ಮೇಲ್ಸೇತುವೆ ಟೋಲ್ ಮೇ 1ರಿಂದ 2 ಪಟ್ಟು ಹೆಚ್ಚಿಸಲಾಗಿತ್ತು. ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ ಮೇ 2ರಂದು ವಿಶೇಷ ವರದಿ ಪ್ರಕಟವಾಗಿತ್ತು. ಇದರ ಬೆನ್ನಲ್ಲೇ ರೈತಸಂಘದವರು ಪ್ರತಿಭಟಿಸಿದ ಪರಿಣಾಮ ಶುಲ್ಕ ಇಳಿಸಲಾಗಿತ್ತು.

6 ವರ್ಷ ಮೇಲಿನವರಿಗೆ ₹50ರಿಂದ ₹100, 3ರಿಂದ 6 ವರ್ಷದವರಿಗೆ ₹10ರಿಂದ ₹50ಕ್ಕೆ ಶುಲ್ಕ ಹೆಚ್ಚಿಸಲಾಗಿದೆ.


ಪಾರ್ಕಿಂಗ್ ಶುಲ್ಕವನ್ನು ದ್ವಿಚಕ್ರ ವಾಹನಕ್ಕೆ ₹10ರಿಂದ ₹20, ತ್ರಿಚಕ್ರ ವಾಹನಕ್ಕೆ ₹20ರಿಂದ ₹50, ನಾಲ್ಕು ಚಕ್ರಗಳ (ಕಾರು, ಜೀಪು) ವಾಹನಗಳಿಗೆ ₹50ರಿಂದ ₹100, ಟೆಂಪೊ ಟ್ರಾವಲರ್ ಮತ್ತು ಮಿನಿ ಬಸ್‌ಗಳಿಗೆ ₹70ರಿಂದ ₹100 ಹಾಗೂ ಬಸ್‌ಗಳಿಗೆ ₹100ರಿಂದ ₹200ಕ್ಕೆ ಹೆಚ್ಚಿಸಲಾಗಿದೆ.

'ಬೃಂದಾವನ ಮೇಲ್ಸೇತುವೆ ಟೋಲ್ ಅಕ್ರಮವಾಗಿ ವಸೂಲಿ ಮಾಡಲಾಗುತ್ತಿದೆ' ಎಂಬ ರೈತಸಂಘದ ಆರೋಪದ ನಡುವೆಯೂ ಮತ್ತೆ ಟೋಲ್ ಶುಲ್ಕ ಸಂಗ್ರಹಿಸಲಾಗುತ್ತಿದೆ. 'ದರ ಇಳಿಕೆ ಬಗ್ಗೆ ಯಾವುದೇ ಆದೇಶ ಬಂದಿಲ್ಲ. ಹೀಗಾಗಿ ಹೊಸ ಟೆಂಡರ್ ನಿಯಮದ ಪ್ರಕಾರ ಶುಲ್ಕ ಏರಿಸಲಾಗಿದೆ. ಎಂದು ಕಾವೇರಿ ನೀರಾವರಿ ನಿಗಮದ ಎಸ್‌ಇ ರಘುರಾಮ್ ತಿಳಿಸಿದರು.

‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ವಂಚಿಸಿದ್ದ ಇಬ್ಬರ ಬಂಧನ • ಸೈಬರ್ ಠಾಣೆ ಪೊಲೀಸರ ಕಾರ್ಯಾಚರಣೆ

ವೃದ್ಧ ದಂಪತಿಯಿಂದ ₹4.79 ಕೋಟಿ ಸುಲಿಗೆ

ಪ್ರಜಾವಾಣಿ ವಾರ್ತೆ


ನಾರಾಯಣ


ಈಶ್ವರ್ ಸಿಂಗ್

ಬೆಂಗಳೂರು: ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ವೃದ್ಧ ದಂಪತಿಯನ್ನು ಬೆದರಿಸಿ ವಂಚಿಸಿದ್ದ ಇಬ್ಬರು ಆರೋಪಿಗಳನ್ನು ಬೆಂಗಳೂರು ಆಗ್ನೇಯ ವಿಭಾಗದ ಸೈಬರ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾರಾಯಣ್ ಸಿಂಗ್ ಚೌಧರಿ ಹಾಗೂ ಈಶ್ವರ್ ಸಿಂಗ್ ಬಂಧಿತರು.

ಮಂಜುನಾಥ್ ಎಂಬುವವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ದಂಪತಿಯನ್ನು ಬೆದರಿಸಿ, ಸೈಬರ್ ವಂಚಕರು ಹಂತ ಹಂತವಾಗಿ ₹4.79 ಕೋಟಿ ಸುಲಿಗೆ ಮಾಡಿದ್ದರು. ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನೂ ಪಡೆದುಕೊಂಡಿದ್ದರು. ಮತ್ತಷ್ಟು ಹಣ ನೀಡುವಂತೆ ವಂಚಕರು ಪೀಡಿಸಿದಾಗ ವೃದ್ಧ ದಂಪತಿ ಸೈಬರ್ ಠಾಣೆಗೆ ದೂರು ನೀಡಿದ್ದರು ಎಂದು ಸೈಬರ್ ಪೊಲೀಸರು ತಿಳಿಸಿದರು.

ಎಂಜಿನಿಯರ್ ಆಗಿದ್ದ ಮಂಜುನಾಥ್ ಅವರು ನೈಜೀರಿಯಾದಲ್ಲಿ 31 ವರ್ಷ ಕೆಲಸ ಮಾಡಿದ್ದರು. ನಿವೃತ್ತಿಯ ಬಳಿಕ ಬೆಂಗಳೂರಿನಲ್ಲಿ ನೆಲಸಿದ್ದರು. ವಿವಿಧ ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿದ್ದರು ಎಂದು ಮೂಲಗಳು ಹೇಳಿವೆ.

‘ಬ್ಯಾಂಕ್ ಪ್ರತಿನಿಧಿಗಳ ಸೋಗಿನಲ್ಲಿ ಮಾರ್ಚ್ ಮೊದಲ ವಾರದಲ್ಲಿ ಮಂಜುನಾಥ್ ಅವರಿಗೆ ಸೈಬರ್ ವಂಚಕರು ಕರೆ ಮಾಡಿದ್ದರು. ತಮ್ಮ ಬ್ಯಾಂಕ್ ಖಾತೆಗಳ ಮೂಲಕ ಅಕ್ರಮವಾಗಿ ಹಣ ವರ್ಗಾವಣೆ ಆಗುತ್ತಿದ್ದು, ಅದಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಸಿಬಿಐನಲ್ಲಿ ಪ್ರಕರಣ ದಾಖಲಾಗಿದೆ ಎಂಬುದಾಗಿ ಬೆದರಿಸಿದ್ದರು. ಅಲ್ಲದೇ, ನಕಲಿ ಬಂಧನದ ವಾರಂಟ್ ಪ್ರತಿಯನ್ನು ಮಂಜುನಾಥ್ ಅವರ ವಾಟ್ಸ್‌ಆ್ಯಪ್‌ಗೂ ಕಳುಹಿಸಿ, ತಮ್ಮನ್ನು ಬಂಧಿಸುತ್ತೇವೆ ಎಂದು ಹೇಳಿದ್ದರು. ಬಂಧಿಸದೇ ಇರಲು ಹಣ ನೀಡುವಂತೆ ಕೇಳಿದ್ದರು. ಬೆದರಿಕೆಯಿಂದ ಆತಂಕಗೊಂಡಿದ್ದ ದಂಪತಿ, ಹಂತ ಹಂತವಾಗಿ ಸೈಬರ್ ವಂಚಕರಿಗೆ ₹4.79 ಕೋಟಿ ನೀಡಿದ್ದರು. ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನೂ ಸೈಬರ್ ವಂಚಕರು ಪಡೆದುಕೊಂಡಿದ್ದರು. ಮತ್ತಷ್ಟು ಹಣ ನೀಡುವಂತೆ ಪೀಡಿಸಿದಾಗ ವೃದ್ಧ ದಂಪತಿ ಆಗ್ನೇಯ ವಿಭಾಗದ ಸೈಬರ್ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

ಆರೋಪಿಗಳು, ಶ್ರೀಲಂಕಾಕ್ಕೆ ತೆರಳಿ ಅಲ್ಲಿ ವಂಚನೆ ಹಣದಿಂದ ಮೋಜು–ಮಸ್ತಿ ಮಾಡಿದ್ದರು. ಸದ್ಯ ಆರೋಪಿಗಳ ವಿಚಾರಣೆ ನಡೆಸುತ್ತಿದ್ದು, ವಂಚಿಸಿರುವ ಹಣದ ಜಪ್ತಿ ಪ್ರಕ್ರಿಯೆ ನಡೆಯುತ್ತಿದೆ ಎಂದು ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ತಿಳಿಸಿದರು.

ಅಪರಾಧ ಸುದ್ದಿ

ಮಹಿಳೆಯರಿಗೆ ಮುತ್ತಿಟ್ಟ ಪ್ರಕರಣ: ಆರೋಪಿ ಸೆರೆ


ಮದನ್

ಇಬ್ಬರು ಮಹಿಳೆಯರನ್ನು ತಬ್ಬಿಕೊಂಡು ಬಲವಂತವಾಗಿ ಚುಂಬಿಸಿ ಪರಾರಿಯಾಗಿದ್ದ ಆರೋಪಿಯನ್ನು ಪುಲಿಕೇಶಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಾಣಸವಾಡಿ ನಿವಾಸಿ ಮದನ್(37) ಬಂಧಿತ ಆರೋಪಿ. ಜೂನ್ 6ರಂದು ಆರೋಪಿ ಕೃತ್ಯ ಎಸಗಿ ಪರಾರಿ ಆಗಿದ್ದ ಎಂದು ಪೊಲೀಸರು ಹೇಳಿದರು.

‘ಠಾಣಾ ವ್ಯಾಪ್ತಿಯ ಉದ್ಯಾನವೊಂದರಲ್ಲಿ ಮಹಿಳೆಯೊಬ್ಬರು ವಾಯುವಿಹಾರಕ್ಕೆ ತೆರಳಿದ್ದರು. ಆಗ ಮಹಿಳೆಯನ್ನು ಆರೋಪಿ ಬಲವಂತವಾಗಿ ತಬ್ಬಿಕೊಂಡು ಮುತ್ತಿಟ್ಟಿದ್ದ. ಅಂದೇ ಸಂಜೆ ಅಂಗಡಿಯೊಂದರ ಎದುರು ನಿಂತಿದ್ದ ಮಹಿಳೆ ಮೇಲೆ ದೌರ್ಜನ್ಯ ಎಸಗಿದ್ದ. ಘಟನೆಯಿಂದ ವಿಚಲಿತರಾದ ಮಹಿಳೆಯರು, ಜೋರಾಗಿ ಕಿರುಚಾಟ ನಡೆಸಿದ್ದರು. ಸ್ಥಳೀಯರು ಆರೋಪಿಯನ್ನು ಹಿಡಿಯುವಷ್ಟರಲ್ಲಿ ಆತ ಪರಾರಿ ಆಗಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಸ್ಥಳೀಯರು ಮಾಹಿತಿ ನೀಡಿದ್ದರು. ಹೊಯ್ಸಳ ಸಿಬ್ಬಂದಿ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದರು. ಆರೋಪಿ ಪರಾರಿ ಆಗುತ್ತಿರುವ ದೃಶ್ಯವು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆ ಆಗಿತ್ತು. ದೃಶ್ಯಾವಳಿ ಆಧರಿಸಿ ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿಯು ಸ್ನಾತಕೋತ್ತರ ಪದವೀಧರನಾಗಿದ್ದು, ಪೋಷಕರ ಜತೆಗೆ ಬಾಣಸವಾಡಿಯಲ್ಲಿ ನೆಲಸಿದ್ದ. ಈ ಹಿಂದೆ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಆಗಲೂ ವಿಚಿತ್ರವಾಗಿ ವರ್ತಿಸುತ್ತಿದ್ದ ಎನ್ನಲಾಗಿದೆ. ಆಗ ಆರೋಪಿಯನ್ನು ಪರೀಕ್ಷಿಸಿದ್ದ ವೈದ್ಯರು, ಮದನ್ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದಾನೆ ಎಂಬುದಾಗಿ ಹೇಳಿದ್ದರು ಎಂಬ ಮಾಹಿತಿ ಗೊತ್ತಾಗಿದೆ.



ಉರುಳಿ ಬಿದ್ದಿರುವ ಶಾಲಾ ಬಸ್

ಶಾಲಾ ಬಸ್ ಮುಖಾಮುಖಿ ಡಿಕ್ಕಿ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಬೆಂಗಳೂರು ಉತ್ತರ ತಾಲ್ಲೂಕಿನ ಮಾದಾವರದ ಪೀಕಾಕ್ ಬಡಾವಣೆಯಲ್ಲಿ ಮಂಗಳವಾರ ಬೆಳಿಗ್ಗೆ ಶಾಲಾ ಬಸ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಬಸ್‌ವೊಂದು ಉರುಳಿ ಬಿದ್ದಿದೆ. ಘಟನೆಯಲ್ಲಿ 13 ವಿದ್ಯಾರ್ಥಿಗಳಿಗೆ ಸಣ್ಣಪುಟ್ಟ ಗಾಯವಾಗಿದೆ.

ವಿದ್ಯಾರ್ಥಿಗಳ ಪೋಷಕರು ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ಚಾಲಕರಾದ ವಿಜಯಕುಮಾರ್ ಮತ್ತು ಪುನೀತ್ ಅವರನ್ನು ವಶಕ್ಕೆ ಪಡೆದಿದ್ದಾರೆ.

ಮಕ್ಕಳಿಗೆ ಗಂಭೀರ ಗಾಯಗಳಾಗಿದ್ದರೆ ಅಥವಾ ಪ್ರಾಣ ಹಾನಿ ಸಂಭವಿಸಿದ್ದರೆ ಯಾರು ಹೊಣೆ ಎಂದು ಪೋಷಕರು ಆಕ್ರೋಶ ಹೊರಹಾಕಿದರು. ಚಾಲಕರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆಯೂ ಆಗ್ರಹಿಸಿದರು.

ಬಿಜೆಪಿ, ಜೆಡಿಎಸ್ ವಿರುದ್ಧ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರು

ಜಾಲತಾಣಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ‘ಐಸಿಸಿ ಅಧ್ಯಕ್ಷ ಜಯ್ ಶಾ ಘಟನೆಗೆ ಮೂಲ ಕಾರಣ’
- ‘ಸರ್ಕಾರದ ವಿರುದ್ಧ ಅಪಪ್ರಚಾರ’

ಬೆಂಗಳೂರು: ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಹಾಗೂ ಜೆಡಿಎಸ್‌ನ ಸಾಮಾಜಿಕ ಜಾಲತಾಣಗಳ ವಿಭಾಗದ ಮುಖ್ಯಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕೋರಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಅವರಿಗೆ ಕೆಪಿಸಿಸಿ ಪದಾಧಿಕಾರಿಗಳು ಮಂಗಳವಾರ ಮನವಿ ಸಲ್ಲಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ನೇತೃತ್ವದ ನಿಯೋಗವು ಮನವಿ ಸಲ್ಲಿಸಿ, ಕ್ರಮಕ್ಕೆ ಆಗ್ರಹಿಸಿತು.

ಆರ್‌ಸಿಬಿ ತಂಡದ ವಿಜಯೋತ್ಸವದ ಸಂದರ್ಭದಲ್ಲಿ ವಿರೋಧ ಪಕ್ಷಗಳು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಹೇಳಿಕೆ ಪ್ರಕಟಿಸಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದಿವೆ. ಅವರ ಹೇಳಿಕೆ ಹಾಗೂ ಮಾಹಿತಿ ಆಧರಿಸಿ ತನಿಖೆ ನಡೆಸಬೇಕು ಎಂದು ಕೋರಿದರು.

‘ಐಪಿಎಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ತಂಡವು ಜಯ ಗಳಿಸಿದ ಮರುದಿನವೇ ವಿಜಯೋತ್ಸವಕ್ಕೆಂದು ನಗರಕ್ಕೆ ಬಂದಿತ್ತು. ಆ ಸಂದರ್ಭದಲ್ಲಿ ಕೆಎಸ್‌ಸಿಎ, ಡಿಎನ್‌ಎ (ಇವೆಂಟ್ ಮ್ಯಾನೇಜ್‌ಮೆಂಟ್) ಹಾಗೂ ಆರ್‌ಸಿಬಿಯವರು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳದೇ ಇರುವ ಕಾರಣಕ್ಕೆ ದುರ್ಘಟನೆ ಸಂಭವಿಸಿದೆ. ಆರ್‌ಸಿಬಿ ಗೆದ್ದ ಸಂದರ್ಭದಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನ ಸಾಮಾಜಿಕ ಜಾಲತಾಣಗಳಲ್ಲಿ ರಾಜ್ಯ ಸರ್ಕಾರ ಹಾಗೂ ಕ್ರೀಡಾ ಅಭಿಮಾನಿಗಳಲ್ಲಿ ಆಕ್ರೋಶ ತರುವ ಹೇಳಿಕೆಗಳನ್ನು ಪ್ರಕಟಿಸಲಾಗಿತ್ತು. ಮೆರವಣಿಗೆಗೆ ಅವಕಾಶ ನೀಡುವಂತೆ ಆಗ್ರಹಿಸಲಾಗಿತ್ತು. ದುರಂತ ನಡೆದ ಬಳಿಕ ಮಾಧ್ಯಮಗಳಿಗೆ ಸುಳ್ಳು ಮಾಹಿತಿ ನೀಡಿ, ಸರ್ಕಾರದ ವಿರುದ್ಧ ಅಪಪ್ರಚಾರ ನಡೆಸಲಾಗುತ್ತಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಪಹಲ್ಗಾಮ್ ಘಟನೆ ಬಳಿಕ ಆಪರೇಷನ್ ಸಿಂಧೂರ ನಡೆದಿತ್ತು. ಐಪಿಎಲ್ ಟೂರ್ನಿ ಮುಂದೂಡಲಾಗಿತ್ತು. ಕದನ ವಿರಾಮ ಘೋಷಣೆಯಾದ ಬಳಿಕ ಮತ್ತೆ ಟೂರ್ನಿ ಆರಂಭಿಸಲಾಯಿತು. ಐಸಿಸಿ ಅಧ್ಯಕ್ಷ ಜಯ್ ಶಾ ಅವರೇ ಘಟನೆಗೆ ಮೂಲ ಕಾರಣ’ ಎಂದು ಮುಖಂಡರು ದೂರಿದರು.

ಪಂದ್ಯ ಗೆದ್ದ 24 ಗಂಟೆಯೊಳಗೆ ಆರ್‌ಸಿಬಿ ತಂಡವು ಬೆಂಗಳೂರಿಗೆ ಬರುವ ಅಗತ್ಯ ಇರಲಿಲ್ಲ. ಈ ಸಂಬಂಧ ಆರ್‌ಸಿಬಿ ಮ್ಯಾನೇಜ್‌ಮೆಂಟ್, ಡಿಎನ್‌ಎ ಹಾಗೂ ಕೆಎಸ್‌ಸಿಎ ಕ್ರಮ ತೆಗೆದುಕೊಳ್ಳಬೇಕಿತ್ತು. ದುರಂತಕ್ಕೂ ಮುನ್ನ ವಿರೋಧ ಪಕ್ಷಗಳು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ್ದ ಮಾಹಿತಿಯನ್ನೂ ತನಿಖೆಗೆ ಪರಿಗಣಿಸಬೇಕು ಎಂದು ಮುಖಂಡರು ಕೋರಿದರು.

ನಿಯೋಗದಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ಪುಟ್ಟರಾಜು, ನವೀನ್ ಮೊದಲಾದವರು ಇದ್ದರು.


ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರಿಗೆ ಕೆಪಿಸಿಸಿ ನಿಯೋಗವು ಮಂಗಳವಾರ ಮನವಿ ಸಲ್ಲಿಸಿತು

‘ಅನುಮತಿ ನೀಡಿದ ಫೈಲ್ ಬಿಡುಗಡೆಗೊಳಿಸಿ’

ಪೀಣ್ಯ ದಾಸರಹಳ್ಳಿ: ಆರ್‌ಸಿಬಿ ವಿಜಯೋತ್ಸವಕ್ಕೆ ಅನುಮತಿ ನೀಡಿದ ಕಡತವನ್ನು ಸಾರ್ವಜನಿಕರ ಎದುರು ಬಹಿರಂಗಪಡಿಸಬೇಕು ಹಾಗೂ ಡಿಪಿಎಆರ್ ಕಾರ್ಯದರ್ಶಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರನ್ನು ಅಮಾನತು ಮಾಡಬೇಕು’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತದಲ್ಲಿ ಸಾವಿಗೀಡಾದ ಟಿ. ದಾಸರಹಳ್ಳಿಯ ಹಾವನೂರು ಬಡಾವಣೆ ನಿವಾಸಿ ಭೂಮಿಕ್ ಅವರ ಮನೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ಶಾಸಕ ಎಸ್. ಮುನಿರಾಜು, ಬೇಲೂರು ಶಾಸಕ ಸುರೇಶ್ ಅವರೊಂದಿಗೆ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರ್.ಅಶೋಕ, ‘ವಿಜಯೋತ್ಸವ ಕಾರ್ಯಕ್ರಮ ನಡೆಸಲು ಸಿಬ್ಬಂದಿ ಕೊರತೆ ಇದೆ ಎಂದು ಡಿಸಿಪಿ ಅವರು ಡಿಪಿಎಆರ್ ಇಲಾಖೆಗೆ ಕಡತ ಕಳುಹಿಸಿದ್ದಾರೆ. ಆ ಕಡತ ಮುಖ್ಯಮಂತ್ರಿಗೆ ಹೋಗಿದೆ. ಅವರು ಅನುಮತಿ ನೀಡಿದ್ದಾರೆ. ಆದರೆ, ಈಗ ಕಡತವೇ ಮಾಯವಾಗಿದೆ. ಇದಕ್ಕೆ ಕಾರಣರಾದ ಡಿಪಿಎಆರ್ ಕಾರ್ಯದರ್ಶಿ ಮತ್ತು ಮುಖ್ಯಕಾರ್ಯದರ್ಶಿ ಅವರನ್ನು ಅಮಾನತು ಮಾಡಬೇಕು’ ಎಂದು ಆಗ್ರಹಿಸಿದರು.

ಸರಣಿ ಅಪಘಾತ: ಚಾಲಕನಿಗೆ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಮೆಯೊ ಹಾಲ್ ಬಳಿ ಸೋಮವಾರ ಸಂಜೆ ಸರಣಿ ಅಪಘಾತಕ್ಕೆ ಕಾರಣವಾದ ಸರಕು ಸಾಗಣೆ ವಾಹನದ ಚಾಲಕನ ಪತ್ತೆಗೆ ಅಶೋಕ ನಗರ ಸಂಚಾರ ಠಾಣೆಯ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಕಾರು, ದ್ವಿಚಕ್ರ ವಾಹನ ಹಾಗೂ ಸಿಗ್ನಲ್‌ನ ಕಂಬಕ್ಕೆ ಡಿಕ್ಕಿ ಹೊಡೆಸಿ, ಸ್ಥಳದಲ್ಲೇ ಸರಕು ಸಾಗಣೆ ವಾಹನವನ್ನು ಬಿಟ್ಟು ಚಾಲಕ ಪರಾರಿ ಆಗಿದ್ದಾನೆ. ಪಿ.ಕೆ. ಹನೀಜ್ ಎಂಬುವವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಇನೋವಾ ಕಾರೊಂದು ಮಹಾತ್ಮ ಗಾಂಧಿ ರಸ್ತೆಯ ಕಾವೇರಿ ಎಂಪೋರಿಯಂ ಜಂಕ್ಷನ್ ಕಡೆಯಿಂದ ಮೆಯೊ ಹಾಲ್ ಜಂಕ್ಷನ್ ಕಡೆಗೆ ಸಾಗುತ್ತಿತ್ತು. ಜಂಕ್ಷನ್‌ನಲ್ಲಿ ರೆಡ್ ಸಿಗ್ನಲ್ ಇದ್ದ ಕಾರಣಕ್ಕೆ ಚಾಲಕ ಕಾರು ನಿಲುಗಡೆ ಮಾಡಿಕೊಂಡು ಕಾಯುತ್ತಿದ್ದರು. ಹಿಂಬದಿಯಿಂದ ಸರಕು ಸಾಗಣೆ ವಾಹನವೊಂದು ಬಂದು ಕಾರಿಗೆ ಡಿಕ್ಕಿ ಹೊಡೆದಿತ್ತು. ಮುಂದೆ ನಿಂತಿದ್ದ ಇನ್ನೊಂದು ದ್ವಿಚಕ್ರ ವಾಹನಕ್ಕೂ ಸರಕು ಸಾಗಣೆ ವಾಹನ ಡಿಕ್ಕಿ ಹೊಡೆದಿತ್ತು. ಆಗ ದ್ವಿಚಕ್ರ ವಾಹನ ಸವಾರ ವಿಜಯ್ ಕುಮಾರ್ (40) ಹಾಗೂ ಹಿಂಬದಿಯಲ್ಲಿ ಕುಳಿತಿದ್ದ ಅಂಜಲಿ (36) ಅವರು ಕೆಳಕ್ಕೆ ಬಿದ್ದಿದ್ದರು. ಅಂಜಲಿ ಅವರ ಮೇಲೆ ಸರಕು ಸಾಗಣೆ ವಾಹನದ ಚಕ್ರಗಳು ಹರಿದ ಪರಿಣಾಮ ಅವರು ಮೃತಪಟ್ಟರು’ ಎಂದು ಸಂಚಾರ ಪೊಲೀಸರು ಹೇಳಿದರು.

‘ಸರಕು ಸಾಗಣೆ ವಾಹನವು ಎರಡು ವಾಹನಗಳಿಗೆ ಡಿಕ್ಕಿ ಹೊಡೆದು ಬಳಿಕ ಸಿಗ್ನಲ್‌ನ ಕಂಬಕ್ಕೂ ಡಿಕ್ಕಿ ಹೊಡೆದಿದೆ. ಚಾಲಕ ಸ್ಥಳದಲ್ಲೇ ವಾಹನ ಬಿಟ್ಟು ಪರಾರಿ ಆಗಿದ್ದಾನೆ. ವಾಹನ ಮುಂಭಾಗ ನಜ್ಜುಗುಜ್ಜಾಗಿದೆ. ಸರಕು ಸಾಗಣೆ ವಾಹನವನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿದ್ದೇ ಸರಣಿ ಅಪಘಾತಕ್ಕೆ ಕಾರಣವಾಗಿದೆ’ ಎಂದು ಸಂಚಾರ ಪೊಲೀಸರು ತಿಳಿಸಿದರು.

ವಿಜಯಕುಮಾರ್ ಹಾಸ್ಮಾಟ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಿಎನ್‌ಎಸ್ ಸೆಕ್ಷನ್ 281, 125(ಎ), 106(1) ಹಾಗೂ ಮೋಟಾರು ವಾಹನಗಳ ಕಾಯ್ದೆಯಡಿ ಚಾಲಕನ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.


ಸಿಗ್ನಲ್ ಕಂಬಕ್ಕೆ ಡಿಕ್ಕಿ ಹೊಡೆದ ಸರಕು ಸಾಗಣೆ ವಾಹನ

ಗಲಾಟೆ: ರೌಡಿ ಕೊಲೆ

ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ರಾತ್ರಿ ನಡೆದ ಗಲಾಟೆಯಲ್ಲಿ ರೌಡಿಯೊಬ್ಬನನ್ನು ಕೊಲೆ ಮಾಡಲಾಗಿದೆ. ಬೆಳ್ತೂರು ನಿವಾಸಿ ಪುನೀತ್ ಅಲಿಯಾಸ್ ನೇಪಾಳಿ (26) ಕೊಲೆಯಾದ ರೌಡಿಶೀಟರ್.

ಕೃತ್ಯ ಎಸಗಿದ ರೌಡಿಶೀಟರ್ ಶ್ರೀಕಾಂತ್ ಹಾಗೂ ಆತನ ಸಹಚರರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಕಾಡುಗೋಡಿ ಠಾಣೆಯ ರೌಡಿಶೀಟರ್ ಆಗಿರುವ ಪುನೀತ್ ವಿರುದ್ಧ ಕೊಲೆ ಯತ್ನ, ಹಲ್ಲೆ ಆರೋಪದಡಿ ನಾಲ್ಕು ಪ್ರಕರಣಗಳು ದಾಖಲಾಗಿವೆ. ಇನ್ನು ಶ್ರೀಕಾಂತ್ ಕೂಡ ರೌಡಿಶೀಟರ್ ಆಗಿದ್ದಾನೆ. ಕೆಲವು ತಿಂಗಳ ಹಿಂದೆ ಪುನೀತ್ ಮತ್ತು ಶ್ರೀಕಾಂತ್ ಹಳೇ ವಿಚಾರಕ್ಕೆ ಜಗಳವಾಗಿತ್ತು. ಅಂದಿನಿಂದ ಇಬ್ಬರು ಪರಸ್ಪರ ದ್ವೇಷ ಸಾಧಿಸುತ್ತಿದ್ದರು ಎಂದು ಪೊಲೀಸರು ಹೇಳಿದರು.

‘ತುಮಕೂರು ಬೆಂಗಳೂರು ಉತ್ತರ ಜಿಲ್ಲೆ’

ತುಮಕೂರು: ಬೆಂಗಳೂರು ಮಹಾನಗರದ ಜತೆಗೆ ತುಮಕೂರು ಜಿಲ್ಲೆಯನ್ನು ಬೆಸೆಯುವ ಪ್ರಯತ್ನ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ‘ಬೆಂಗಳೂರು ಉತ್ತರ’ ಜಿಲ್ಲೆಯನ್ನಾಗಿ ಮಾರ್ಪಡಿಸುವ ಸಿದ್ಧತೆ ನಡೆದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ಈ ವಿಷಯ ಖಚಿತ ಪಡಿಸಿದರು. ಬೆಂಗಳೂರು ನಗರ ಶರವೇಗದಲ್ಲಿ ಬೆಳವಣಿಗೆ ಕಾಣುತ್ತಿದೆ. ಮುಂದಿನ ದಿನಗಳಲ್ಲಿ ನೆರೆಹೊರೆ ತುಮಕೂರು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರದವರೆಗೂ ವಿಸ್ತರಿಸಿಕೊಳ್ಳಬಹುದು. ಅಂತಹ ಸಂದರ್ಭದಲ್ಲಿ ತುಮಕೂರು ಜಿಲ್ಲೆ ಎನ್ನುವುದಕ್ಕೂ ‘ಬೆಂಗಳೂರು ಉತ್ತರ’ ಜಿಲ್ಲೆ ಎನ್ನುವುದಕ್ಕೂ ವ್ಯತ್ಯಾಸವಿದೆ. ತುಮಕೂರು ಜಿಲ್ಲೆ ಎಂದರೆ ಎಲ್ಲೋ ಇದೇ ಎಂಬ ಭಾವನೆ ಮೂಡುತ್ತದೆ. ಇದಕ್ಕಾಗಿ ಇಂತಹದೊಂದು ಪ್ರಯತ್ನ ನಡೆದಿದೆ ಎಂದು ವಿವರಿಸಿದರು.

ಈಗಾಗಲೇ 14 ಗ್ರಾಮ ಪಂಚಾಯಿತಿಗಳನ್ನು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಲು ಪ್ರಸ್ತಾವ ಸಿದ್ಧಪಡಿಸಲಾಗಿದೆ. ಮುಂದಿನ ದಿನಗಳಲ್ಲಿ ತುಮಕೂರು ನಗರವೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲಿದೆ ಎಂದರು.

ಅವಳ ಹೆಜ್ಜೆ ಕಿರುಚಿತ್ರೋತ್ಸವ 14ಕ್ಕೆ

ಬೆಂಗಳೂರು: ‘ಗುಬ್ಬಿವಾಣಿ ಟ್ರಸ್ಟ್‌ನಿಂದ ಜೂನ್ 14ರಂದು ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ‘ಅವಳ ಹೆಜ್ಜೆ ಕಿರು ಚಿತ್ರೋತ್ಸವ’ದ ಆಯ್ದ ಚಿತ್ರಗಳ ಪ್ರದರ್ಶನ ನಡೆಯಲಿದ್ದು, ಇದೇ ಸಂದರ್ಭದಲ್ಲಿ ಪ್ರಶಸ್ತಿ ವಿಜೇತರ ಹೆಸರುಗಳನ್ನು ಘೋಷಿಸಲಾಗುವುದು’ ಎಂದು ಟ್ರಸ್ಟ್‌ನ ಅಧ್ಯಕ್ಷೆ ಮಾಳವಿಕಾ ಗುಬ್ಬಿವಾಣಿ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಸ್ಪರ್ಧೆಗೆ 60ಕ್ಕೂ ಹೆಚ್ಚು ಕಿರುಚಿತ್ರಗಳು ಬಂದಿವೆ. ತೀರ್ಪುಗಾರರ ತಂಡವು ಒಂಬತ್ತು ಕಿರು ಚಿತ್ರಗಳನ್ನು ಆಯ್ಕೆ ಮಾಡಿದೆ’ ಎಂದರು.

‘ಅವಳ ಹೆಜ್ಜೆ’ ಸಂಸ್ಥಾಪಕಿ ಶಾಂತಲಾ ದಾಮ್ಲೆ, ‘ಪ್ರಥಮ ಸ್ಥಾನ ಪಡೆದ ಕಿರುಚಿತ್ರಕ್ಕೆ ಅವಳ ಹೆಜ್ಜೆ ಪ್ರಶಸ್ತಿ ಹಾಗೂ ₹1 ಲಕ್ಷ ನಗದು ಬಹುಮಾನ ನೀಡಲಾಗುವುದು. ಆಯ್ದ ಕೆಲವು ಕಿರುಚಿತ್ರಗಳಿಗೆ ₹10 ಸಾವಿರ ನೀಡಲಾಗುವುದು’ ಎಂದರು.

ನಗರದ ಹಲವೆಡೆ ಭಾರಿ ಮಳೆ

ಬೆಂಗಳೂರು: ನಗರದ ಹಲವು ಭಾಗಗಳಲ್ಲಿ ಮಂಗಳವಾರ ರಾತ್ರಿ ಗುಡುಗು ಮಿಂಚು ಸಹಿತ ಭಾರಿ ಮಳೆಯಾಯಿತು. ರಾತ್ರಿ ಸುಮಾರು 10.30ಕ್ಕೆ ಆರಂಭವಾದ ಮಳೆ ತಡರಾತ್ರಿ ವರೆಗೂ ಮುಂದುವರಿಯಿತು. ಹಲವಾರು ರಸ್ತೆಗಳು ಜಲಾವೃತಗೊಂಡಿದ್ದರಿಂದ ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

ಕಸ್ತೂರಿನಗರದ ಬಳಿ ಮಳೆ ನೀರು ನಿಂತು ರಾಮಮೂರ್ತಿನಗರದ ಕಡೆಗೆ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಒಕಳಿಪುರ ಕೆಳಸೇತುವೆಯಲ್ಲಿ ಮಳೆ ನೀರು ನಿಂತು ವಾಹನ ಸಂಚಾರ ಸ್ಥಗಿತಗೊಂಡಿತ್ತು. ರಿಚ್ಮಂಡ್ ರಸ್ತೆ, ಹಲಸೂರು, ಹೊಸೂರು ರಸ್ತೆ, ಹಳೆ ಮದ್ರಾಸ್ ರಸ್ತೆಯಲ್ಲಿ ಒಂದು ಅಡಿಗೂ ಹೆಚ್ಚು ಮಳೆ ನೀರು ನಿಂತು ವಾಹನ ಸವಾರರು ಪರದಾಡಿದರು.

ಬೊಮ್ಮನಹಳ್ಳಿಯಲ್ಲಿ 4.9 ಸೆಂ.ಮೀ, ಕೋರಮಂಗಲ 4.1 ಸೆಂ.ಮೀ, ಬಿಟಿಎಂ ಲೇಔಟ್‌ನಲ್ಲಿ 2.7ಸೆಂ.ಮೀ, ಎಚ್ ಎಸ್ ಆರ್ ಲೇಔಟ್ ನಲ್ಲಿ 2.6 ಸೆಂ.ಮೀ, ಸಂಪಂಗಿರಾಮನಗರ, ಸಿಂಗಸಂದ್ರ, ಮಹದೇವಪುರ, ಪುಲಕೇಶಿ ನಗರ ,ದಯಾನಂದ ನಗರ, ಬಾಣಸವಾಡಿ, ವಿಶ್ವೇಶ್ವರ ಪುರ, ಹಂಪಿನಗರ, ಬೆಳ್ಳಂದೂರು, ಹೊರಮಾವು, ಕೊಟ್ಟೀಗೆಪಾಳ್ಯ, ಬಸವೇಶ್ವರನಗರ, ಜಕ್ಕೂರು, ಪಟ್ಟಾಭಿರಾಮ ನಗರ, ಕಾಟನ್‌ಪೇಟೆ, ವಿದ್ಯಾಪೀಠ, ಗರುಡಾಚಾರ್ ಪಾಳ್ಯ ಸುತ್ತಮುತ್ತ ಪ್ರದೇಶಗಳಲ್ಲಿ ತಲಾ 2ಸೆಂ.ಮೀಗೂ ಹೆಚ್ಚಿನ ಮಳೆಯಾಯಿತು.

ಹೆಬ್ಬಾಳ, ಯಲಹಂಕ, ವಿದ್ಯಾರಣ್ಯ ಪುರ, ಕಮ್ಮನಹಳ್ಳಿ, ರಾಮಮೂರ್ತಿ ನಗರ, ಮಾರತ್ ಹಳ್ಳಿ, ಹೂಡಿ. ಗರುಡಾಚಾರ್ಯ ಪಾಳ್ಯ,, ಎಚ್ ಎ ಎಲ್ ವಿಮಾನ ನಿಲ್ದಾಣ,, ಕೊತ್ತನೂರು, ರಾಜಾಜಿನಗರ, ವಿಜಯನಗರ, ಹಂಪಿನಗರ, ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ, ಕೆಂಗೇರಿ ಸುತ್ತ ಮುತ್ತ ಪ್ರದೇಶಗಳಲ್ಲಿ ಮಳೆಯಾಯಿತು.


ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆಯು ಮಳೆಯಿಂದ ಜಲಾವೃತಗೊಂಡಿದ್ದರಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು


ಮಾದಾರ ಚನ್ನಯ್ಯ ಕೊಳೆಗೇರಿಯ ಶರಣಯ್ಯ ಅವರ ಶೆಡ್‌ನಲ್ಲಿ ಜಮೀರ್ ಅಹಮದ್, ಪ್ರಸಾದ್ ಅಬ್ಬಯ್ಯ ಅವರು ಊಟ ಮಾಡಿದರು

777 ಕುಟುಂಬಗಳಿಗೆ ಹಕ್ಕುಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ವರ್ಷಗಳಿಂದ ದಾಖಲೆ ಇಲ್ಲದೆ ವಾಸಿಸುತ್ತಿದ್ದ 777 ಕುಟುಂಬಗಳಿಗೆ ವಸತಿ ಸಚಿವ ಜಮೀರ್ ಅಹಮದ್ ಅವರು ಮಂಜೂರಾತಿ ಪತ್ರ ಹಾಗೂ ಹಕ್ಕುಪತ್ರಗಳನ್ನು ಮಂಗಳವಾರ ವಿತರಿಸಿದರು.

ಯಶವಂತಪುರ, ರಾಜರಾಜೇಶ್ವರಿ ನಗರ, ಯಲಹಂಕ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಹಕ್ಕಿಪಿಕ್ಕಿ, ಅಲೆಮಾರಿ ಸಮುದಾಯ, ಲೈಂಗಿಕ ಕಾರ್ಯಕರ್ತೆಯರು, ಕುಷ್ಠ ರೋಗದಿಂದ ಗುಣಮುಖರಾದವರಿಗೆ ಹಕ್ಕುಪತ್ರ ನೀಡಿದರು.

ಯಶವಂತಪುರದ ಯಲಚಗುಪ್ಪೆಯ ಹಕ್ಕಿಪಿಕ್ಕಿ ಕಾಲೊನಿಯಲ್ಲಿ 228 ಕುಟುಂಬಗಳಿಗೆ ಹಾಗೂ ಮಾದಿಗರ ಚನ್ನಯ್ಯ ಕೊಳೆಗೇರಿಯಲ್ಲಿ 259 ಮಂದಿಗೆ ಹಕ್ಕುಪತ್ರ, ಲೈಂಗಿಕ ಕಾರ್ಯಕರ್ತೆಯರು ಹಾಗೂ ಅಲೆಮಾರಿ ಸಮುದಾಯದ 200 ಕುಟುಂಬಗಳಿಗೆ ಮನೆ ಮಂಜೂರಾತಿ ಪತ್ರ ನೀಡಲಾಯಿತು.

ಯಲಹಂಕದ ಗಿಡ್ಡೇನಹಳ್ಳಿ ಗ್ರಾಮದ ಬಿಕೆ ಕೊಳೆಗೇರಿಯಲ್ಲಿ 40 ಕುಟುಂಬ ಹಾಗೂ ರಾಜರಾಜೇಶ್ವರಿ ನಗರದ ಮಾತಾ ಪುರ ದಲಿತ ಕಾಲೊನಿಯಲ್ಲಿ ಕುಷ್ಠ ರೋಗದಿಂದ ಗುಣಮುಖರಾದ 50 ಕುಟುಂಬಗಳಿಗೆ ಮನೆ ಮಂಜೂರಾತಿ ಪತ್ರಗಳನ್ನು ಜಮೀರ್ ಅಹಮದ್ ವಿತರಿಸಿದರು.

ಶೆಡ್‌ನಲ್ಲಿ ಊಟ: ಯಶವಂತಪುರದ ಯಲಚಗುಪ್ಪೆ ಗ್ರಾಮದ ಮಾದಾರ ಚನ್ನಯ್ಯ ಕೊಳೆಗೇರಿಯಲ್ಲಿ ಮನೆ ಮಂಜೂರಾತಿ ಪತ್ರ ವಿತರಿಸಿದ ಸಚಿವ ಜಮೀರ್ ಅಲೆಮಾರಿ ಸಮುದಾಯದ ಶರಣಯ್ಯ ಅವರ ಶೆಡ್‌ನಲ್ಲಿ ಊಟ ಮಾಡಿದರು. ಶೆಡ್‌ನಲ್ಲಿ ವಾಸಿಸುತ್ತಿದ್ದ ಕುಟುಂಬಕ್ಕೆ ಆದಷ್ಟು ಶೀಘ್ರ ಶಾಶ್ವತ ವಸತಿ ವ್ಯವಸ್ಥೆ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮೂರು ಸ್ಥಳಗಳಲ್ಲಿ ಭೂ ವೈಜ್ಞಾನಿಕ ಅಧ್ಯಯನಕ್ಕೆ ಎನ್‌ಟಿಪಿಸಿಗೆ ಅನುಮೋದನೆ


ಅಣು ವಿದ್ಯುತ್ ಸ್ಥಾವರ: ಸಂಪುಟಕ್ಕೆ ಪ್ರಸ್ತಾವ

• ರಾಜೇಶ್ ರೈ ಚಟ್ಲ

ಬೆಂಗಳೂರು: ಅಣು ವಿದ್ಯುತ್ ಸ್ಥಾವರ ಸ್ಥಾಪಿಸಲು ಗುರುತಿಸಿರುವ ವಿಜಯಪುರ ಜಿಲ್ಲೆಯ ಮಣ್ಣೂರು, ಕೊಪ್ಪಳ ಜಿಲ್ಲೆಯ ಕೂಕನಪಳ್ಳಿ, ರಾಯಚೂರು ಜಿಲ್ಲೆಯ ಹಲ್ಕವಟಗಿಗಳಲ್ಲಿ ಪ್ರಾಥಮಿಕ ಅಧ್ಯಯನ ನಡೆಸಿ ಸ್ಥಳಗಳ ಸೂಕ್ಷ್ಮತೆ ತಿಳಿದುಕೊಳ್ಳಲು ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮಕ್ಕೆ (ಎನ್‌ಟಿಪಿಸಿ) ಅನುಮತಿ ನೀಡಲು ರಾಜ್ಯ ಸರ್ಕಾರ ಮುಂದಾಗಿದೆ.

ಎನ್‌ಟಿಪಿಸಿಗೆ ಅನುಮತಿ ನೀಡುವ ಕುರಿತು ಸಚಿವ ಸಂಪುಟದ ಅನುಮೋದನೆ ಪಡೆಯಲು ಇಂಧನ ಇಲಾಖೆಯು ಪ್ರಸ್ತಾವವನ್ನು ಸಿದ್ಧಪಡಿಸಿದೆ. ಈ ಪ್ರಸ್ತಾವದ ಕರಡು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಮಣ್ಣೂರು, ಕೂಕನಪಳ್ಳಿ ಮತ್ತು ಹಲ್ಕವಟಗಿ ಈ ಮೂರು ಪ್ರದೇಶಗಳಲ್ಲಿ ಪ್ರಾಥಮಿಕ ಭೂ ವೈಜ್ಞಾನಿಕ ಅಧ್ಯಯನ ನಡೆಸಲು ಅನುಮತಿ ನೀಡುವಂತೆ 2024ರ ಏಪ್ರಿಲ್ 10ರಂದು ರಾಜ್ಯ ಸರ್ಕಾರಕ್ಕೆ ಎನ್‌ಟಿಪಿಸಿ ಪ್ರಸ್ತಾವ ಸಲ್ಲಿಸಿತ್ತು. ಅಲ್ಲದೆ, ಎನ್‌ಟಿಪಿಸಿಗೆ ಸ್ಥಳವನ್ನು ಹಂಚಿಕೆ ಮಾಡುವಂತೆ ಕೇಂದ್ರ ಇಂಧನ ಸಚಿವರು 2024ರ ನ.4ರಂದು ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು.



ಮುಖ್ಯ ಕಾರ್ಯದರ್ಶಿ 2024ರ ಜೂನ್ 10ರಂದು ನೀಡಿದ್ದ ನಿರ್ದೇಶನದಂತೆ ಇಂಧನ ಇಲಾಖೆಯು, ಪ್ರಸ್ತಾವಿತ ಭೂಮಿ ಲಭ್ಯ ಇದೆಯೇ ಮತ್ತು ಆ ಭೂಮಿಯಲ್ಲಿ ಇಲ್ಲಿಯವರೆಗೆ ಬೇರೆ ಯಾವುದೇ ನಿರ್ಮಾಣಗಳು ಇಲ್ಲವೇ ಎಂಬ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ವರದಿ ಪಡೆಯುವಂತೆ ಕಂದಾಯ ಇಲಾಖೆಗೆ ಜೂನ್ 14ರಂದು ಪತ್ರ ಬರೆದಿತ್ತು.

'ಎನ್‌ಟಿಪಿಸಿ ಸಂಸ್ಥೆಯು ಮಣ್ಣೂರಿನಲ್ಲಿ ಗುರುತಿಸಿರುವ 1,200 ಎಕರೆ ಖಾಸಗಿ ಸಾಗುವಳಿ ಭೂಮಿ ಲಭ್ಯವಿದ್ದು, ಅಲ್ಲಿ ಯಾವುದೇ ಯೋಜನೆಗಳು, ನಿರ್ಮಾಣ ಚಟುವಟಿಕೆ ಇಲ್ಲ' ಎಂದು ವಿಜಯಪುರ ಜಿಲ್ಲಾಧಿಕಾರಿ 2024ರ ನ. 7ರಂದೇ ವರದಿ ನೀಡಿದ್ದಾರೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲಾಧಿಕಾರಿಗಳು ಇನ್ನಷ್ಟೇ ವರದಿ ನೀಡಬೇಕಿದೆ.

ಅಣು ವಿದ್ಯುತ್ ಸ್ಥಾವರ ಸ್ಥಾಪಿಸಲು ಗುರುತಿಸಿರುವ ಸ್ಥಳಗಳಲ್ಲಿ ಎನ್‌ಟಿಪಿಸಿ ಸಂಸ್ಥೆಗೆ ಪ್ರಾಥಮಿಕ ಅಧ್ಯಯನ ನಡೆಸಲು ಅನುಮತಿ ನೀಡಲು ಮತ್ತು ಕಂದಾಯ, ಕೈಗಾರಿಕೆ ಮತ್ತು ವಾಣಿಜ್ಯ ಹಾಗೂ ಜಲಸಂಪನ್ಮೂಲ ಇಲಾಖೆಗಳ ಜೊತೆ ಸಮನ್ವಯ ಸಾಧಿಸಲು ಈ ಇಲಾಖೆಗಳಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದನೆ ನೀಡಿದ್ದರು.

ಇಂಧನ ಸಚಿವ ಕೆ.ಜೆ. ಜಾರ್ಜ್ ಮತ್ತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ 2025ರ ಜ. 8ರಂದು ನಡೆದ ಸಭೆಯಲ್ಲಿ, ಎನ್‌ಟಿಪಿಸಿ ಸಂಸ್ಥೆಯಿಂದ ಹೊಸ ಅಣು ವಿದ್ಯುತ್ ಸ್ಥಾವರ ಸ್ಥಾಪಿಸುವ ಬಗ್ಗೆ, ಅದರ ಸಾಮರ್ಥ್ಯ, ಭೂ ಹಂಚಿಕೆ, ಸ್ಥಳಗಳನ್ನು ನಿರ್ಧರಿಸುವ ಪ್ರಸ್ತಾವವನ್ನು ಸಚಿವ ಸಂಪುಟದ ಮುಂದೆ ಮಂಡಿಸಲು ನಿರ್ಧರಿಸಲಾಗಿತ್ತು.

ಉದ್ದೇಶಿತ ಯೋಜನೆಯನ್ನು ಎನ್‌ಟಿಪಿಸಿ ತನ್ನ ಸ್ವಂತ ಸಂಪನ್ಮೂಲದಿಂದ ಅಭಿವೃದ್ಧಿಪಡಿಸಲಿದ್ದು, ರಾಜ್ಯ ಸರ್ಕಾರಕ್ಕೆ ಯಾವುದೇ ಹಣಕಾಸಿನ ಹೊಣೆಗಾರಿಕೆ ಇರುವುದಿಲ್ಲ. ಕೇಂದ್ರ ವಿದ್ಯುತ್ ಸಚಿವಾಲಯದ ಮಾರ್ಗಸೂಚಿ ಪ್ರಕಾರ, ಸ್ಥಾಪಿತ ಸಾಮರ್ಥ್ಯದ ಶೇ 50ರಷ್ಟು ವಿದ್ಯುತ್ ಅನ್ನು ತವರು ರಾಜ್ಯ ಕೋಟಾದಡಿ ಕರ್ನಾಟಕಕ್ಕೆ ಹಂಚಿಕೆ ಮಾಡಲಾಗುತ್ತದೆ. ವಿದ್ಯುತ್ ಪಡೆಯಲು ರಾಜ್ಯ ವಿದ್ಯುತ್ ಸರಬರಾಜು ಕಂಪನಿಗಳು ಎನ್‌ಟಿಪಿಸಿ ಸಂಸ್ಥೆಯ ಜೊತೆಗೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳಬೇಕು ಎಂದು ಸಚಿವ ಸಂಪುಟ ಸಭೆಗೆ ಸಿದ್ಧಪಡಿಸಿರುವ ಪ್ರಸ್ತಾವದಲ್ಲಿ ವಿವರಿಸಲಾಗಿದೆ. ಎನ್‌ಟಿಪಿಸಿಗೆ ಅನುಮತಿ ನೀಡುವ ವಿಷಯ ಜೂನ್ 5ರಂದು ನಡೆದ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿ ಇತ್ತು. ಆದರೆ, ಆ ಸಭೆಗೆ ಇಂಧನ ಸಚಿವರು ಗೈರಾದ ಕಾರಣ ವಿಷಯ ಮುಂದೂಡಿಕೆ ಆಗಿತ್ತು.

ಪ್ರಸ್ತಾಪಿತ ಯೋಜನೆಯ ವಿವರ

- ಉದ್ದೇಶಿತ ಯೋಜನೆಗೆ 2 ಸಾವಿರ ಮೆಗಾ ವಾಟ್‌ಗೆ 1,200 ಎಕರೆ, 4 ಸಾವಿರ ಮೆಗಾ ವಾಟ್‌ಗೆ 1,600 ಎಕರೆ, 6 ಸಾವಿರ ಮೆಗಾ ವಾಟ್‌ಗೆ 2,000 ಎಕರೆ ಭೂಮಿ ಅಗತ್ಯವಿದೆ. ಕಾಲೊನಿ ಸ್ಥಾಪಿಸಲು ಹೆಚ್ಚುವರಿಯಾಗಿ 100 ರಿಂದ 150 ಎಕರೆ ಅವಶ್ಯವಿದೆ
- ಸ್ಥಾವರದ ಸಾಮರ್ಥ್ಯಕ್ಕೆ ತಕ್ಕಂತೆ ವಾರ್ಷಿಕ 2ರಿಂದ 6 ಟಿಎಂಸಿ ಅಡಿ ನೀರು ಅಗತ್ಯವಿದೆ
- ಯೋಜನೆಯ ಜಕಾತಿ (ವಿದ್ಯುತ್) ದರವು ಪ್ರತಿ ಯೂನಿಟ್‌ಗೆ ₹ 6.50 ರಿಂದ ₹ 7.50ರವರೆಗೆ ಇರಲಿದೆ. ಯೋಜನೆಯ ಜೀವಿತಾವಧಿ ಅಂದರೆ 40 ರಿಂದ 60 ವರ್ಷಗಳವರೆಗೆ ವಿದ್ಯುತ್ ದರ ಬಹುಪಾಲು ಸ್ಥಿರವಾಗಿ ಇರಲಿದೆ
- ಸ್ಥಳ ಆಯ್ಕೆ ಮಾನದಂಡವು ಪರಮಾಣು ಶಕ್ತಿ ನಿಯಂತ್ರಣ ಮಂಡಳಿಯ ಮಾರ್ಗಸೂಚಿ ಪ್ರಕಾರ ಇರಲಿದೆ. ಅಂದರೆ, ಸ್ಥಳವು ಭೂಕಂಪನ ವಲಯ ಐದರಲ್ಲಿ ಇರಬಾರದು. 5 ಕಿ.ಮೀ ವ್ಯಾಪ್ತಿಯಲ್ಲಿ ಭೂಮಿಯಲ್ಲಿ ಯಾವುದೇ ಸಕ್ರಿಯ ದೋಷ ಇರಬಾರದು. 16 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ರಕ್ಷಣಾ ವ್ಯವಸ್ಥೆ, ವಿಮಾನ ನಿಲ್ದಾಣ, ರಾಸಾಯನಿಕ ಕೈಗಾರಿಕೆಗಳು ಇತ್ಯಾದಿಗಳ ಅನುಪಸ್ಥಿತಿ ಆಧಾರದಲ್ಲಿ 'ಸ್ಕ್ರೀನಿಂಗ್ ಡಿಸ್ಟೆನ್ಸ್ ವ್ಯಾಲ್ಯೂ' ನಿರ್ಧರಿಸಲಾಗು-ವುದು. 5 ಕಿ.ಮೀ ಒಳಗೆ ಜನಸಂಖ್ಯೆ ವಿರಳ ಇರಬೇಕು. ಪ್ರವಾಹ, ಸುನಾಮಿ ಇತ್ಯಾದಿಗಳ ಅಪಾಯ ಕಡಿಮೆ ಇರಬೇಕು
- ಯೋಜನೆಯ ಅನುಷ್ಠಾನ ಅವಧಿ 10ರಿಂದ 13 ವರ್ಷ

ಇಂಧನ ಇಲಾಖೆಯ ಸಮರ್ಥನೆಗಳೇನು?

- ಉಷ್ಣ ವಿದ್ಯುತ್ ತಂತ್ರಜ್ಞಾನ ಪೂರೈಕೆದಾರರ ಸಂಖ್ಯೆ ವಿಶ್ವದಾದ್ಯಂತ ಕ್ಷೀಣಿಸುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಪರಮಾಣು ವಿದ್ಯುತ್ ಇಂಧನ ಮೂಲಗಳಿಂದ ಗುಣಮಟ್ಟದ, ನಿರಂತರ ವಿದ್ಯುತ್ತಿನ ಅಗತ್ಯವನ್ನು ಪೂರೈಸಬೇಕಾಗಿದೆ
- ಪರಮಾಣು ವಿದ್ಯುತ್ ಅನ್ನು ಕೇಂದ್ರ ಸರ್ಕಾರ ಸ್ವಚ್ಛ ಇಂಧನವೆಂದು ಉತ್ತೇಜಿಸುತ್ತಿದೆ
- ರಾಜ್ಯದ 'ಸಂಪನ್ಮೂಲ ಸಮರ್ಪಕತೆ' ಅಧ್ಯಯನ ವರದಿಯ ಪ್ರಕಾರ 2022–34ರ ವೇಳೆಗೆ ರಾಜ್ಯವು 38,263 ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಸೇರ್ಪಡೆಗೊಳಿಸಬೇಕಿದೆ. ರಾಜ್ಯದ ವಿದ್ಯುತ್ ಬೇಡಿಕೆಯು ಪ್ರತಿವರ್ಷ ಶೇ 6 ರಷ್ಟು ಹೆಚ್ಚಳವಾಗಲಿದೆ ಎಂದು ಅಂದಾಜಿಸಲಾಗಿದೆ.
- ಕರ್ನಾಟಕವು ಅಣು ವಿದ್ಯುತ್ ಸ್ಥಾವರ ಸ್ಥಾಪಿಸಿದರೆ ತವರು ರಾಜ್ಯ ಕೋಟಾದಡಿ ಸ್ಥಾವರದ ಸ್ಥಾಪಿತ ಸಾಮರ್ಥ್ಯದ ಶೇ 50 ರಷ್ಟು ವಿದ್ಯುತ್ ಅನ್ನು ರಾಜ್ಯವು ಪಡೆಯಬಹುದು
- ಉದ್ದೇಶಿತ ಯೋಜನೆಯಿಂದ ರಾಜ್ಯದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ, ಉದ್ಯೋಗಾವಕಾಶ ಸೃಷ್ಟಿ, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಚಟುವಟಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿಯಾಗಿ ಸುತ್ತಲಿನ ಗ್ರಾಮಗಳ ಉನ್ನತಿ ಸಾಧ್ಯವಾಗಲಿದೆ.



ಕಾರಹುಣ್ಣಿಮೆ ಕಾರಹುಣ್ಣಿಮೆ ಅಂಗವಾಗಿ ಕಲಬುರಗಿಯ ಮಾರುಕಟ್ಟೆಯಲ್ಲಿ ಮಂಗಳವಾರ ಎತ್ತುಗಳ ಆಲಂಕಾರಿಕ ವಸ್ತುಗಳನ್ನು ರೈತರು ಖರೀದಿಸಿದರು ಚಿತ್ರ: ತಾಜುದ್ದೀನ್ ಆಜಾದ್

ಹಡಗಿನ ಇಬ್ಬರು ಸಿಬ್ಬಂದಿ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ಮಂಗಳೂರು: ಸಿಂಗಪುರದ ಎಂ.ವಿ ವ್ಯಾನ್ ಹೈ 503 ಹಡಗಿಗೆ ಕೇರಳದ ಕೋಯಿಕ್ಕೋಡ್ ಬೇಪೂರ್ ಬಳಿ ಅರಬ್ಬಿ ಸಮುದ್ರದಲ್ಲಿ ಬೆಂಕಿ ಹೊತ್ತಿಕೊಂಡಿದ್ದು, ಈ ದುರ್ಘಟನೆಯಲ್ಲಿ ಗಾಯಗೊಂಡ ಆರು ಸಿಬ್ಬಂದಿಯನ್ನು ಚಿಕಿತ್ಸೆಗಾಗಿ ನಗರದ ಎ.ಜೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ.

'ಎ.ಜೆ.ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿರುವ ಹಡಗಿನ ಆರು ಸಿಬ್ಬಂದಿಯಲ್ಲಿ ಮೂವರು ಚೀನಾದವರು, ಇಬ್ಬರು ಮ್ಯಾನ್ಮಾರ್ ಹಾಗೂ ಇಬ್ಬರು ಇಂಡೊನೇಷ್ಯಾದವರು. ಇಬ್ಬರು ಸಿಬ್ಬಂದಿಯ (ಲು ಯಾನ್ಲಿ ಮತ್ತು ಸೊನಿತುರ್ ಹೆನಿ) ದೇಹದಲ್ಲಿ ಶೇ 40ರಷ್ಟು ಸುಟ್ಟ ಗಾಯಗಳಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ. ಅವರ ಶ್ವಾಸಕೋಶಕ್ಕೂ ಹಾನಿಯಾಗಿದ್ದು ಉಸಿರಾಡಲೂ ತೊಂದರೆ ಅನುಭವಿಸುತ್ತಿದ್ದಾರೆ. ಅವರಿಬ್ಬರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇನ್ನುಳಿದ ನಾಲ್ವರು ಸಿಬ್ಬಂದಿ ದೇಹದಲ್ಲೂ ಸುಟ್ಟಗಾಯಗಳಿವೆ' ಎಂದು ಎ.ಜೆ. ಆಸ್ಪತ್ರೆಯ ತಜ್ಞವೈದ್ಯ ದಿನೇಶ್ ಕದಂ ಸುದ್ದಿಗಾರರಿಗೆ ತಿಳಿಸಿದರು.

ಬೆಂಕಿ ಹೊತ್ತಿಕೊಂಡ ಹಡಗಿನಲ್ಲಿ 22 ಸಿಬ್ಬಂದಿ ಇದ್ದು, ಅವರಲ್ಲಿ ನಾಲ್ವರು ನಾಪತ್ತೆಯಾಗಿದ್ದಾರೆ. ಚೀನಾದ ಎಂಟು ಮಂದಿ, ತೈವಾನ್ ಮತ್ತು ಮ್ಯಾನ್ಮಾರ್‌ನ ತಲಾ ನಾಲ್ವರು, ಇಂಡೊನೇಷ್ಯಾದ ಇಬ್ಬರು ಸೇರಿದಂತೆ ಒಟ್ಟು 18 ಸಿಬ್ಬಂದಿಯನ್ನು ರಕ್ಷಣೆ ಮಾಡಲಾಗಿದೆ. ಐಎನ್‌ಎಸ್ ಸೂರತ್ ಹಡಗಿನಲ್ಲಿ ಅವರನ್ನು ಸೋಮವಾರ ರಾತ್ರಿ ಮಂಗಳೂರಿಗೆ ಕರೆತರಲಾಗಿದೆ. ಸುರಕ್ಷಿತವಾಗಿರುವ 12 ಸಿಬ್ಬಂದಿಗೆ ನಗರದ ಹೋಟೆಲ್ ಒಂದರಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಕರಾವಳಿ ರಕ್ಷಣಾ ಪಡೆಯ ಅಧಿಕಾರಿಯೊಬ್ಬರು ತಿಳಿಸಿದರು.

ಹಡಗಿನಲ್ಲಿದ್ದ ನಾಲ್ವರು ಸಿಬ್ಬಂದಿ (ಯು ಬೋ- ಫಾಂಗ್, ಸ್ಯಾನ್ ವಿನ್, ಝೀನಲ್ ಆಬಿದಿನ್, ಹಾಷಿಯೆ ಚಿಯಾ ವೆನ್) ನಾಪತ್ತೆಯಾಗಿದ್ದು, ಅವರಿಗಾಗಿ ಹುಡುಕಾಟ ಮುಂದುವರಿದಿದೆ' ಎಂದು ಅವರು ಮಾಹಿತಿ ನೀಡಿದರು.

'ಹಡಗಿನ ಮುಂಭಾಗದಲ್ಲಿ ಬೆಂಕಿ ನಿಯಂತ್ರಣಕ್ಕೆ ಬಂದಿದೆ. ದಟ್ಟ ಹೊಗೆ ಈಗಲೂ ಆವರಿಸಿದೆ. ಕರಾವಳಿ ರಕ್ಷಣಾ ಪಡೆಯ ಸಮುದ್ರ ಪ್ರಹಾರಿ ಹಾಗೂ ಸಚೇತ್ ಹಡಗುಗಳು ಬೆಂಕಿ ನಂದಿಸುವ ಹಾಗೂ ಸುತ್ತಲಿನ ಪ್ರದೇಶವನ್ನು ತಂಪಾಗಿಸುವ ಕಾರ್ಯದಲ್ಲಿ ತೊಡಗಿವೆ' ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ನೀತಿ ಶಿಕ್ಷಣ, ಮುಖ ಚಹರೆ ಹಾಜರಿ ಶೀಘ್ರ: ಮಧು ಬಂಗಾರಪ್ಪ

ಬಾಗಲಕೋಟೆ: 'ಇನ್ನೆರಡು ತಿಂಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮುಖಚಹರೆ ಆಧಾರಿತ (ಫೇಸ್ ಐಡೆಂಟಿಫಿಕೇಷನ್) ಹಾಜರಾತಿ ಮತ್ತು 'ನೀತಿ ವಿಜ್ಞಾನ' ಪಠ್ಯ ಕಲಿಕೆ ಆರಂಭಿಸಲಾಗುವುದು' ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

'ನೈತಿಕ ಶಿಕ್ಷಣದ ಕೊರತೆಯಿಂದ ಮಕ್ಕಳಿಗೆ ಹಲವು ಸಮಸ್ಯೆ ಕಾಡುತ್ತಿವೆ. ಬಾಲ ಗರ್ಭಿಣಿಯರ ಸಂಖ್ಯೆ ತಡೆಯೊಡ್ಡುವುದೂ ಸೇರಿ ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಲು 'ನೀತಿ ವಿಜ್ಞಾನ' ಪಠ್ಯ ಕಲಿಸಲಾಗುವುದು' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.



'ವಿಧಾನ ಪರಿಷತ್ತು ಸಭಾಪತಿ ಬಸವರಾಜ ಹೊರಟ್ಟಿ ಸೇರಿ 22 ಸದಸ್ಯರಿಂದ ನೀತಿ ಶಿಕ್ಷಣ ಕುರಿತು ಅಭಿಪ್ರಾಯ ಪಡೆಯಲಾಗಿದೆ. ಹಿಂದೆ ಇದ್ದಂತೆ ನೀತಿ ಶಿಕ್ಷಣ ಬೋಧನೆ ಮತ್ತೆ ಆರಂಭವಾಗಲಿದೆ' ಎಂದು ಹೇಳಿದರು.

'ಒಳಮೀಸಲಾತಿ ಜಾರಿಯಾದ ಕೂಡಲೇ 16,500 ಶಿಕ್ಷಕರನ್ನು ನೇಮಿಸಿಕೊಳ್ಳಲಾಗುವುದು. ಆದರ್ಶ ಶಾಲೆಗಳಲ್ಲಿ ಈ ವರ್ಷದಿಂದ ಪಿಯುಸಿ ಕಾಲೇಜು ಆರಂಭಿಸಲು ಅನುಮತಿ ನೀಡಲಾಗಿದೆ. ಶಾಲೆಗಳಿಗೆ ಮೂಲಸೌಲಭ್ಯ ಒದಗಿಸಲು ಆದ್ಯತೆ ನೀಡಲಾಗುವುದು' ಎಂದು ಹೇಳಿದರು.

ರೈತರ ವಿರೋಧ: 'ಕಾವೇರಿ ಆರತಿ' ಕಾಮಗಾರಿ ಸ್ಥಗಿತ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆ ಸಮೀಪ, ಬೃಂದಾವನ ಉದ್ಯಾನದ ಬಳಿ ನಡೆಸಲು ಉದ್ದೇಶಿಸಿರುವ 'ಕಾವೇರಿ ಆರತಿ' ಕಾರ್ಯಕ್ರಮದ ಪೂರ್ವ ಸಿದ್ಧತಾ ಕಾಮಗಾರಿಯನ್ನು ಮಂಗಳವಾರ ಸ್ಥಗಿತಗೊಳಿಸಲಾಗಿದೆ.

'ಕಾವೇರಿ ಆರತಿ' ಮಾಡಲು ವೇದಿಕೆ ನಿರ್ಮಿಸುವ ಸ್ಥಳಕ್ಕೆ ಮಣ್ಣು ತುಂಬಿ ಸಮತಟ್ಟು ಮಾಡುವ ಕೆಲಸ ಮೂರು ದಿನಗಳ ಹಿಂದೆ ಆರಂಭವಾಗಿತ್ತು. ಇದಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದರು. ಜೂನ್ 11ರಂದು ಕೆಆರ್‌ಎಸ್ ಡ್ಯಾಂ ಬಳಿ ರೈತ ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರು ಕಾವೇರಿ ಆರತಿ ವಿರೋಧಿಸಿ 'ಪ್ರತಿಭಟನಾ ಸಭೆ' ಹಮ್ಮಿಕೊಂಡಿದ್ದಾರೆ. ಈ ಎಲ್ಲ ಬೆಳವಣಿಗೆಗಳ ಕಾರಣದಿಂದಾಗಿ ಕಾಮಗಾರಿ ನಿಲ್ಲಿಸಲಾಗಿದೆ ಎಂದು ತಿಳಿದುಬಂದಿದೆ.

'ಕಾವೇರಿ ಆರತಿ ಸಂಬಂಧ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಅಧಿಕಾರಿಗಳು ಮತ್ತು ರೈತರ ಸಭೆ ನಡೆಸಲು ಉದ್ದೇಶಿಸಲಾಗಿತ್ತು. ಅದಕ್ಕೆ ಪೂರ್ವಭಾವಿಯಾಗಿ ಜಿಲ್ಲಾ ಮಟ್ಟದಲ್ಲಿ ಜೂನ್ 6ರಂದು ನಡೆದ ಸಭೆಯಲ್ಲಿ ರೈತರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಹಾಗಾಗಿ ಸಿದ್ಧತಾ ಕಾರ್ಯಗಳನ್ನು ಸದ್ಯಕ್ಕೆ ನಿಲ್ಲಿಸುವಂತೆ ಮೇಲಧಿಕಾರಿಗಳು ಮೌಖಿಕವಾಗಿ ಸೂಚನೆ ನೀಡಿದ್ದಾರೆ' ಎಂದು ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಎಂಜಿನಿಯರ್ ಜಯಂತ್ ತಿಳಿಸಿದ್ದಾರೆ.

ಯುಗಾದಿ ನಾಟಕ ರಚನಾ ಸ್ಪರ್ಧೆ: ಜೂನ್ 14ಕ್ಕೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ




ಬೆಂಗಳೂರು: 'ಪ್ರಜಾವಾಣಿ'ಯು ವೀರಲೋಕ ಪ್ರಕಾಶನದ ಸಹಯೋಗದಲ್ಲಿ ಆಯೋಜಿಸಿದ್ದ ಚೊಚ್ಚಲ 'ಯುಗಾದಿ ನಾಟಕ ರಚನಾ ಸ್ಪರ್ಧೆ 2025'ರ ಬಹುಮಾನ ವಿತರಣಾ ಸಮಾರಂಭವು ಜೂನ್ 14ರಂದು ನಡೆಯಲಿದೆ.

ಅರಮನೆ ರಸ್ತೆಯಲ್ಲಿರುವ ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಸಂಜೆ 6.30ಕ್ಕೆ ಕಾರ್ಯಕ್ರಮ ನಡೆಯಲಿದೆ. ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು, ಕಲಾವಿದೆಯರಾದ ಜಯಮಾಲ, ಲಕ್ಷ್ಮಿ ಚಂದ್ರಶೇಖರ ಹಾಗೂ ರಂಗ ನಿರ್ದೇಶಕ ಬಿ.ಸುರೇಶ್ ಮುಖ್ಯ ಅತಿಥಿಗಳಾಗಿ ಇರಲಿದ್ದಾರೆ. ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ್ ಉಪಸ್ಥಿತರಿರಲಿದ್ದಾರೆ. ರಾತ್ರಿ 7 ಗಂಟೆಗೆ ಮೈಸೂರಿನ ನಟನ ರಂಗ ತಂಡದಿಂದ 'ಸ್ಥಾವರವೂ ಜಂಗಮವೂ' ನಾಟಕ ಪ್ರದರ್ಶನ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

ಹಾಲಿ ನ್ಯಾಯಮೂರ್ತಿ ನೇತೃತ್ವದ ತನಿಖೆಗೆ ಆಗ್ರಹ



ಬಿ.ವೈ. ವಿಜಯೇಂದ್ರ

ಶಿವಮೊಗ್ಗ: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಬಳಿಯ ಕಾಲ್ತುಳಿತ ಪ್ರಕರಣದಲ್ಲಿ ರಾಜ್ಯ ಸರ್ಕಾರಕ್ಕೆ ಕ್ಲೀನ್ ಚಿಟ್ ಪಡೆಯಲು ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಾಗಿದೆ. ಸರ್ಕಾರಕ್ಕೆ ಮಾನ- ಮರ್ಯಾದೆ ಇದ್ದರೆ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಲಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದರು.

ಕಾಲ್ತುಳಿತದ ದುರ್ಘಟನೆಯಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಎ–1, ಎ–2 ಹಾಗೂ ಎ–3 ಆರೋಪಿಗಳು. ಆದರೆ, ಲೋಪ ಮುಚ್ಚಿ ಹಾಕಲು ಪೊಲೀಸ್ ಅಧಿಕಾರಿಗಳನ್ನು ಹರಕೆಯ ಕುರಿ ಮಾಡಿದ್ದಾರೆ ಎಂದು ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಬಹಿರಂಗ ಪತ್ರ: ರಾಜ್ಯದ ಇತಿಹಾಸದಲ್ಲಿ ಜೂನ್ 4 ಕರಾಳ ದಿನ. ಆ ದುರ್ಘಟನೆಯ ನೈತಿಕ ಹೊಣೆ ಹೊತ್ತು ಸಿ.ಎಂ, ಡಿ.ಸಿ.ಎಂ ಹಾಗೂ ಗೃಹ ಸಚಿವರು ರಾಜೀನಾಮೆ ನೀಡಬೇಕು. ಆ ನಿಟ್ಟನಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಸರ್ಕಾರಕ್ಕೆ ಬಹಿರಂಗ ಪತ್ರ ಬರೆದಿರುವೆ ಎಂದು ವಿಜಯೇಂದ್ರ ಪತ್ರ ಪ್ರದರ್ಶಿಸಿದರು.

ರಾಜೀನಾಮೆಯ ಬೇಡಿಕೆಗೆ ಸ್ಪಂದನೆ ದೊರೆತರೆ ಸರಿ. ಇಲ್ಲದಿದ್ದರೆ ಸರ್ಕಾರವನ್ನು ಕಿತ್ತು ಹಾಕಲು ಜೂನ್ 13ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬಿಜೆಪಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಗುವುದು. ಆ ದಿನ ಸಿ.ಎಂ ಮನೆಗೆ ಮುತ್ತಿಗೆ ಕೂಡ ಹಾಕಲಾಗುವುದು ಎಂದು ತಿಳಿಸಿದರು.

ಜೂನ್ 16ರಂದು ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲೂ ಪಕ್ಷದಿಂದ ಪ್ರತಿಭಟನೆ ನಡೆಯಲಿದೆ ಎಂದು ಹೇಳಿದರು.

ಮಗನಿಗೆ ಸರ್ಕಾರಿ ನೌಕರಿ ನೀಡಿ: ಚಿನ್ಮಯಿ ತಂದೆ

ಹೆಬ್ರಿ (ಉಡುಪಿ): ಬೆಂಗಳೂರಿನಲ್ಲಿ ಆರ್‌ಸಿಬಿ ತಂಡದ ಸಂಭ್ರಮಾಚರಣೆಯ ವೇಳೆ ಕಾಲ್ತುಳಿತದಿಂದ ಮೃತಪಟ್ಟ ಹೆಬ್ರಿಯ ಚಿನ್ಮಯಿ ಶೆಟ್ಟಿ ಕುಟುಂಬಕ್ಕೆ ಸರ್ಕಾರದ ₹25 ಲಕ್ಷ ನೆರವಿನ ಚೆಕ್ ಅನ್ನು ಜಿಲ್ಲಾಧಿಕಾರಿ ಕೆ.ವಿದ್ಯಾಕುಮಾರಿ ಅವರು ಹಸ್ತಾಂತರಿಸಿದರು.

'ನಾವು ಮಗಳನ್ನು ಕಳೆದುಕೊಂಡಿದ್ದೇವೆ. ಈ ನೋವು ನಮಗೆ ನಿರಂತರ. ಇದು ಮರೆಯಲು ಸಾಧ್ಯವಿಲ್ಲದ ದುರ್ಘಟನೆ' ಎಂದು ಚಿನ್ಮಯಿ ಅವರ ತಂದೆ ಕರುಣಾಕರ ಶೆಟ್ಟಿ ಕಣ್ಣೀರಾದರು.

'ಮಗಳ ಸಾವಿಗೆ ಪರಿಹಾರವಾಗಿ ಕೇವಲ ಹಣವಲ್ಲ, ನನ್ನ ಮಗನಿಗೆ ಸರ್ಕಾರಿ ನೌಕರಿ ನೀಡಬೇಕು' ಎಂದು ಕರುಣಾಕರ ಶೆಟ್ಟಿ ಅವರು ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಮಾಡಿದರು.

'ಸರ್ಕಾರದ ಆದೇಶದಂತೆ ₹25 ಲಕ್ಷ ಪರಿಹಾರವನ್ನು ನೀಡಲಾಗಿದೆ. ಸರ್ಕಾರ ಮತ್ತು ಜಿಲ್ಲಾಡಳಿತ ಸದಾ ಕುಟುಂಬದೊಂದಿಗೆ ಇರುತ್ತದೆ' ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಬೆಂಗಳೂರಿನ ತಿಪ್ಪಸಂದ್ರದಲ್ಲಿ ನೆಲೆಸಿರುವ ಚಿನ್ಮಯಿ ಅವರ ಕುಟುಂಬ ಈಗ ಮಗಳ ಅಂತಿಮ ಕಾರ್ಯಗಳನ್ನು ನೆರವೇರಿಸಲು ಅಜ್ಜಿ ಮನೆ ಹೆಬ್ರಿ ತಾಲ್ಲೂಕಿನ ಮದಗದ ಮನೆಗೆ ಬಂದಿದೆ. ಹಾಗಾಗಿ ಹೆಬ್ರಿಗೆ ಬಂದು ಪರಿಹಾರದ ಚೆಕ್ ಹಸ್ತಾಂತರಿಸಲಾಗಿದೆ. ಎಸ್.ಪಿ ಹರಿರಾಮ್ ಶಂಕರ್, ಕುಂದಾಪುರ ಉಪ ವಿಭಾಗಾಧಿಕಾರಿ ರಶ್ಮಿ, ಹೆಬ್ರಿ ತಹಶೀಲ್ದಾರ್ ಎಸ್. ಎ. ಪ್ರಸಾದ್ ಉಪಸ್ಥಿತರಿದ್ದರು.

ಕಾಲ್ತುಳಿತ: ವರದಿಗೆ 12ರ ತನಕ ಗಡುವು

ಒಂದನೇ ಪುಟದಿಂದ...

'ವರದಿ ಸಲ್ಲಿಕೆಗೆ ವಿಚಾರಣಾ ಆಯೋಗಕ್ಕೆ ಒಂದು ತಿಂಗಳ ಕಾಲಮಿತಿ ನಿಗದಿಪಡಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಬೆಂಗಳೂರು ಪೊಲೀಸ್ ಕಮಿಷನರ್ ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು-ಅಮಾನತು ಮಾಡಲಾಗಿದೆ' ಎಂದು ಶಶಿಕಿರಣ ಶೆಟ್ಟಿ ತಿಳಿಸಿದರು.

'ಹೈಕೋರ್ಟ್‌ನ ಸಮನ್ವಯ ಪೀಠದಲ್ಲಿ ಆರ್‌ಸಿಬಿ, ಡಿಎನ್‌ಎ ಅಧಿಕಾರಿಗಳ ಜಾಮೀನು ಅರ್ಜಿಗಳೂ ವಿಚಾರಣೆಗೆ ಕಾದು ಕುಳಿತಿವೆ. ಒಂದು ವೇಳೆ ಈ ನ್ಯಾಯಪೀಠದ ಮುಂದೆ ನಾವು ಸರ್ಕಾರದ ಹೆಜ್ಜೆಗಳನ್ನು ಇಲ್ಲಿ ಅರುಹಿದ್ದೇ ಆದರೆ, ಅದರ ಅಂಶಗಳನ್ನು ಅರ್ಜಿದಾರರು ತಮ್ಮ ಅನುಕೂಲಕ್ಕೆ ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇದೆ' ಎಂದು ಆತಂಕ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಅಂದರೆ ನ್ಯಾಯಾಲಯದ ನಿರ್ದೇಶನದ ಅನುಸಾರ ನೀವು ಪ್ರತಿಕ್ರಿಯೆ ಸಲ್ಲಿಸುವುದಿಲ್ಲ ಎಂದು ಹೇಳುತ್ತಿದ್ದೀರಾ' ಎಂದು ಪ್ರಶ್ನಿಸಿತು. ಇದಕ್ಕೆ ಶಶಿಕಿರಣ ಶೆಟ್ಟಿ, 'ಹಾಗಲ್ಲ ಸ್ವಾಮಿ, ಇದರಲ್ಲಿ ಕೆಲವು ಮುಖ್ಯ ವಿಚಾರಗಳು ಅಡಕವಾಗಿವೆ. ಮುಕ್ತ ನ್ಯಾಯಾಲಯದಲ್ಲಿ ಎಲ್ಲವನ್ನೂ ಹೇಳಿದಾಗ ಸರ್ಕಾರ ಪಕ್ಷಪಾತಿಯಾಗಿದೆ ಎಂದು ಯಾರೂ ಭಾವಿಸುವಂತಾಗಬಾರದು. ಸ್ವತಂತ್ರ ವಿಚಾರಣಾ ಆಯೋಗದಿಂದ ವರದಿ ಬರಲಿ. ಹಾಗಾಗಿ, ವಿಚಾರಣೆಯನ್ನು ಮುಂದೂಡಬೇಕು' ಎಂದು ಕೋರಿದರು. ಇದೇ ವೇಳೆ, ಪದಾಂಕಿತ ಹಿರಿಯ ವಕೀಲ ಎಸ್.ಎಸ್.ನಾಗಾನಂದ ಅವರು, 'ಘಟನೆಯಲ್ಲಿ ಮೃತಪಟ್ಟ 19 ವರ್ಷದ ವಿದ್ಯಾರ್ಥಿ ಜಿ.ಪ್ರಜ್ವಲ್ ಅವರ ತಂದೆ ಈ ಪಿಐಎಲ್‌ನಲ್ಲಿ ಮಧ್ಯಂತರ ಅರ್ಜಿದಾರರಾಗಲು ಬಯಸಿದ್ದಾರೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಅಂತೆಯೇ, ಮತ್ತೊಬ್ಬ ಪದಾಂಕಿತ ಹಿರಿಯ ವಕೀಲ ಕೆ.ದಿವಾಕರ್, 'ವಿಧಾನ ಪರಿಷತ್ ಮಾಜಿ ಸದಸ್ಯ ಮೋಹನ ಕುಮಾರ್ ಕೊಂಡಜ್ಜಿ ಈ ಅರ್ಜಿಯಲ್ಲಿ ಮಧ್ಯಂತರ ಅರ್ಜಿದಾರರಾಗಿ ಸೇರ್ಪಡೆಯಾಗಲು ಅನುಮತಿ ಕೋರುತ್ತಿದ್ದಾರೆ' ಎಂದರು.

ಇನ್ನೊಬ್ಬ ವಕೀಲ ಆರ್.ಹೇಮಂತ ರಾಜ್, 'ಈ ಘಟನೆಯಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯೇ (ಕೆಎಸ್‌ಸಿಎ) ನಿಜವಾದ ದೋಷಿ. ಆರ್‌ಸಿಬಿಯನ್ನೂ ಪಕ್ಷಗಾರರನ್ನಾಗಿ ಮಾಡಬೇಕು. ಅವರಿಗೂ ನೋಟಿಸ್ ಜಾರಿಗೊಳಿಸಲು ಆದೇಶಿಸಬೇಕು' ಎಂದು ಕೋರಿದರು.

ಎಲ್ಲರ ಮನವಿಗಳನ್ನು ಆಲಿಸಿದ ನ್ಯಾಯಪೀಠ, 'ಈ ಪಿಐಎಲ್‌ನಲ್ಲಿ ಮಧ್ಯಪ್ರವೇಶ ಬಯಸಿರುವ ಅರ್ಜಿಗಳ ಸಂಬಂಧ ಈಗಲೇ ಏನನ್ನೂ ಹೇಳುವುದಿಲ್ಲ. ಸರ್ಕಾರ ತನ್ನ ಪ್ರತಿಕ್ರಿಯೆಯನ್ನು ಮುಚ್ಚಿದ ಲಕೋಟೆಯಲ್ಲಿ ಇದೇ 12ರಂದು ನೇರವಾಗಿ ನ್ಯಾಯಪೀಠಕ್ಕೆ ಸಲ್ಲಿಸಲಿ. ಆನಂತರ ಮಧ್ಯಂತರ ಸೇರ್ಪಡೆ ಅರ್ಜಿಗಳನ್ನು ಪರಿಶೀಲನೆ ಮಾಡಲಾಗುವುದು' ಎಂದು ತಿಳಿಸಿ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿತು.

'ಗೋವಿಂದರಾಜು ಬಂಧನ ಯಾಕಿಲ್ಲ?'

'ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಯಾಗಿದ್ದ ಗೋವಿಂದರಾಜು ಅವರನ್ನು ಹುದ್ದೆಯಿಂದ ವಜಾಗೊಳಿಸಲಾಗಿದೆ. ಗುಪ್ತಚರ ಇಲಾಖೆ ಮುಖ್ಯಸ್ಥ ಹೇಮಂತ್ ನಿಂಬಾಳ್ಕರ್ ಸೇರಿ ಇತರರ ವರ್ಗಾವಣೆ ಮಾಡಲಾಗಿದೆ. ಆದರೆ, ಇವರಲ್ಲಿ ಯಾರೊಬ್ಬರನ್ನೂ ಈತನಕ ಏಕೆ ಬಂಧಿಸಿಲ್ಲ' ಎಂದು ಡಿಎನ್‌ಎ ಪರ ವಕೀಲರು ನ್ಯಾಯಪೀಠಕ್ಕೆ ಪ್ರಶ್ನಿಸಿದರು.

ಆರ್‌ಸಿಬಿ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ ಪರ ಅವರ ಪತ್ನಿ ಮಾಳವಿಕಾ ನಾಯಕ್ ಹಾಗೂ ಮೆಸರ್ಸ್ ಡಿಎನ್‌ಎ ಎಂಟರ್‌ಟೈನ್ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ನಿರ್ದೇಶಕ ಆರ್.ಸುನಿಲ್ ಮ್ಯಾಥ್ಯೂ ಪರವಾಗಿ ಅವರ ಪತ್ನಿ ರೋಶನಿ ಸುನಿಲ್, ಎಸ್.ಕಿರಣ್ ಕುಮಾರ್ ಪರವಾಗಿ ಅವರ ಪತ್ನಿ ಕೆ.ನಂದಿನಿ ಮತ್ತು ಎನ್.ಪಿ.ಶಮಂತ್ ಅವರ ತಾಯಿ ನಿರ್ಮಲಾ ಅವರು ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಅರ್ಜಿದಾರ ನಿಖಿಲ್ ಸೋಸಲೆ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲರಾದ ಸಂದೇಶ್ ಜೆ.ಚೌಟ ಮತ್ತು ಸಂಪತ್ ಕುಮಾರ್, 'ಬಂಧನಕ್ಕೆ ನಿರ್ದೇಶನ ನೀಡುವ ಅಧಿಕಾರ ನ್ಯಾಯಾಲಯಕ್ಕೇ ಇಲ್ಲ. ಹಾಗಿರುವಾಗ, ಬಂಧಿಸಿ ಎಂದು ಆದೇಶ ನೀಡುವ ಅಧಿಕಾರ ಮುಖ್ಯ-ಮಂತ್ರಿಗೆಲ್ಲಿದೆ? ಬಂಧನದ ಅಧಿಕಾರ ಏನಿದ್ದರೂ ತನಿಖಾಧಿಕಾರಿಯ ವಿವೇಚನೆಗೆ ಬಿಟ್ಟದ್ದು. ಆದರೆ, ಇಲ್ಲಿ ರಾಜಕೀಯ ಪ್ರಭಾವ ಕೆಲಸ ಮಾಡಿದೆ' ಎಂದು ಗಂಭೀರ ಆಕ್ಷೇಪ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಅರ್ಜಿದಾರರ ಆರೋಪಗಳಿಗೆ ವಿಶದವಾಗಿ ಉತ್ತರಿಸಬೇಕಿದೆ. ಇದೇ ಕಾರಣಕ್ಕೆ ಹಂಗಾಮಿ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ನ್ಯಾಯಪೀಠದ ಮುಂದೆ ಇವತ್ತು ನಿಗದಿಯಾಗಿದ್ದ ಸ್ವಯಂಪ್ರೇರಿತ ಪಿಐಎಲ್ ವಿಚಾರಣೆಯನ್ನು ಗುರುವಾರಕ್ಕೆ (ಜೂನ್ 12) ಮುಂದೂಡಲು ಮನವಿ ಮಾಡಲಾಗಿದೆ. ನಮ್ಮ ಅಧಿಕಾರಿಗಳು ಬೆಳಗಿನ ಜಾವದವರೆಗೆ ಕೆಲಸ ಮಾಡಿದ್ದಾರೆ. ಎಲ್ಲವನ್ನೂ ಪೀಠದ ಮುಂದೆ ಮಂಡಿಸಲಾಗುವುದು. ಹೀಗಾಗಿ, ವಿಚಾರಣೆಯನ್ನು ನಾಳೆಗೆ ಮುಂದೂಡಬೇಕು' ಎಂದು ಕೋರಿದರು.

ಇದನ್ನು ಬಲವಾಗಿ ವಿರೋಧಿಸಿದ ಸಂದೇಶ್ ಜೆ.ಚೌಟ, 'ಇಲ್ಲಿ ಒಬ್ಬರಿಗೊಬ್ಬರು ಪರಸ್ಪರ ಸಂಘರ್ಷ ನಡೆಸುವ ಅಗತ್ಯವೇನಿದೆ? ಕಾಲ್ತುಳಿತ ಸಂಭವಿಸಬೇಕು ಅಥವಾ ಸಂಭವಿಸಬಹುದು ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಅಷ್ಟಕ್ಕೂ ವಿಜಯೋತ್ಸವಕ್ಕೆ ಬನ್ನಿ ಎಂದು ಆರ್‌ಸಿಬಿಯೇ ಸಾರ್ವಜನಿಕರಿಗೆ ಕರೆ ನೀಡಿತ್ತು. ಇಂತಹುದೇ ಕರೆಯನ್ನು ಸರ್ಕಾರವೂ ನೀಡಿತ್ತು. ಆರ್‌ಸಿಬಿ, ಡಿಎನ್‌ಎ, ಕೆಎಸ್‌ಸಿಎ, ಸರ್ಕಾರ ಎಲ್ಲರೂ ಒಂದೇ ನೆಲೆಯಲ್ಲಿ ಇದ್ದಾರೆ' ಎಂದರು.

ಕೆಲಕಾಲ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ಅಂತಿಮವಾಗಿ ರಾಜ್ಯ ಸರ್ಕಾರದ ವಿನಮ್ರ ವಾದವನ್ನು ಪರಿಗಣಿಸಿ ವಿಚಾರಣೆಯನ್ನು ಬುಧವಾರಕ್ಕೆ (ಜೂನ್ 11) ಮುಂದೂಡಿತು.

ಸಿಐಡಿ ಕಸ್ಟಡಿಗೆ ಪಡೆಯಲ್ಲ...

'ಎಲ್ಲಾ ಆರೋಪಿಗಳ ಅರ್ಜಿಗಳು ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇರುವಾಗ ಸದ್ಯಕ್ಕೆ ನ್ಯಾಯಾಂಗ ಬಂಧನದಲ್ಲಿರುವ ನಾಲ್ವರು ಆರೋಪಿಗಳನ್ನು ಸಿಐಡಿ ವಶಕ್ಕೆ ಪಡೆಯುವ ಕೋರಿಕೆಯನ್ನು ಒಂದನೇ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಸಲ್ಲಿಸಿರುವುದು ಸರಿಯಲ್ಲ' ಎಂದು ನ್ಯಾಯಪೀಠ ರಾಜ್ಯ ಪ್ರಾಸಿಕ್ಯೂಷನ್ ನಡೆಗೆ ಅಸಮಾಧಾನ ವ್ಯಕ್ತಪಡಿಸಿತು.

ಈ ಬೆನ್ನಲ್ಲೇ ರಾಜ್ಯ ಪ್ರಾಸಿಕ್ಯೂಷನ್ ಪರ ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, 'ಆರೋಪಿಗಳನ್ನು ಕಸ್ಟಡಿಗೆ ಪಡೆಯುವ ಸಂಬಂಧ ಮ್ಯಾಜಿಸ್ಟ್ರೇಟ್ ನ್ಯಾಯಾಲಯ-ದಲ್ಲಿ ಸಲ್ಲಿಸಿರುವ ಅರ್ಜಿಯನ್ನು ವಿಚಾರಣೆಗೆ ಕೋರುವುದಿಲ್ಲ' ಎಂದು ಭರವಸೆ ನೀಡಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆ ಮುಂದೂಡಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿದ ಹೆದ್ದಾರಿ ಪ್ರಾಧಿಕಾರ

ಪ್ಲಾಸ್ಟಿಕ್ ಬಳಸಿ 50 ಕಿ.ಮೀ ರಸ್ತೆ ನಿರ್ಮಾಣ

ಪ್ರಜಾವಾಣಿ ವಾರ್ತೆ

ಮಂಗಳೂರು: ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸಂಗ್ರಹಿಸಿದ 170 ಟನ್ ಪ್ಲಾಸ್ಟಿಕ್ ಕಸವನ್ನು ಸದ್ಬಳಕೆ ಮಾಡಿಕೊಂಡು, ಕರಾವಳಿಯಲ್ಲಿ 50 ಕಿ.ಮೀ. ಸರ್ವಿಸ್ ರಸ್ತೆ ನಿರ್ಮಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಜಿಲ್ಲೆಯ ತಲಪಾಡಿಯಿಂದ ನಂತೂರುವರೆಗೆ ಹಾಗೂ ಸುರತ್ಕಲ್‌ನಿಂದ ಸಾಸ್ತಾನದವರೆಗೆ ಕಡಿಮೆ ಸಾಂದ್ರತೆಯ ಪಾಲಿಥೀನ್ (ಎಲ್‌ಡಿಪಿಇ) ಬಳಸಿ ನಿರ್ಮಿಸಿರುವ ಸರ್ವಿಸ್ ರಸ್ತೆ ಕಾಮಗಾರಿ ಮೇ ಅಂತ್ಯಕ್ಕೆ ಪೂರ್ಣಗೊಂಡಿದೆ.

ಏನಿದು ಪ್ಲಾಸ್ಟಿಕ್ ರಸ್ತೆ?: ಅಧಿಕ ಮಳೆಯಾಗುವ ಪ್ರದೇಶದಲ್ಲಿ ಡಾಂಬರ್ ರಸ್ತೆಗಳಲ್ಲಿ ಬಹುಬೇಗ ಹೊಂಡಗಳು ನಿರ್ಮಾಣವಾಗುತ್ತವೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮಂಗಳೂರು ಕಚೇರಿಯ ಯೋಜನಾ ನಿರ್ದೇಶಕರು, ಕೇಂದ್ರ ಹೆದ್ದಾರಿ ಇಲಾಖೆಗೆ ಪರ್ಯಾಯ ಯೋಜನೆಯ ವರದಿ ಸಲ್ಲಿಸಿದ್ದರು. ಇದನ್ನು ಪರಿಶೀಲಿಸಿದ ಹೆದ್ದಾರಿ ನಿರ್ಮಾಣದ ಮಾನದಂಡಗಳನ್ನು ರೂಪಿಸುವ ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ಜಿಲ್ಲೆಯ ಸರ್ವಿಸ್ ರಸ್ತೆ ನಿರ್ಮಾಣ ಪ್ರಯೋಗಕ್ಕೆ ಎಲ್‌ಡಿಪಿಇ ಪ್ಲಾಸ್ಟಿಕ್ ಬಳಕೆಗೆ ಅನುಮತಿ ನೀಡಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.



ಮಂಗಳೂರಿನ ರಾಷ್ಟ್ರೀಯ ಹೆದ್ದಾರಿ ಪಕ್ಕದ ಸರ್ವಿಸ್ ರಸ್ತೆಯನ್ನು ಎಲ್‌ಡಿಪಿಇ ಹಾಗೂ ಡಾಂಬರು ಬಳಸಿ ನಿರ್ಮಿಸಲಾಗಿದೆ ಪ್ರಜಾವಾಣಿ ಚಿತ್ರ

ರಸ್ತೆ ನಿರ್ಮಾಣಕ್ಕೆ ಜಲ್ಲಿ ಮತ್ತು ಬಿಟುಮಿನ್ ಮಿಶ್ರಣದ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸಲಾಗುತ್ತದೆ. ಸುಮಾರು 160 ಡಿಗ್ರಿ ಸೆಲ್ಸಿಯಸ್ ಉಷ್ಣತೆಯಲ್ಲಿ ಡಾಂಬರ್ ಬಿಸಿ ಮಾಡುವಾಗ ಎಲ್‌ಡಿಪಿಇ ಬಳಕೆ ಮಾಡಿ, ಅದನ್ನು ಜಲ್ಲಿ ಮೇಲೆ ಸುರಿದಾಗ ರಸ್ತೆಯ ಗಟ್ಟಿತನ ಹೆಚ್ಚಾಗಿ, ದೀರ್ಘ ಬಾಳಿಕೆ ಬರುತ್ತದೆ. ಡಾಂಬರ್ ಮತ್ತು ಎಲ್‌ಡಿಪಿಇ ಪ್ಲಾಸ್ಟಿಕ್ ಅನ್ನು ಶೇ 90:10ರ ಅನುಪಾತದಲ್ಲಿ ಬಳಕೆ ಮಾಡಲಾಗುತ್ತದೆ ಎಂದು ಅವರು ವಿವರಿಸಿದರು.

ಪ್ಲಾಸ್ಟಿಕ್ ಸಂಗ್ರಹ ಹೇಗೆ?: ಮಂಗಳಾ ರಿಸೋರ್ಸಸ್ ಮ್ಯಾನೇಜ್‌ಮೆಂಟ್ ಸಂಸ್ಥೆಯು ದಕ್ಷಿಣ ಕನ್ನಡ ಜಿಲ್ಲೆಯ ನಾಲ್ಕು ಕಡೆಗಳಲ್ಲಿ ಶೂನ್ಯ ನಿರ್ವಹಣಾ ವೆಚ್ಚದ ಮಾದರಿಯಲ್ಲಿ ಸಮಗ್ರ ಘನತ್ಯಾಜ್ಯ ನಿರ್ವಹಣಾ ಕೇಂದ್ರದ (ಎಂಆರ್‌ಎಫ್) ನಿರ್ವಹಿಸುತ್ತಿದೆ. ಈ ನಾಲ್ಕು ಘಟಕಗಳ ವ್ಯಾಪ್ತಿಯಲ್ಲಿರುವ 220 ಗ್ರಾಮ ಪಂಚಾಯಿತಿಗಳಿಂದ ಘನತ್ಯಾಜ್ಯಗಳನ್ನು ಸಂಗ್ರಹಿಸುವ ಸಂಸ್ಥೆಯು, ಅದನ್ನು ಪ್ರತ್ಯೇಕಿಸಿ, ಸಂಸ್ಕರಿಸುತ್ತದೆ.

'ಹೆದ್ದಾರಿ ಕಾಮಗಾರಿ ನಿರ್ಮಿಸಿರುವ ಉಪಗುತ್ತಿಗೆದಾರ ಕಂಪನಿ ಇನ್ನಾ ಕಂಪನಿ ನಮ್ಮ ಸಂಸ್ಥೆಯನ್ನು ಸಂಪರ್ಕಿಸಿ ಎಲ್‌ಡಿಪಿಇಗೆ ಬೇಡಿಕೆ ಸಲ್ಲಿಸಿತ್ತು. ಜನವರಿಯಿಂದ ಮೇ ತಿಂಗಳ ನಡುವಿನ ಅವಧಿಯಲ್ಲಿ ಸಂಗ್ರಹಿಸಿದ ಘನತ್ಯಾಜ್ಯ-ದಲ್ಲಿ, 170 ಟನ್‌ನಷ್ಟು ಕ್ಯಾರಿಬ್ಯಾಗ್, ಪ್ಯಾಕೇಜಿಂಗ್ ಕವರ್‌ಗಳನ್ನು ರಸ್ತೆ ನಿರ್ಮಾಣಕ್ಕೆ ನೀಡಲಾಗಿದೆ. ಪ್ಲಾಸ್ಟಿಕ್ ಅನ್ನು ಗ್ರೇಡಿಂಗ್, ಸ್ವಚ್ಛ ಮಾಡಿ, ವ್ಯವಸ್ಥಿತಗೊಳಿಸಿ ಕೊಡುವುದು ಸವಾಲಿನ ಕೆಲಸ. ಇದಕ್ಕಾಗಿ ಪ್ರತ್ಯೇಕ ಯಂತ್ರವನ್ನು ಅಳವಡಿಸಲಾಗಿದೆ' ಎಂದು ಮಂಗಳಾ ರಿಸೋರ್ಸಸ್‌ನ ನಿರ್ದೇಶಕ ಸಚಿನ್ ಶೆಟ್ಟಿ ಮಾಹಿತಿ ನೀಡಿದರು.

'ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ) ಅಡಿಯಲ್ಲಿ ನಾಲ್ಕು ವರ್ಷಗಳ ಹಿಂದೆ ಉಡುಪಿ ಜಿಲ್ಲೆಯ ಐದು ಕಡೆಗಳಲ್ಲಿ ಒಟ್ಟು 10 ಕಿ.ಮೀ. ರಸ್ತೆಯನ್ನು ಎಲ್‌ಡಿಪಿಇ ಬಳಸಿ ಪ್ರಾಯೋಗಿಕವಾಗಿ ನಿರ್ಮಿಸ-ಲಾಗಿತ್ತು. ಮುಂದಿನ ದಿನಗಳಲ್ಲಿ ರಸ್ತೆ ನಿರ್ಮಿಸುವ ಯಾವುದೇ ಕಂಪನಿಯಿಂದ ಬೇಡಿಕೆ ಬಂದರೂ ಎಲ್‌ಡಿಪಿಇ ಪ್ಲಾಸ್ಟಿಕ್ ಒದಗಿಸಲು ಸಂಸ್ಥೆ ಸಿದ್ಧವಿದೆ' ಎಂದು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸ್ಥಳ ಮಹಜರು ನಡೆಸಿದ ಸಿಐಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು, ಕ್ರೀಡಾಂಗಣದ ಬಳಿ ಸ್ಥಳ ಮಹಜರು ಪ್ರಕ್ರಿಯೆ ನಡೆಸಿದರು.

ಕಬ್ಬನ್‌ಪಾರ್ಕ್ ಠಾಣೆಯಲ್ಲಿ ದಾಖಲಾಗಿದ್ದ ಎರಡು ಪ್ರಕರಣಗಳ ತನಿಖೆಯನ್ನೂ ಸಿಐಡಿಗೆ ವರ್ಗಾವಣೆ ಮಾಡಲಾಗಿದೆ. ಸಿಐಡಿ ಎಸ್‌ಪಿ ಶುಭನ್ವಿತಾ ಅವರ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ.

'ಗೇಟ್ ನಂಬರ್ 2, 2ಎ, 6, 7, 16, 17, 18, 21ರ ಬಳಿ ಕಾಲ್ತುಳಿತ ಸಂಭವಿಸಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ಸ್ಥಳ ಮಹಜರು ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಜತೆಗೆ, ಗಾಯಾಳುಗಳ ಹೇಳಿಕೆಯನ್ನೂ ದಾಖಲು ಪ್ರಕ್ರಿಯೆ ಆರಂಭವಾಗಿದೆ. ಜೂನ್ 4ರಂದು ಸಂಜೆ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಲು ಕಾರಣವೇನು? ಯಾವ ಮಾಹಿತಿ ಆಧರಿಸಿ, ವಿಜಯೋ-ತ್ಸವಕ್ಕೆ ಬಂದಿದ್ದೀರಿ ಎನ್ನುವ ಪ್ರಶ್ನೆ ಕೇಳಿ, ಹೇಳಿಕೆ ದಾಖಲು ಮಾಡಲಾಗುತ್ತಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಕೋರ್ಟ್‌ಗೆ ಹಾಜರು: 'ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಲಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಆರ್‌ಸಿಬಿಯ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ, ಡಿಎನ್‌ಎ ಮ್ಯಾನೇಜ್‌ಮೆಂಟ್ (ಇ–ವೆಂಟ್ ಮ್ಯಾನೇಜ್‌ಮೆಂಟ್) ಸಿಬ್ಬಂದಿ ಸುನೀಲ್ ಮ್ಯಾಥ್ಯೂ, ಕಿರಣ್ ಮತ್ತು ಸುಮಂತ್ ಎಂಬುವವರನ್ನು 41ನೇ ಎಸಿಜೆಎಂ ನ್ಯಾಯಾಲಯಕ್ಕೆ ಮಂಗಳವಾರ ಸಂಜೆ ಹಾಜರುಪಡಿಸಿ 10 ದಿನ ಕಸ್ಟಡಿಗೆ ನೀಡುವಂತೆ ಮನವಿ ಮಾಡಲಾಯಿತು. ನಿಖಿಲ್ ಸೋಸಲೆ ಅವರು ತಮ್ಮ ಬಂಧನದ ಕ್ರಮ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ವಿಚಾರಣೆ ಹಂತದಲ್ಲಿದೆ. ಹೈಕೋರ್ಟ್ ಆದೇಶ ನೋಡಿಕೊಂಡು ಆರೋಪಿಗಳನ್ನು ಸಿಐಡಿ ಕಸ್ಟಡಿಗೆ ನೀಡಬೇಕೇ? ಬೇಡವೇ ಎಂಬುದನ್ನು ತೀರ್ಮಾನಿಸಲಾಗುವುದು ಎಂಬುದಾಗಿ ನ್ಯಾಯಾಲಯ ಹೇಳಿದೆ. ಆರೋಪಿಗಳನ್ನು ಮತ್ತೆ ಜೈಲಿಗೇ ಕಳುಹಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

₹5 ಕೋಟಿ ಪರಿಹಾರಕ್ಕೆ ಆಗ್ರಹ: ದುರಂತದಲ್ಲಿ ಮೃತಪಟ್ಟ ಕುಟುಂಬದವರಿಗೆ ತಲಾ ₹5 ಕೋಟಿ ಪರಿಹಾರ ನೀಡಬೇಕು ಎಂದು ಆಗ್ರಹಿಸಿ, ಕನ್ನಡ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಮುಖಂಡರು ರಾಜಭವನದ ಎದುರು ಪ್ರತಿಭಟನೆ ನಡೆಸಲು ಮುಂದಾದರು. ದುರಂತಕ್ಕೆ ರಾಜ್ಯ ಸರ್ಕಾರವೇ ಕಾರಣವೆಂದು ಆರೋಪಿಸಿದರು. ಸ್ಥಳದಲ್ಲಿದ್ದ ಪೊಲೀಸರು, ಪ್ರತಿಭಟನಕಾರರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಮಣಿಪುರ: ಮುಂದುವರಿದ ಪ್ರತಿಭಟನೆ, ಇಬ್ಬರು ಪೊಲೀಸರಿಗೆ ಗಾಯ

ಬಂಧಿತರ ಬಿಡುಗಡೆಗೆ ಒತ್ತಾಯ

ಪಿಟಿಐ/ ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಲವು ಜಿಲ್ಲೆಗಳಲ್ಲಿ ರಸ್ತೆ ತಡೆ, ಟೈರ್‌ಗೆ ಬೆಂಕಿ
- ಪೊಲೀಸರ ಮೇಲೆ ಅಪರಿಚಿತರಿಂದ ಹಲ್ಲೆ
- ಸಿಆರ್‌ಪಿಎಫ್ ಸಿಬ್ಬಂದಿಯತ್ತ ಗುಂಡಿನ ದಾಳಿ

ಇಂಫಾಲ್: ಸಿಬಿಐ ಬಂಧಿಸಿರುವ ಅರಂಬಾಯ್ ಟೆಂಗೋಲ್ ನಾಯಕ ಕನನ್ ಸಿಂಗ್ ಮತ್ತು ನಾಲ್ವರು ನಾಯಕರ ಬೇಷರತ್ ಬಿಡುಗಡೆಗೆ ಒತ್ತಾಯಿಸಿ ಮಣಿಪುರದಲ್ಲಿ ಮೈತೇಯಿ ಸಮುದಾಯ ಶನಿವಾರದಿಂದ ನಡೆಸುತ್ತಿರುವ ಪ್ರತಿಭಟನೆ ಮುಂದುವರಿದಿದೆ.

ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಪ್ರತಿಭಟನಕಾರರು ಹಲವು ಜಿಲ್ಲೆಗಳಲ್ಲಿ ಹಿಂಸಾಚಾರ ನಡೆಸಿದ್ದಾರೆ. ಭದ್ರತಾ ಸಿಬ್ಬಂದಿ ಜೊತೆ ಸಂಘರ್ಷವನ್ನೂ ನಡೆಸಿದ್ದಾರೆ ಎಂದು ಮಂಗಳವಾರ ಪೊಲೀಸರು ತಿಳಿಸಿದರು.

ತೌಬಾಲ್ ಮತ್ತು ಕಾಕ್‌ಚಿಂಗ್ ಜಿಲ್ಲೆಗಳಲ್ಲಿ ಪ್ರತಿಭಟನಕಾರರು ಟೈರ್‌ಗಳಿಗೆ ಬೆಂಕಿ ಹಚ್ಚಿ ರಸ್ತೆ ತಡೆ ನಡೆಸಿದರು. ಪಶ್ಚಿಮ ಇಂಫಾಲ್‌ನ ಟೆರಾ ಪ್ರದೇಶದಲ್ಲಿ ಕೆಲ ಅಪರಿಚಿತ ದುಷ್ಕರ್ಮಿಗಳು ಸೋಮವಾರ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಸಿಬ್ಬಂದಿ ಮೇಲೆ ಗುಂಡು ಹಾರಿಸಿದ್ದರು.

ಬಿಷ್ಣುಪುರ ಜಿಲ್ಲೆಯ ನ್ಯಾಂಬೋಲ್‌ನಲ್ಲಿ ಎಸ್‌ಪಿ ನೇತೃತ್ವದ ತಂಡ ಗುಂಪು ಚದುರಿಸುವಾಗ ಪ್ರತಿಭಟನಕಾರರ ಜೊತೆ ನಡೆದ ಸಂಘರ್ಷದಲ್ಲಿ ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಂಗಳವಾರ ಬೆಳಗ್ಗೆ ಇಂಫಾಲ್‌ನ ರಸ್ತೆಗಳಲ್ಲಿ ವಾಣಿಜ್ಯ ಚಟುವಟಿಕೆ ಕಂಡು ಬಂತು. ರಸ್ತೆ ಬದಿ ವ್ಯಾಪಾರಿಗಳು ಅಂಗಡಿ ತೆರೆದಿದ್ದರು.

ಕುಕಿ ಜೊ ಸಂಘಟನೆಗಳ ಒತ್ತಾಯ: ಸಂಘರ್ಷದಲ್ಲಿ ಭಾಗಿಯಾಗಿರುವ ಆರೋಪದಲ್ಲಿ ಎನ್‌ಐಎ ಮತ್ತು ಸಿಬಿಐ ಬಂಧಿಸಿರುವ ತಮ್ಮ ಸಮುದಾಯದ ಆರು ಮಂದಿಯನ್ನು ಬೇಷರತ್ ಆಗಿ ಬಿಡುಗಡೆ ಮಾಡಬೇಕು ಎಂದು ಕುಕಿ ಜೊ ಸಂಘಟನೆಗಳನ್ನು ಪ್ರತಿನಿಧಿಸುವ 'ಕುಕಿ ಜೊ ಕೌನ್ಸಿಲ್' ಒತ್ತಾಯಿಸಿದೆ.

'ಕುಕಿ ಜೊ ಸಮುದಾಯಕ್ಕೆ ಈ ಸಂಘರ್ಷ ಬೇಕಿರಲಿಲ್ಲ. ಮೈತೇಯಿ ಸಮುದಾಯವು, ಸಶಸ್ತ್ರ ಗುಂಪುಗಳ ಬೆಂಬಲದೊಂದಿಗೆ 2023ರ ಮೇ 3ರಂದು ನಮ್ಮ ಜನರ ಮೇಲೆ ಅಪ್ರಚೋದಿತ ಮತ್ತು ಕ್ರೂರ ದಾಳಿಯನ್ನು ಪ್ರಾರಂಭಿಸಿತು. ನಮ್ಮ ಜನರನ್ನು ಕೊಲ್ಲಲಾಯಿತು ಮತ್ತು ಮನೆಗಳನ್ನು ಸುಟ್ಟುಹಾಕಲಾಯಿತು. ಕುಕಿ ಜೊ ಸಮುದಾಯದ ಜನರಿಗೆ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದನ್ನು ಬಿಟ್ಟು ಬೇರೆ ದಾರಿಯಿರಲಿಲ್ಲ' ಎಂದು ಕೌನ್ಸಿಲ್ ಹೇಳಿಕೆಯಲ್ಲಿ ತಿಳಿಸಿದೆ.

2023ರಲ್ಲಿ ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯದ ನಡುವೆ ಆರಂಭಗೊಂಡಿದ್ದ ಜನಾಂಗೀಯ ಸಂಘರ್ಷ ಈವರೆಗೆ 260 ಜನರ ಸಾವು ಮತ್ತು ಸಾವಿರಾರು ಜನರ ನಿರ್ವಸತಿಗೆ ಕಾರಣವಾಗಿದೆ.

10 ದಿನದ ಬಂದ್ 3 ದಿನಕ್ಕೆ ಅಂತ್ಯ

ತಮ್ಮ ಸಮುದಾಯದ ನಾಯಕರ ಬಂಧನ ಖಂಡಿಸಿ ಕರೆ ನೀಡಿದ್ದ 10 ದಿನಗಳ ಮಣಿಪುರ ಬಂದ್ ಅನ್ನು ಮೈತೇಯಿ ಸಂಘಟನೆ ಅರಂಬಾಯ್ ಟೆಂಗೋಲ್ ಮೂರು ದಿನಕ್ಕೆ ಇಳಿಸಿದೆ. ಇಂಫಾಲ್ ಸೇರಿದಂತೆ ಮಣಿಪುರದ ಹಲವು ಜಿಲ್ಲೆಗಳಲ್ಲಿ ಕಳೆದ ಕೆಲ ದಿನಗಳಿಂದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತ್ತು.

'10 ದಿನ ಕರೆ ನೀಡಿದ್ದ ಬಂದ್‌ಅನ್ನು ಮೂರು ದಿನಕ್ಕೆ (ಮಂಗಳವಾರ) ತಗ್ಗಿಸಿದ್ದೇವೆ. ನಮ್ಮ ಸಂಘಟನೆ ಹೆಸರು ಹೇಳಿಕೊಂಡು ಕೆಲವು ಸಮಾಜ ಘಾತುಕ ಶಕ್ತಿಗಳು ಬಂದ್ ವೇಳೆ ಹಿಂಸಾಚಾರ ಸೃಷ್ಟಿಸುತ್ತಿವೆ. ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ಮಾಡುತ್ತಿದ್ದಾರೆ' ಎಂದು ಸಂಘಟನೆಯ ಸಂವಹನ ವಿಭಾಗದ ಮುಖ್ಯಸ್ಥ ರಾಬಿನ್ ಮಾನ್‌ಗಾಂಗ್ ಖವೈರಕಪಾಮ್ ತಿಳಿಸಿದ್ದಾರೆ. 'ನಮ್ಮ ಸಂಘಟನೆ ಸಶಸ್ತ್ರ ಗುಂಪು ಅಲ್ಲ. ಧರ್ಮ ರಕ್ಷಣೆಗಾಗಿ ಹುಟ್ಟಿಕೊಂಡ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆ' ಎಂದು ಇದೇ ವೇಳೆ ಅವರು ಸ್ಪಷ್ಟಪಡಿಸಿದರು.

'ಬಿಹಾರ: ಎನ್‌ಡಿಎಗೆ ಜಾತಿ ಗಣತಿ ಲಾಭ'

ನವದೆಹಲಿ (ಪಿಟಿಐ): ಜಾತಿ ಜನಗಣತಿ ನಡೆಸುವುದಾಗಿ ಕೇಂದ್ರ ಸರ್ಕಾರ ಮಾಡಿರುವ ಘೋಷಣೆಯಿಂದ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಲಾಭ ಆಗಲಿದೆ ಎಂದು ರಾಷ್ಟ್ರೀಯ ಲೋಕ ಮೋರ್ಚಾ (ಆರ್‌ಎಲ್‌ಎಂ) ಅಧ್ಯಕ್ಷ ಉಪೇಂದ್ರ ಕುಶ್ವಾಹ ಮಂಗಳವಾರ ಹೇಳಿದ್ದಾರೆ.

ಮಗಧ ಮತ್ತು ಶಹಾಬಾದ್ ಪ್ರದೇಶಗಳಲ್ಲಿ ಮೈತ್ರಿಕೂಟವು ತನ್ನ ಮತಗಳನ್ನು ಒಗ್ಗೂಡಿಸುವತ್ತ ಹೆಚ್ಚು ಗಮನ ಹರಿಸಬೇಕಿದೆ ಎಂದೂ ಅವರು ಸಲಹೆ ನೀಡಿದ್ದಾರೆ. ಲಾಲೂ ಪ್ರಸಾದ್ ಕೇಂದ್ರದಲ್ಲಿ ಪ್ರಭಾವಿ ಸಚಿವರಾಗಿದ್ದರೂ ಏಕೆ ಜಾತಿ ಜನಗಣತಿ ಮಾಡಿಸಲಿಲ್ಲ ಎಂದು ಕುಶ್ವಾಹ ಪ್ರಶ್ನಿಸಿದರು.

ಬಿಹಾರದಲ್ಲಿ ಸೀಟು ಹಂಚಿಕೆಯ ಭಿನ್ನಾಭಿಪ್ರಾಯದ ಬಗ್ಗೆ ಮಾತನಾಡಿದ ಅವರು, 'ಇದು ಎನ್‌ಡಿಎ ಮೈತ್ರಿಕೂಟದ ಆಂತರಿಕ ವಿಚಾರ' ಎಂದರು.

ಮಧುಚಂದ್ರದಲ್ಲಿ 'ನಲ್ಲ'ನ ಕೊಲೆ ಕೋರ್ಟ್‌ಗೆ ಆರೋಪಿ ಮಹಿಳೆ

ಲಖನೌ (ಪಿಟಿಐ): 'ಮಧುಚಂದ್ರಕ್ಕೆ ತೆರಳಿದ್ದಾಗಲೇ ಪತಿಯ ಬದುಕಿಗೆ ಅಂತ್ಯ ಕಾಣಿಸಿದ್ದ' ಆರೋಪಿ ಮಹಿಳೆ ಸೋನಂ ಅವರನ್ನು ಘಾಜಿಪುರ್ ಕೋರ್ಟ್‌ಗೆ ಹಾಜರುಪಡಿಸಲಾಗಿದೆ. ಈಕೆಯನ್ನು ವಿಚಾರಣೆಗೆ ತಮ್ಮ ವಶಕ್ಕೆ ಒಪ್ಪಿಸುವಂತೆ ಕೋರಿ ಮೇಘಾಲಯದ ಪೊಲೀಸರು ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಆರೋಪಿಯು ಸೋಮವಾರ ಉತ್ತರ ಪ್ರದೇಶದ ಪೊಲೀಸರ ಎದುರು ಶರಣಾಗಿದ್ದರು. ಕೂಡಲೇ ಆಕೆಯನ್ನು ಕೋರ್ಟ್‌ಗೆ ಹಾಜರುಪಡಿಸಲಾಯಿತು. ತಡರಾತ್ರಿಯವರೆಗೂ ವಿಚಾರಣೆ ನಡೆದಿತ್ತು.

ಇಂದೋರ್‌ನ ಉದ್ಯಮಿ ರಾಜಾ ರಘುವಂಶಿ ಜೊತೆ ವಿವಾಹವಾಗಿದ್ದ ಸೋನಂ ಮಧುಚಂದ್ರಕ್ಕೆ ಮೇಘಾಲಯಕ್ಕೆ ಬಂದಿದ್ದರು. ಪತಿಯ ಕೊಲೆಗೆ ಸಂಚು ನಡೆಸಿದ್ದ ಆಕೆ, ಮೂವರನ್ನು ಇದಕ್ಕಾಗಿ ನಿಯೋಜಿಸಿದ್ದರು.

ಮೇಘಾಲಯದ ಈಸ್ಟ್ ಖಾಸಿ ಹಿಲ್ಸ್ ಜಿಲ್ಲೆ ಸೋಹ್ರಾದಲ್ಲಿ ರಾಜಾ ಸೂರ್ಯವಂಶಿ ಕೊಲೆ ಆಗಿತ್ತು. ಮೇ 11ರಂದು ಮೇಘಾಲಯಕ್ಕೆ ಬಂದಿದ್ದ ದಂಪತಿ ಮೇ 23ರಂದು ನಾಪತ್ತೆಯಾಗಿದ್ದರು. ಪ್ರಕರಣ ದೇಶವ್ಯಾಪಿ ಗಮನಸೆಳೆದಿತ್ತು. ರಾಜಾ ರಘುವಂಶಿ ಶವವು ವೀಸಾಡೊಂಗ್ ಜಲಪಾತದ ಬಳಿ ಜೂನ್ 2ರಂದು ಪತ್ತೆಯಾಗಿತ್ತು. ಆದರೆ, ಸೋನಂ ಅಂದಿನಿಂದಲೇ ನಾಪತ್ತೆಯಾಗಿದ್ದರು. ಬಳಿಕ ಘಾಜಿಪುರ್ ಜಿಲ್ಲಾ ಪೊಲೀಸರ ಎದುರು ಶರಣಾಗಿದ್ದರು.

ಕೃತ್ಯಕ್ಕೆ ಸಂಬಂಧಿಸಿದಂತೆ ಪೊಲೀಸರು ಲಲಿತ್‌ಪುರ್ ಜಿಲ್ಲೆಯಲ್ಲಿ ಆಕಾಶ್ ರಜಪೂತ್ ಮತ್ತು ಇಂದೋರ್‌ನಲ್ಲಿ ವಿಶಾಲ್ ಸಿಂಗ್, ರಾಜ್ ಸಿಂಗ್ ಎಂಬವರನ್ನು ಬಂಧಿಸಿದ್ದರು. ಒಟ್ಟು ಐವರನ್ನು ಈ ಸಂಬಂಧ ಬಂಧಿಸಲಾಗಿದೆ.

ತಲೆಗೆ ತೀವ್ರ ಹಲ್ಲೆ: ರಾಜಾ ಅವರ ತಲೆಗೆ ಹರಿತ ಆಯುಧದಿಂದ ಎರಡು ಬಾರಿ ಹಲ್ಲೆ ಮಾಡಲಾಗಿದೆ ಎಂದು ಇಂದಿರಾಗಾಂಧಿ ಪ್ರಾದೇಶಿಕ ಆರೋಗ್ಯ ವಿಜ್ಞಾನ ಸಂಸ್ಥೆ ಆಸ್ಪತ್ರೆಯ ಮರಣೋತ್ತರ ಪರೀಕ್ಷಾ ವರದಿ ತಿಳಿಸಿದೆ.



ಸೋನಂ ಅವರನ್ನು ಪೊಲೀಸರು ಘಾಜಿಪುರ್ ಜಿಲ್ಲಾ ಕೋರ್ಟ್‌ಗೆ ಹಾಜರುಪಡಿಸಿದರು –ಪಿಟಿಐ ಚಿತ್ರ

> **ನನ್ನ ಮಗ ಸಂಕಟ ಅನುಭವಿಸಿ ಸತ್ತಿದ್ದಾನೆ. ಇಂಥ ಸ್ಥಿತಿ ಭವಿಷ್ಯದಲ್ಲಿ ಯಾವುದೇ ಪೋಷಕರಿಗೆ ಬರಬಾರದು. ಪಾಠ ಕಲಿಸುವಂತೆ ಎಲ್ಲ ತಪ್ಪಿತಸ್ಥರನ್ನು ನೇಣಿಗೆ ಹಾಕಬೇಕು.**
> **ಅಶೋಕ್ ರಘುವಂಶಿ,** ಮೃತ ಉದ್ಯಮಿಯ ತಂದೆ

ಕ್ರಮ ಕೈಗೊಳ್ಳದ ಧನಕರ್: ಸಿಬಲ್ ಕಿಡಿ

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಶೇಖರ್ ಕುಮಾರ್ ಯಾದವ್ ವಿರುದ್ಧ ಮಹಾಭಿಯೋಗ ನಿರ್ಣಯ ಮಂಡಿಸಿದ ನೋಟಿಸ್ ಮೇಲೆ ಸಭಾಪತಿ ಜಗದೀಪ್ ಧನಕರ್ ಅವರು ಏಕೆ ಕ್ರಮ ಕೈಗೊಂಡಿಲ್ಲ ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಮಂಗಳವಾರ ಪ್ರಶ್ನಿಸಿದ್ದಾರೆ.

ಸರ್ಕಾರವೇ ನ್ಯಾಯಮೂರ್ತಿಯ ರಕ್ಷಣೆಗೆ ಮುಂದಾಗಿದೆ. ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ದೂರಿದ್ದಾರೆ.

ಸಂಕ್ಷಿಪ್ತ ಸುದ್ದಿ

ಲೋಕಸಭೆ ಉಪಾಧ್ಯಕ್ಷರ ಆಯ್ಕೆ: ಖರ್ಗೆ ಪತ್ರ



ಖರ್ಗೆ

ನವದೆಹಲಿ (ಪಿಟಿಐ): ಲೋಕಸಭೆ ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂದು ಆಗ್ರಹಿಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

'ಈ ಸ್ಥಾನ ಖಾಲಿ ಬಿಡುವುದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹೊಂದುವುದಿಲ್ಲ ಮತ್ತು ಸಂವಿಧಾನದ ನಿಯಮಗಳ ಉಲ್ಲಂಘನೆ ಆಗಲಿದೆ' ಎಂದು ಖರ್ಗೆ ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

'ಸಂವಿಧಾದ ವಿಧಿ 93ರಂತೆ ಲೋಕಸಭೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಕಡ್ಡಾಯ. ಸಂವಿಧಾನಾತ್ಮಕವಾಗಿ ಉಪಾಧ್ಯಕ್ಷರ ಸ್ಥಾನವು ಸದನದಲ್ಲಿಯೇ ಎರಡನೇ ಅತಿದೊಡ್ಡ ಸ್ಥಾನವಾಗಿದೆ' ಎಂದು ಹೇಳಿದ್ದಾರೆ. ಲೋಕಸಭೆಯ ಎರಡನೇ ಅಥವಾ ಮೂರನೇ ಅಧಿವೇಶನದಲ್ಲಿಯೇ ಈ ಸ್ಥಾನಕ್ಕಾಗಿ ಆಯ್ಕೆ ಪ್ರಕ್ರಿಯೆ ನಡೆಯುತ್ತಿತ್ತು. 1ರಿಂದ 16ನೇ ಲೋಕಸಭೆವರೆಗೆ ಪ್ರತಿ ಸದನದಲ್ಲಿಯೇ ಉಪಾಧ್ಯಕ್ಷ ಸ್ಥಾನ ಭರ್ತಿಯಾಗಿತ್ತು ಎಂದೂ ಅವರು ಉಲ್ಲೇಖಿಸಿದ್ದಾರೆ.

ಕಮಲ್ ಅವಿರೋಧ ಆಯ್ಕೆ ಸಾಧ್ಯತೆ

ಚೆನ್ನೈ (ಪಿಟಿಐ): ಎಂಎನ್‌ಎಂ ಮುಖ್ಯಸ್ಥ, ನಟ ಕಮಲ್ ಹಾಸನ್ ಸೇರಿದಂತೆ ತಮಿಳುನಾಡಿನ 6 ಮಂದಿ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಇದೆ. ಆಡಳಿತಾರೂಢ ಡಿಎಂಕೆಯ ಮೂವರು, ವಿರೋಧ ಪಕ್ಷ ಎಐಎಡಿಎಂಕೆಯ ಇಬ್ಬರು ಹಾಗೂ ಕಮಲ್ ಹಾಸನ್ ಅವರು ಸಲ್ಲಿಸಿರುವ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ವಿಧಾನಸಭೆಯ ಹೆಚ್ಚುವರಿ ಕಾರ್ಯದರ್ಶಿ ಕಚೇರಿ ಮಂಗಳವಾರ ದೃಢಪಡಿಸಿ, ಅವುಗಳನ್ನು ಅಂಗೀಕರಿಸಿದೆ.

7 ಮಂದಿ ಸ್ವತಂತ್ರ ಅಭ್ಯರ್ಥಿಗಳು ಸಲ್ಲಿಸಿದ್ದ ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ. ರಾಜ್ಯಸಭೆಯಲ್ಲಿ ತಮಿಳುನಾಡಿನ 6 ಹಾಲಿ ಸಂಸದರ ಅವಧಿ ಜುಲೈ 24ಕ್ಕೆ ಮುಕ್ತಾಯಗೊಳ್ಳಲಿದೆ. ಆ ಸ್ಥಾನಗಳಿಗೆ ಜೂನ್ 19ರಂದು ಚುನಾವಣೆ ನಡೆಯಲಿದೆ.

'11 ವರ್ಷದಲ್ಲಿ ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ'

ನವದೆಹಲಿ (ಪಿಟಿಐ): 'ರಕ್ಷಣಾ ಕ್ಷೇತ್ರದಲ್ಲಿ ಕಳೆದ 11 ವರ್ಷಗಳ ಅವಧಿಯಲ್ಲಿ ಗಣನೀಯ ಬದಲಾವಣೆ ಆಗಿದ್ದು, ರಕ್ಷಣಾ ಪರಿಕರಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಮತ್ತು ಆಧುನೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

'ಎಕ್ಸ್' ಜಾಲತಾಣದಲ್ಲಿ ಈ ಅಭಿಪ್ರಾಯ ಹಂಚಿಕೊಂಡಿರುವ ಅವರು, '11 ವರ್ಷಗಳ ಅವಧಿಯಲ್ಲಿ ಆಧುನೀಕರಣ ಮತ್ತು ಸ್ವಾವಲಂಬನೆ ಸಾಧಿಸಲು ಸ್ಪಷ್ಟ ಆದ್ಯತೆ ಸಿಕ್ಕಿದೆ. ಭಾರತವನ್ನು ಸದೃಢಗೊಳಿಸುವಲ್ಲಿ ಜನರ ಸಕ್ರಿಯ ಭಾಗವಹಿಸುವಿಕೆ ನೋಡುವುದೇ ಸಂತೋಷದ ಸಂಗತಿ' ಎಂದಿದ್ದಾರೆ.

ಸರ್ಕಾರದ 11 ವರ್ಷಗಳ ಸಾಧನೆಯ ವಿವರ ಹಂಚಿಕೊಂಡಿರುವ ಅವರು, 'ರಕ್ಷಣಾ ಸಾಮರ್ಥ್ಯ ವೃದ್ಧಿಯಲ್ಲಿ ಭಾರತವು ಕ್ರಾಂತಿಕಾರಕ ಸಾಧನೆ ಮಾಡಿದೆ. ಜಾಗತಿಕ ಪಾಲುದಾರಿಕೆಯನ್ನು ಬಲಪಡಿಸಿದೆ. ಅಂತರಿಕ್ಷ ಕ್ಷೇತ್ರದಲ್ಲಿ ಚರಿತ್ರಾರ್ಹ ಮೈಲುಗಲ್ಲು ಸಾಧಿಸಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಆತ್ಮನಿರ್ಭರ ಭಾರತ ಸಂಕಲ್ಪದೊಂದಿಗೆ ಭಾರತವು ಈ ಸ್ವಾವಲಂಬನೆ ಸಾಧಿಸಿದೆ. ಇದರ ಪ್ರಭಾವವು ವಾಣಿಜ್ಯ ಮತ್ತು ತಂತ್ರಜ್ಞಾನ ಕ್ಷೇತ್ರದ ಮೇಲೂ ಆಗಿದೆ ಎಂದು ಮೋದಿ ಅವರು ಹೇಳಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಎಲ್ಲಿ ಪ್ರೀತಿ ಇದೆಯೋ ಅಲ್ಲಿ ನಿಜವಾದ ಬದುಕು ಇದೆ.
-ಮಹಾತ್ಮ ಗಾಂಧಿ

ಬಾಲ್ಯವಿವಾಹ ಪಿಡುಗಿನ ಕಣ್ಣಾಮುಚ್ಚಾಲೆ ಜಾಗೃತಿ, ವ್ಯಾಪಕ ಆಂದೋಲನ ಅಗತ್ಯ

ಮದುವೆಯ ಹೆಸರಿನಲ್ಲಿ ಬಾಲಕಿಯರ ಬಾಲ್ಯವನ್ನು ಕಸಿದುಕೊಂಡು, ಅವರ ಒಟ್ಟಾರೆ ಬದುಕನ್ನೇ ಗಾಸಿಗೊಳಿಸುವ ಬಾಲ್ಯವಿವಾಹ ಪದ್ಧತಿ ಇನ್ನೂ ಜೀವಂತವಾಗಿರುವುದಕ್ಕೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಗ್ರಾಮವೊಂದರಲ್ಲಿ ನಡೆದಿರುವ ಘಟನೆ ನಿದರ್ಶನದಂತಿದೆ. ಎಂಟನೇ ತರಗತಿಯ ಬಾಲಕಿಗೆ ಆಕೆಯ ಸೋದರಮಾವ ಬಲವಂತವಾಗಿ ತಾಳಿ ಕಟ್ಟಿ ಮದುವೆಯಾಗಲು ಪ್ರಯತ್ನಿಸಿದ್ದಾನೆ. ಆ ಪ್ರಯತ್ನಕ್ಕೆ ಬಾಲಕಿಯ ತಾಯಿ ಹಾಗೂ ಅಜ್ಜಿ ಕೂಡ ಬೆಂಬಲವಾಗಿ ನಿಂತಿದ್ದಾರೆ. ತಾಳಿ ಕಟ್ಟಿಸಿಕೊಳ್ಳಲು ಪ್ರತಿಭಟಿಸಿರುವ ಹುಡುಗಿಯ ಮೇಲೆ ಹಲ್ಲೆ ನಡೆಸಲಾಗಿದೆ. ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿರುವುದನ್ನು ಗಮನಿಸಿರುವ ಪೊಲೀಸರು ಬಾಲಕಿಯನ್ನು ರಕ್ಷಿಸಿದ್ದಾರೆ. ಆದರೆ, ಬಾಲ್ಯವಿವಾಹ ನಡೆಯದ ಕಾರಣದಿಂದಾಗಿ ಪೊಲೀಸರು ಯಾರ ಮೇಲೂ ಪ್ರಕರಣ ದಾಖಲಿಸಿಲ್ಲ. ಮದುವೆಯನ್ನು ತೀವ್ರವಾಗಿ ಪ್ರತಿಭಟಿಸಿದ ಬಾಲಕಿಯ ಮೇಲೆ ಹಲ್ಲೆ ನಡೆಸಿದ ಕಾರಣಕ್ಕಾಗಿ ಆಕೆಯ ತಾಯಿ, ಅಜ್ಜಿ, ಸೋದರಮಾವ, ಆತನ ಅಣ್ಣ ಹಾಗೂ ಅತ್ತಿಗೆಯ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಲಾಗಿದೆ. ಕಾನೂನಿನ ಕಣ್ಣಿಗೆ ಮಣ್ಣೆರಚಿ ರಾಜ್ಯದಲ್ಲಿ ಬಾಲ್ಯವಿವಾಹಗಳು ನಡೆಯುತ್ತಿರುವುದರ ನಡುವೆಯೇ, ಬಾಲ್ಯವಿವಾಹದ ಕಂಟಕದಿಂದ ತಪ್ಪಿಸಿಕೊಂಡಿರುವ ಬಾಲಕಿಯ ದಿಟ್ಟತನ ಮೆಚ್ಚುವಂತಹದ್ದು. ಈ ಪ್ರಕರಣವನ್ನು ಬಾಲ್ಯವಿವಾಹದ ಬಗ್ಗೆ ಹೆಣ್ಣುಮಕ್ಕಳಲ್ಲಿ ಉಂಟಾಗುತ್ತಿರುವ ಜಾಗೃತಿಯ ಸಂಕೇತವಾಗಿಯೂ ನೋಡಬಹುದು. ಬೆಳಗಾವಿ ಜಿಲ್ಲೆಯ ರಾಯಬಾಗದ ಪ್ರಥಮ ಪಿಯುಸಿ ವಿದ್ಯಾರ್ಥಿನಿಯೊಬ್ಬಳು ಪೋಷಕರ ಒತ್ತಡದಿಂದ ಬಾಲ್ಯವಿವಾಹಕ್ಕೆ ಕೊರಳೊಡ್ಡಿದರೂ 'ಮಕ್ಕಳ ಸಹಾಯವಾಣಿ'ಯ ನೆರವು ಪಡೆದು ಸವದತ್ತಿಯ ಬಾಲಕಿಯರ ಸರ್ಕಾರಿ ಬಾಲಮಂದಿರದಲ್ಲಿ ಆಶ್ರಯ ಪಡೆದಿದ್ದು ಕಳೆದ ವರ್ಷ ವರದಿಯಾಗಿತ್ತು. ಮೊದಲ ವರ್ಷದ ಇಂಟರ್‌ಮೀಡಿಯಟ್ ಬೋರ್ಡ್‌ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣಳಾಗಿದ್ದ ವಿದ್ಯಾರ್ಥಿನಿಯೊಬ್ಬಳು, ಬಾಲ್ಯವಿವಾಹವನ್ನು ಪ್ರತಿಭಟಿಸಿ ಜಿಲ್ಲಾಡಳಿತದಿಂದ ರಕ್ಷಣೆ ಪಡೆದು ವಿದ್ಯಾಭ್ಯಾಸ ಮುಂದುವರಿಸಿದ ವಿದ್ಯಮಾನವು ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಿಂದ ವರದಿಯಾಗಿತ್ತು. ಈಗ ಬಾಲ್ಯವಿವಾಹದ ವಿರುದ್ಧ ಧ್ವನಿ ಎತ್ತಿದ ಗಟ್ಟಿಗಿತ್ತಿಯರ ಸಾಲಿಗೆ ಚಿತ್ರದುರ್ಗ ಜಿಲ್ಲೆಯ ಬಾಲಕಿಯೂ ಸೇರಿಕೊಂಡಿದ್ದಾಳೆ. ಬಾಲ್ಯವಿವಾಹ ವಿರುದ್ಧದ ಹೋರಾಟಕ್ಕೆ ರಾಯಭಾರಿಗಳಂತಿರುವ ಜಾಗೃತ ಮನಃಸ್ಥಿತಿಯ ಈ ಬಾಲಕಿಯರು, ಹೆಣ್ಣುಮಕ್ಕಳು ಶಿಕ್ಷಣ ಮುಂದುವರಿಸುವುದಕ್ಕೆ ಪ್ರೇರಣೆಯೂ ಆಗಿದ್ದಾರೆ.



ಬಾಲ್ಯವಿವಾಹದ ಸವಾಲನ್ನು ಸರ್ಕಾರ ಹಾಗೂ ಸಮಾಜ ಜೊತೆ ಜೊತೆಯಾಗಿ ಎದುರಿಸಬೇಕಾಗಿದ್ದು, ಆ ಹೋರಾಟದ ಕೇಂದ್ರದಲ್ಲಿ ಜಾಗೃತ ಬಾಲಕಿಯರು ನಿಲ್ಲಬೇಕಾಗಿದೆ

ಬಾಲ್ಯವಿವಾಹವನ್ನು ಮಾನವ ಹಕ್ಕುಗಳ ಉಲ್ಲಂಘನೆಯ ರೂಪದಲ್ಲಿ ವಿಶ್ವಸಂಸ್ಥೆ ಗುರುತಿಸಿದೆ. ಹದಿನೆಂಟು ವರ್ಷ ವಯಸ್ಸಿನೊಳಗಿನ ಮಕ್ಕಳನ್ನು ಯಾವುದೇ ರೂಪದ ಮದುವೆಗೆ ಒಳಪಡಿಸುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ. ವಿಶ್ವದಲ್ಲಿ ಪ್ರತಿ ಐವರು ಹುಡುಗಿಯರಲ್ಲಿ ಓರ್ವ ಬಾಲಕಿಯ ಮದುವೆ ಹದಿನೆಂಟು ವರ್ಷ ತುಂಬುವ ಮೊದಲೇ ನಡೆಯುತ್ತಿದೆ. ಬಾಲ್ಯದಲ್ಲೇ ಮದುವೆಯಾದ 64 ಕೋಟಿ ಬಾಲಕಿಯರು ಮತ್ತು ಮಹಿಳೆಯರು ಪ್ರಸ್ತುತ ವಿಶ್ವದ ವಿವಿಧ ಭಾಗಗಳಲ್ಲಿದ್ದು, ಈ ಗುಂಪಿಗೆ ಪ್ರತಿವರ್ಷ 1.20 ಕೋಟಿ ನವ ಬಾಲವಿವಾಹಿತೆಯರು ಸೇರ್ಪಡೆ ಆಗುತ್ತಿದ್ದಾರೆ. ಪ್ರತಿ ಮೂರು ಸೆಕೆಂಡಿಗೊಮ್ಮೆ ಜಗತ್ತಿನ ಯಾವುದೋ ಮೂಲೆಯಲ್ಲಿ ಬಾಲಕಿಯೊಬ್ಬಳು ಬಾಲ್ಯವಿವಾಹದ ತೆಕ್ಕೆಗೆ ಸಿಲುಕುತ್ತಿದ್ದಾಳೆ. ಬಾಲ್ಯವಿವಾಹ ಪ್ರಕರಣಗಳು ಹೆಚ್ಚಾಗಿರುವ ದೇಶದ ಮುಂಚೂಣಿ ರಾಜ್ಯಗಳಲ್ಲಿ ಕರ್ನಾಟಕವೂ ಇದೆ. ಅಪ್ರಾಪ್ತ ವಯಸ್ಸಿಗೆ ಗರ್ಭ ಧರಿಸುವ ಪ್ರಕರಣಗಳು ಹೆಚ್ಚುತ್ತಿರುವುದನ್ನು ಹಾಗೂ ಶೇ 21ಕ್ಕಿಂತಲೂ ಹೆಚ್ಚಿನ ಹುಡುಗಿಯರಿಗೆ ಹದಿನೆಂಟು ತುಂಬುವ ಮೊದಲೇ ಮದುವೆಯಾಗುತ್ತಿರುವುದನ್ನು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ– 4 ಮತ್ತು 5ರ ವರದಿಗಳು ಸ್ಪಷ್ಟಪಡಿಸಿವೆ. 'ಬಾಲ್ಯವಿವಾಹ ಪ್ರತಿಬಂಧಕ ಕಾಯ್ದೆ– 2006' ಬಾಲ್ಯವಿವಾಹಗಳನ್ನು ನಿಷೇಧಿಸುತ್ತದೆ ಹಾಗೂ ಬಾಲ್ಯವಿವಾಹದ ಸಂತ್ರಸ್ತರಿಗೆ ರಕ್ಷಣೆ ಮತ್ತು ನೆರವು ಒದಗಿಸುತ್ತದೆ. ಬಾಲ್ಯವಿವಾಹ ತಡೆಗೆಂದೇ ಸಹಾಯವಾಣಿ (1098) ಜಾರಿಯಲ್ಲಿದೆ. ಕರ್ನಾಟಕದಲ್ಲಿ ವಿವಾಹ ನೋಂದಣಿ ಮಾಡುವ ಅಧಿಕಾರವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ನೀಡಿರುವುದು ಬಾಲ್ಯವಿವಾಹಗಳ ನಿಯಂತ್ರಣದಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ವಿಶ್ಲೇಷಿಸಲಾಗಿದೆ. ಸರ್ಕಾರದ ಏನೆಲ್ಲ ಪ್ರಯತ್ನಗಳು ಹಾಗೂ ಕಾನೂನು ನಿರ್ಬಂಧಗಳ ನಡುವೆಯೂ ದೇಶದ ವಿವಿಧ ಭಾಗಗಳಲ್ಲಿ ಬಾಲ್ಯವಿವಾಹಗಳು ನಡೆಯುತ್ತಲೇ ಇವೆ. ಹೆಣ್ಣುಮಕ್ಕಳಿಗೆ ಶಿಕ್ಷಣದ ಹಕ್ಕನ್ನು ನಿರಾಕರಿಸಿ, ಮದುವೆಯ ಮೂಲಕ ಅವರ ಜವಾಬ್ದಾರಿಯನ್ನು ವರ್ಗಾಯಿಸುವ ಪೋಷಕರ ಪೂರ್ವಗ್ರಹ ಹಾಗೂ ಅವರನ್ನು ಹೆರುವ ಯಂತ್ರಗಳಾಗಿಯಷ್ಟೇ ನೋಡುವ ಮನೋಧರ್ಮ ಬಾಲ್ಯವಿವಾಹವನ್ನು ಜೀವಂತವಾಗಿರಿಸಿದೆ. ಲಿಂಗ ತಾರತಮ್ಯವನ್ನು ಉತ್ತೇಜಿಸುವ ಈ ಪದ್ಧತಿಯನ್ನು ಬೇರುಸಮೇತ ನಾಶಗೊಳಿಸಲು ವ್ಯವಸ್ಥಿತ ಆಂದೋಲನವೇ ನಡೆಯಬೇಕಾಗಿದೆ. ಬಾಲ್ಯವಿವಾಹದ ಸವಾಲನ್ನು ಸರ್ಕಾರ ಹಾಗೂ ಸಮಾಜ ಜೊತೆ ಜೊತೆಯಾಗಿ ಎದುರಿಸಬೇಕಾಗಿದ್ದು, ಆ ಹೋರಾಟದ ಕೇಂದ್ರದಲ್ಲಿ ಜಾಗೃತ ಬಾಲಕಿಯರು ನಿಲ್ಲಬೇಕಾಗಿದೆ.

ದಿನದ ಟ್ವೀಟ್


ಸ್ಫೂರ್ತಿದಾಯಕ



ಚೆನಾಬ್ ರೈಲ್ವೆ ಸೇತುವೆಯ ನಿರ್ಮಾಣದ ಹಿಂದಿನ ಹಲವು ಹೀರೊಗಳನ್ನು ನೆನಪಿಸಿಕೊಂಡ ಜಿ. ಮಾಧವಿ ಲತಾ ಅವರ ಅಂತಃಕರಣವು ಸ್ಫೂರ್ತಿದಾಯಕ. ಎಂಜಿನಿಯರಿಂಗ್ ಅದ್ಭುತಗಳು ನಿರ್ಮಾಣವಾಗುವುದು ತಂಡಸ್ಫೂರ್ತಿಯ ಕೆಲಸದಿಂದಾಗಿ. ಅದನ್ನು ಅವರು ನಮಗೆ ನೆನಪಿಸಿದ್ದಾರೆ.

ಅಭಿಷೇಕ್ ಬಾಕ್ಸಿ, ಡಿಜಿಟಲ್ ಕನ್ಸಲ್ಟೆಂಟ್

ಕಿಡಿನುಡಿ



ನಂದಿಬೆಟ್ಟದಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಜಾತಿ ಜನಗಣತಿ ವರದಿಯನ್ನು ಅನುಮೋದಿಸುವುದಕ್ಕೆ ಕಾಂಗ್ರೆಸ್ ಸರ್ಕಾರ ಮುಂದಾಗಿತ್ತು. ಆದರೆ, ಈ ವರದಿಯ ದತ್ತಾಂಶ ಸರಿಯಿಲ್ಲ, ಕಾಲಮಿತಿಯಲ್ಲಿ ಮರು ಗಣತಿ ಮಾಡಿ ಎಂದು ಕಾಂಗ್ರೆಸ್ ಹೈಕಮಾಂಡ್ ಕಿವಿ ಹಿಂಡಿದೆ...

ವಿ. ಸುನಿಲ್‌ಕುಮಾರ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಭಾನುವಾರ, 11-6-2000

● **ಅಂಧ ನಾನೂಗೆ ಐಎಎಸ್ ಬಯಕೆ**

ಹುಬ್ಬಳ್ಳಿ, ಜೂನ್ 10– ಹುಬ್ಬಳ್ಳಿಯಿಂದ ಕಾರವಾರಕ್ಕೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ಕೇಟಿಂಗ್ ಮೂಲಕ ಕ್ರಮಿಸಿ ದಾಖಲೆ ನಿರ್ಮಾಣ ಮಾಡಿರುವ ಹುಬ್ಬಳ್ಳಿಯ ಅಂಧ ಬಾಲಕ ನಾನೂ ಸಹದೇವ ಪಾಟೀಲ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹಾಲ್ ಟಿಕೆಟ್ ತಪ್ಪಿನಿಂದ ಸಮಸ್ಯೆಯಾಗಿದ್ದ ವಿಷಯಗಳಲ್ಲಿ ಅತ್ಯಂತ ಹೆಚ್ಚಿನ ಅಂಕಗಳೊಂದಿಗೆ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದು ಐಎಎಸ್ ಮಾಡುವ ಹೆಬ್ಬಯಕೆ ಹೊಂದಿದ್ದಾನೆ.

'ಎಲ್ಲರೂ ಐಎಎಸ್ ಮಾಡ್ತಾರೆ ಅಂತ ನಾನೂ ಮಾಡಂಗಿಲ್ರೀ. ಅಂಧರು ಯಾರೂ ಈವರೆಗೆ ಐಎಎಸ್ ಮಾಡಿಲ್ಲ. ಅದಕ್ಕೆ ಐಎಎಸ್ ಮಾಡಿ ಸಾಧನೆ ಮಾಡ್ಬೇಕೂ ಅಂತಿದ್ದೀನಿ'– 'ಪ್ರಜಾವಾಣಿ' ಪ್ರಶ್ನೆಗೆ ನಾನೂ ಪಾಟೀಲ ನೀಡಿದ ಉತ್ತರವಿದು.

● **ಗ್ರಾಮೀಣ ವಿದ್ಯಾರ್ಥಿಗಳಿಗೆ ಮುಳುವು?**

ಬೆಂಗಳೂರು, ಜೂನ್ 10– ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವೇಳೆ ಬದಲಾವಣೆಯಿಂದ ಅನೇಕ ಗ್ರಾಮೀಣ ವಿದ್ಯಾರ್ಥಿಗಳು, ಅದರಲ್ಲೂ ವಿಶೇಷವಾಗಿ ಬಾಲಕಿಯರು ವಿದ್ಯಾಭ್ಯಾಸವನ್ನು ಅರ್ಧಕ್ಕೆ ಬಿಡಬೇಕಾಗಬಹುದೇ?

ಶಾಲೆಗಳ ವೇಳೆಯನ್ನು ಬೆಳಿಗ್ಗೆ 11ಕ್ಕೆ ಬದಲಾಗಿ 9.30ಕ್ಕೆ ನಿಗದಿ ಪಡಿಸಿರುವುದರಿಂದ ಹಳ್ಳಿಗಾಡಿನ ಅನೇಕ ವಿದ್ಯಾರ್ಥಿಗಳಿಗೆ ಶಾಲೆಗೆ ಬರುವುದು ಕಷ್ಟವಾಗಬಹುದು ಎಂಬ ಅನಿಸಿಕೆ ವ್ಯಕ್ತವಾಗುತ್ತಿದೆ.

50 ವರ್ಷಗಳ ಹಿಂದೆ

ಬುಧವಾರ, 11-6-1975

● **ನಗರದಲ್ಲಿ ರೇಷನ್ ವೈಖರಿ**

ಬೆಂಗಳೂರು, ಜೂನ್ 10– ಆಹಾರ ಪದ್ಧತಿಯನ್ನು ಬದಲಾಯಿಸಿ ಮಿಶ್ರ ಆಹಾರ ಪದ್ಧತಿ ಜಾರಿಗೆ ತರಬೇಕೆಂಬ ವಾದವನ್ನು ಆಹಾರ ಸರಬರಾಜು ಇಲಾಖೆಯು ಗ್ರಾಹಕರ ಮೇಲೆ ಕಡ್ಡಾಯವಾಗಿ ಹೇರಲು ಪಣ ತೊಟ್ಟಂತಿದೆ.

ನೀಡುವ ಗೋಧಿ ಹಿಟ್ಟಿನಲ್ಲಿ ಹುಳುಗಳಿದ್ದು, ಸಸ್ಯಾಹಾರಿಗಳನ್ನು ಮಾಂಸಹಾರಿಗಳನ್ನಾಗಿ ಪರಿವರ್ತಿಸುವ ಧೋರಣೆ ಒಂದು ಕಡೆಯಾದರೆ, ಕಸ–ಕಡ್ಡಿ, ಹುಳು ಹುಪ್ಪಟೆ ಸಮೇತವಾಗಿ ಸಕಲ ಧಾನ್ಯಮಿಶ್ರಿತ ಗೋಧಿಯನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ನೀಡಲಾಗುತ್ತಿದೆ ಎಂಬ ದೂರುಗಳು ಬಂದಿವೆ.

ಗೋಧಿಹಿಟ್ಟು ದನಗಳ ಮೇವಿಗೂ ಯೋಗ್ಯವಿಲ್ಲ ಎಂದು ಶಾಸಕ ಪಿ.ಎಸ್. ಕೃಷ್ಣಯ್ಯರ್ ದೂರಿದರೆ, 'ನೀವೇ ನೋಡಿ' ಎಂದು ಗ್ರಾಹಕರಲ್ಲೊಬ್ಬರು ತಾವು ನ್ಯಾಯಬೆಲೆ ಅಂಗಡಿಯಿಂದ ತಂದ ಗೋಧಿಚೀಲವನ್ನು 'ಪ್ರಜಾವಾಣಿ' ಪತ್ರಿಕಾಲಯಕ್ಕೆ ಒಪ್ಪಿಸಿದರು.

ದ್ವೇಷ ರಾಜಕಾರಣಕ್ಕೆ ಮುಮ್ಮೇಳವಾಗುತ್ತಿರುವ ಯಕ್ಷಗಾನ ಕಲಾವಿದರು

ಕರಾವಳಿ ಕರ್ನಾಟಕದ 'ಪಕ್ಷಗಾನ' ಕಲೆ



ಅನುರಣನ

ನಾರಾಯಣ ಎ.

ಕರಾವಳಿ ಜಿಲ್ಲೆಗಳನ್ನು ಇಡೀ ಕರ್ನಾಟಕದಲ್ಲಿ ಧರ್ಮದ್ವೇಷದ ರಕ್ತಸಿಕ್ತ ರಂಗಸ್ಥಳವನ್ನಾಗಿ ಮಾರ್ಪಡಿಸಿದ್ದರಲ್ಲಿ ಅಲ್ಲಿನ ಯಕ್ಷಗಾನ ರಂಗಭೂಮಿಯು ಬಹುದೊಡ್ಡ ಪಾತ್ರ ವಹಿಸುತ್ತಿದೆ. ಯಕ್ಷಗಾನವೀಗ ಯಕ್ಷಗಾನವಾಗಿ ಉಳಿದಿಲ್ಲ. ಅದನ್ನು 'ಪಕ್ಷಗಾನ' ಎಂದು ಕರೆಯುವುದು ಮೇಲು. ಯಕ್ಷಗಾನ ಪ್ರದರ್ಶನಗಳಲ್ಲೀಗ ದೇವೇಂದ್ರ ಮರೆಯಾಗಿದ್ದಾನೆ. ಎಲ್ಲೆಲ್ಲಿಯೂ ರಾರಾಜಿಸುವ ಹೆಸರೆಂದರೆ ಅದು 'ನರೇಂದ್ರ'. ಹೇಗಾದರೂ 'ನರೇಂದ್ರ' ಎನ್ನುವ ಹೆಸರನ್ನು ಯಾವುದೇ ಸನ್ನಿವೇಶಕ್ಕಾದರೂ ತಳುಕು ಹಾಕಿ, 'ನರೇಂದ್ರ'ನೇ ಎಲ್ಲವೂ 'ನರೇಂದ್ರ'ನಿಂದಲೇ ಎಲ್ಲವೂ ಎಂದೆಲ್ಲ ಬಡಬಡಿಸುವುದು ಕೆಲವು ಕಲಾವಿದರಿಗೆ ಗೀಳಾಗಿಬಿಟ್ಟಿದೆ.

ಒಂದು ಪಕ್ಷಕ್ಕೆ ಮತ್ತು ಅದರ ನಾಯಕನಿಗೆ ಪರಾಕು ಹೇಳುವುದಷ್ಟೇ ಆಗಿದ್ದರೆ ಯಕ್ಷಗಾನ ಕಲೆಯ ಹೊಸ ಅವತಾರವನ್ನು ಹೇಗೋ ಸಹಿಸಿಕೊಳ್ಳಬಹುದಿತ್ತು. ಸಮಸ್ಯೆ ಇಷ್ಟು ಮಾತ್ರವಲ್ಲ, ಕೆಲವು ಯಕ್ಷಗಾನದ ವೇಷಗಳು ಅತ್ಯುಗ್ರ ದ್ವೇಷ ಭಾಷಣ ಮಾಡುತ್ತಿವೆ. ಒಂದು ಸಮುದಾಯವನ್ನು ರಾಕ್ಷಸೀಕರಿಸುವುದು, ಒಂದು ರಾಜಕೀಯ ಪಕ್ಷ ಮತ್ತು ಅದರ ನಾಯಕನ ಕುರಿತು ಅಸತ್ಯಗಳಿಂದ ಕೂಡಿದ ಅಪಪ್ರಚಾರ ನಡೆಸುವುದು, ರಾಜ್ಯದ ಗ್ಯಾರಂಟಿ ಕಲ್ಯಾಣ ಕಾರ್ಯಕ್ರಮಗಳನ್ನು ಅವಹೇಳನ ಮಾಡುವುದು– ಹೀಗೆ ಎಲ್ಲವೂ ಕಲಾತ್ಮಕ ಅಭಿವ್ಯಕ್ತಿಯ ಹೆಸರಲ್ಲಿ ನಡೆಯುತ್ತಿವೆ.

ಇಂತಹ ಉದ್ದೇಶಗಳಿಗಾಗಿಯೇ ಹಾಸ್ಯ ಸನ್ನಿವೇಶಗಳನ್ನು ಯಕ್ಷಗಾನ ರೂಪದಲ್ಲಿ ಪ್ರಸ್ತುತಪಡಿಸುವುದು ಮತ್ತು ಅದರಲ್ಲಿ ಹಿಂದೂ ಮತ್ತು ಮುಸ್ಲಿಮರ ಪಾತ್ರಗಳ ಸಂಭಾಷಣೆಯ ಸನ್ನಿವೇಶವನ್ನು ಹೇಗೋ ಪೋಣಿಸಿ, ಪ್ರೇಕ್ಷಕರ ಮನಸ್ಸಿನಲ್ಲಿ ದ್ವೇಷ ಬಿತ್ತುವುದು ಯಕ್ಷಗಾನ ರಂಗದ ಇತ್ತೀಚಿನ ಬಹುದೊಡ್ಡ ಆವಿಷ್ಕಾರ. ಅದರ ಜತೆಗೆ ಒಂದು ರಾಜಕೀಯ ಪಕ್ಷ ಮಾತ್ರ 'ಭಯೋತ್ಪಾದಕರಿಂದ' ದೇಶವನ್ನು ರಕ್ಷಿಸುತ್ತದೆ, ಉಳಿದೆಲ್ಲ ಪಕ್ಷಗಳು ಮುಸ್ಲಿಮರ ಓಲೈಕೆಯಲ್ಲಿ ತೊಡಗಿವೆ ಎಂಬ ನಿರೂಪಣೆಯ ನಿರ್ಮಾಣದಲ್ಲೂ ಯಕ್ಷಗಾನ ರಂಗಭೂಮಿ ದೊಡ್ಡದಾಗಿ ತೊಡಗಿಸಿಕೊಂಡಿದೆ. 'ನಾವು ಹಿಂದೂಗಳು ಹಾಗೆ, ನೀವು ಮುಸ್ಲಿಮರು ಹೀಗೆ' ಅಂತ ಸಂಬಂಧವೇ ಇಲ್ಲದೆ ಸಂಭಾಷಣೆಗಳನ್ನು ಪ್ರಸಂಗಗಳಲ್ಲಿ ತುರುಕಲಾಗುತ್ತದೆ.

ಕೀಳು ಅಭಿರುಚಿಯ ಮಾತುಗಾರಿಕೆ ಯಕ್ಷಗಾನದಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಬಹುಕಾಲದಿಂದಲೂ ಕೇಳಿ ಬರುತ್ತಿತ್ತು. ಈಗ ಹಾಗಲ್ಲ. ಈಗ ನೇರ ಪ್ರಚೋದನಕಾರಿ ಮಾತುಗಳು. ಅವುಗಳನ್ನು ಆ ಕಾರಣಕ್ಕಾಗಿಯೇ ಇಲ್ಲಿ ಬರೆಯಲಾಗದು. ಈ ಹಿಂದೆ ದ್ವಂದ್ವಾರ್ಥದಲ್ಲಿ, ಶ್ಲೇಷೆಯಲ್ಲಿ ಪ್ರಕಟವಾಗುತ್ತಿದ್ದ ಪೂರ್ವಗ್ರಹ ಈಗ ನಿರ್ಭಿಡೆಯಿಂದ ನೇರ ಮಾತುಗಳಲ್ಲಿ ಪ್ರಕಟವಾಗುತ್ತದೆ. ಹಾಸ್ಯಕ್ಕೆಂದೇ ಸೃಷ್ಟಿಸಲಾದ ವಿಕೃತ ಪ್ರದರ್ಶನಗಳಲ್ಲಿ ಮಾತ್ರವಲ್ಲ; ಪ್ರಧಾನ ಧಾರೆಯ ಪ್ರದರ್ಶನಗಳಲ್ಲಿಯೂ ದ್ವೇಷ, ಅಪಪ್ರಚಾರದ ತುಣುಕುಗಳು ಇಣುಕುತ್ತಿವೆ. ಇವೆಲ್ಲವುಗಳ ವಿಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ.

ಯಕ್ಷಗಾನ ರಂಗದ ಮಹಾನ್ ಕಲಾವಿದ ಮತ್ತು ಮಾನವತಾವಾದಿಯಾಗಿದ್ದ ದಿವಂಗತ ಶೇಣಿ ಗೋಪಾಲಕೃಷ್ಣ ಭಟ್ ಅವರು ಒಂದು ಕಾಲಕ್ಕೆ ನಿರೂಪಿಸುತ್ತಿದ್ದ 'ಬಪ್ಪಬ್ಯಾರಿ' ಎಂಬ ಒಂದು ಯಕ್ಷಗಾನ ಪಾತ್ರವಿದೆ. 'ಬಪ್ಪನಾಡು ಕ್ಷೇತ್ರಮಹಾತ್ಮೆ' ಎನ್ನುವ ಮತೀಯ ಸಾಮರಸ್ಯ ಸಾರುವ ಪ್ರಸಂಗದಲ್ಲಿ ಶೇಣಿಯವರು, ಬಪ್ಪ ಎಂಬ ಮುಸ್ಲಿಂ ಸಮುದಾಯದ ಸಾಹುಕಾರನ ಪಾತ್ರವನ್ನು ಅತ್ಯದ್ಭುತವಾಗಿ ಕಟ್ಟಿಕೊಡುತ್ತಿದ್ದರು. ಈಗ ಆ ಪಾತ್ರ ನಿರ್ವಹಿಸುವ ಕಲಾವಿದರು ಸಂಭಾಷಣೆಯಲ್ಲಿ ಪರೋಕ್ಷವಾಗಿ ಟಿಪ್ಪುವನ್ನು ಎಳೆತಂದು, ಟಿಪ್ಪು ಜಯಂತಿ ಖಂಡಿಸುವ ಮಾತುಗಳನ್ನು ತುರುಕಿ, ವಾಟ್ಸ್‌ಆ್ಯಪ್ ವಿಶ್ವವಿದ್ಯಾಲಯದಿಂದ ಪಡೆದ ಜ್ಞಾನವನ್ನು ಪ್ರದರ್ಶಿಸುತ್ತಾರೆ. ಹೀಗೆ ರಾಜಕೀಯ ಪಕ್ಷವೊಂದರ ಐ.ಟಿ ಸೆಲ್ ಹರಿಬಿಡುವ ಅಪ್ಪಟ ಸುಳ್ಳುಗಳಿಗೆ ರಂಗಸ್ಥಳದಲ್ಲಿ ತುತ್ತೂರಿಯಾಗಿಬಿಡುವ ಪ್ರವೃತ್ತಿಯನ್ನು ಮೈಗೂಡಿಸಿಕೊಂಡ ಕಲಾವಿದರ ಸಂಖ್ಯೆ ಹೆಚ್ಚುತ್ತಿದೆ.

ಯಕ್ಷಗಾನದ ಈ ಸ್ಥಿತ್ಯಂತರವನ್ನು ಕಲೆಯೊಂದರ ಅಂಚಿನಲ್ಲಿ ನಡೆಯುವ ಒಂದಷ್ಟು ಅಪಭ್ರಂಶವೆಂದು ಕಡೆಗಣಿಸಲು ಸಾಧ್ಯವಿಲ್ಲ. ಲವಲೇಶವೂ ಅಳುಕಿಲ್ಲದೆ, ಕಿಂಚಿತ್ತೂ ಲಜ್ಜೆಯಿಲ್ಲದೆ, ಯಾವೊಂದು ಪ್ರತಿರೋಧವೂ ಕಾಣದೆ ಒಂದು ಸಮುದಾಯದ ಕುರಿತಾಗಿ ಅಪನಂಬಿಕೆ ಮತ್ತು ದ್ವೇಷ ಹರಡಲು, ಒಂದು ರಾಜಕೀಯ ಪಕ್ಷವನ್ನು ಮತ್ತು ಅದರ ನಾಯಕರನ್ನು ಕೀಳಾಗಿ ಚಿತ್ರಿಸಲು, ಇನ್ನೊಂದು ಪಕ್ಷ ಮತ್ತು ಅದರ ನಾಯಕನನ್ನು ವೈಭವೀಕರಿಸಲು ರಂಗಭೂಮಿಯೊಂದರ ದುರುಪಯೋಗ ಈ ಮಟ್ಟದಲ್ಲಿ ನಡೆಯುತ್ತಿರುವುದು ದೇಶದಲ್ಲೇ ಮೊದಲಿರಬೇಕು.

ಕರಾವಳಿಯ ದ್ವೇಷೋತ್ಪಾದನಾ ಕಾರ್ಖಾನೆಗಳಲ್ಲಿ ಕಾಲಾಳುಗಾಗಿ ದುಡಿಯುವ ಬಹುತೇಕ ಯುವಕರು ಹಿಂದುಳಿದ ಜಾತಿಗಳಿಗೆ ಸೇರಿದವರು. ಅದೇ ರೀತಿಯಲ್ಲಿ, ಯಕ್ಷಗಾನದಲ್ಲಿ ದ್ವೇಷದ 'ಬಾಯಾಳು'ಗಳಾಗಿ ಬಡಬಡಿಸಿ ಕೃತಾರ್ಥತೆ ಹೊಂದುತ್ತಿರುವ ಹೆಚ್ಚಿನ ಕಲಾವಿದರು ಕೂಡ ಶೂದ್ರ ಜಾತಿಗಳಿಗೆ ಸೇರಿದವರು. ದಶಕಗಳ ಹಿಂದೆ ಪ್ರಾಸಬದ್ಧ ಮಾತುಗಳ ಮೂಲಕ ದ್ವೇಷ ಪ್ರಸಾರ ಮಾಡುತ್ತಿದ್ದ ಶೂದ್ರ ಜಾತಿಯ ಯಕ್ಷಗಾನ ಕಲಾವಿದರೊಬ್ಬರು ತಮ್ಮ ಇಳಿವಯಸ್ಸಿನಲ್ಲಿ ಮೈತುಂಬ ಕೇಸುಗಳನ್ನು ಹಾಕಿಸಿಕೊಂಡಿದ್ದರು. ದ್ವೇಷವಾಹಕ ಪಾತ್ರವನ್ನು ವಹಿಸಲು ಅವರಿಗೆ ಒಪ್ಪಿಸಿದ ಸೂತ್ರಧಾರರು ಯಾರೂ ಕಷ್ಟಕಾಲದಲ್ಲಿ ಅವರ ನೆರವಿಗೆ ಬರಲಿಲ್ಲ. ಕೇಸುಗಳಿಂದ ಬಿಡಿಸಿಕೊಳ್ಳಲು ಅವರು ದೈನೇಸಿಯಾಗಿ ಅಲೆಯಬೇಕಾಯಿತು; ಕಂಡಕಂಡವರಲ್ಲಿ ಅಂಗಲಾಚಬೇಕಾಯಿತು. ಇವೆಲ್ಲವನ್ನೂ ಅವರು ತಮ್ಮ ಆತ್ಮಚರಿತ್ರೆಯಲ್ಲಿ ಬರೆದುಕೊಂಡಿದ್ದಾರೆ. ಇಂದಿನ ದ್ವೇಷಗಾನ ಕಲಾವಿದರು ಆ ದಿವಂಗತ ಕಲಾವಿದರ ಅನುಭವಗಳಿಂದ ಕಲಿಯಬಹುದಾದ ಪಾಠಗಳಿವೆ. ಆಗ ರಾಜ್ಯದಲ್ಲಿ ದ್ವೇಷಭಾಷಣ ಬಿಗಿಯುವವರನ್ನು ಬೆನ್ನಟ್ಟಿ ಕೇಸು ಜಡಿಯುವ ಸರ್ಕಾರವೊಂದಿತ್ತು (ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದ ಕಾಲ). ಈಗ ಯಾರೂ ಕೇಳುವವರಿಲ್ಲ ಎನ್ನುವುದೇ ದ್ವೇಷಗಾನ ಕಲಾವಿದರಿಗೆ ಧೈರ್ಯ ತಂದುಕೊಟ್ಟಿರಬೇಕು.




ಪಡ್ಡೆ ಯುವಕ–ಯುವತಿಯರು ಸಾಮಾಜಿಕ ಜಾಲ ತಾಣಗಳ ಗೋಡೆಯಲ್ಲಿ ಗೀಚುವ ದ್ವೇಷದ ಸಾಲುಗಳನ್ನು ಜನ ಗಂಭೀರವಾಗಿ ಪರಿಗಣಿಸದೇ ಹೋಗಬಹುದು. ಮೂರನೇ ದರ್ಜೆಯ ರಾಜಕೀಯ ನಾಯಕರು ಮತ್ತು ವೇದಿಕೆ ಏರಿದರೆ ಮನೋಸ್ಥಿಮಿತ ಕಳೆದುಕೊಳ್ಳುವ 'ವಾಗ್ಮಿ'ಗಳ ದ್ವೇಷ ಭಾಷಣಗಳನ್ನು ಜನ ಕಡೆಗಣಿಸಬಹುದು. ಆದರೆ, ಯಕ್ಷಗಾನ ರಂಗಭೂಮಿಯ ಮೂಲಕ ದ್ವೇಷವನ್ನು ಹರಡುವ ವಿದ್ಯಮಾನವನ್ನು ಸುಲಭವಾಗಿ ನಿರ್ಲಕ್ಷಿಸಲಾಗದು. ಏಕೆಂದರೆ, ಕರಾವಳಿಯಲ್ಲಿ ಯಕ್ಷಗಾನ ಬರೀ ಮನರಂಜನಾ ಕಲೆಯಲ್ಲ. ಅದಕ್ಕೊಂದು ಧಾರ್ಮಿಕ ಆವರಣವಿದೆ. ದೇವರುಗಳಿಗೆ ಸಲ್ಲಿಸುವ ಸೇವೆಯೆಂದು ಅದನ್ನು ಜನ ಪರಿಗಣಿಸುತ್ತಾರೆ.

'... ಅಂಬುಜಾಸನ ವಾಣಿಯರ ಪಾದಾಂಬುಜಕೆ ಪೊಡಮಡುತ ವರ್ಣಿಪೆನೀ ಕಥಾಮೃತವ...' ಎಂದು ಸಕಲ ವೈದಿಕ ದೇವಾನುದೇವತೆಗಳನ್ನು ಪ್ರಾರ್ಥಿಸಿಯೇ ಯಕ್ಷಗಾನದ ಹೆಸರಲ್ಲಿ ನಡೆಯುವ ದ್ವೇಷಗಾನ– ಪಕ್ಷಗಾನ ಪ್ರದರ್ಶನಗಳು ಪ್ರಾರಂಭವಾಗುವುದು. ಸಹಜವಾಗಿಯೇ ಯಕ್ಷಗಾನ ರಂಗಸ್ಥಳದಿಂದ ರವಾನೆಯಾಗುವ ಪ್ರತ್ಯಕ್ಷ–ಪರೋಕ್ಷ ದ್ವೇಷ ಸಂದೇಶಗಳಿಗೆ ಹೆಚ್ಚಿನ ವಿಶ್ವಾಸಾರ್ಹತೆ ಮತ್ತು ಸ್ವೀಕೃತಿ ಇರುತ್ತದೆ.

'ಕರ್ನಾಟಕದ ಕಲೆ' ಎಂದು ಯಕ್ಷಗಾನ ಪ್ರಸಿದ್ಧ. ಆದರೆ, ವಾಸ್ತವದಲ್ಲಿ ಯಕ್ಷಗಾನವು ಕರ್ನಾಟಕವನ್ನು 'ಕರ್ನಾಟಕ ಸಂಸ್ಕೃತಿ'ಯಿಂದ ದೂರಕ್ಕೆ ಒಯ್ಯುವ ಕಲೆಯಾಗುತ್ತಿದೆ. ಒಂದರ್ಥದಲ್ಲಿ ಯಕ್ಷಗಾನ ಇದನ್ನು ಹಿಂದಿನಿಂದಲೂ ಮಾಡುತ್ತಾ ಬಂದಿದೆ. ರಾಜಕೀಯದಿಂದ ದೂರವಿದ್ದು ಕೇವಲ ಕಲೆಯಾಗಿ ಪ್ರದರ್ಶನಗೊಳ್ಳುತ್ತಿದ್ದ ಕಾಲದಲ್ಲೂ ಸ್ಥಳೀಯ ಸಂಸ್ಕೃತಿಯ ಮೇಲೆ ಕೆಲವೇ ಕೆಲವು ಪುರಾಣ ಕಥಾನಕಗಳ ಪಾರಮ್ಯವನ್ನು ಹೇರುವ ಕೆಲಸವನ್ನು ಯಕ್ಷಗಾನವು ಸದ್ದಿಲ್ಲದೇ ಮಾಡುತ್ತಿತ್ತು. ಸ್ಥಳೀಯ ಪುರಾಣಗಳನ್ನು ಕೇಂದ್ರೀಕರಿಸಿಕೊಂಡ ಪ್ರಸಂಗಗಳು ಮುನ್ನೆಲೆಗೆ ಬಂದಾಗಲೂ ಅವುಗಳಿಗೆ ಎರಡನೇ ದರ್ಜೆಯ ಸ್ಥಾನ ನೀಡಲಾಯಿತು. ಇಲ್ಲವೇ ಅವುಗಳನ್ನು ಸ್ಥಾಪಿತ ಪುರಾಣ ಕಥೆಗಳ ಜೊತೆಗೆ ಕೃತಕವಾಗಿ ಬೆಸೆಯಲಾಯಿತು. ಬಹುತ್ವ ಮತ್ತು ಸಾಮರಸ್ಯವನ್ನು ಎತ್ತಿಹಿಡಿಯುವ ಸ್ಥಳೀಯ ಸಂಸ್ಕೃತಿಯನ್ನು ಯಕ್ಷಗಾನ ಗೌಣಗೊಳಿಸಿದ್ದು ಹೀಗೆ.

ಯಕ್ಷಗಾನ ಒಂದು ಪ್ರಾದೇಶಿಕ ಕಲೆ; ಸ್ಥಳೀಯ ರಂಗಭೂಮಿ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಸ್ಥಳೀಯ ಸಂಸ್ಕೃತಿಯನ್ನು ಮತ್ತು ಅನನ್ಯತೆಯನ್ನು ರಕ್ಷಿಸಲು ಅದು ನೆರವಾಗಬೇಕಿತ್ತು. ಆದರೆ, ಯಕ್ಷಗಾನ ಕರಾವಳಿಯ ನೆಲದ ಸಂಸ್ಕೃತಿ ಮತ್ತು ಅನನ್ಯತೆಯನ್ನು ನಾಶಗೊಳಿಸುತ್ತಿರುವ ರಾಜಕೀಯದ ಕೈಗೆ ತನ್ನನ್ನು ತಾನು ಒಪ್ಪಿಸಿಕೊಂಡಿದೆ ಅಥವಾ ಅದಕ್ಕೆ ಈ ಸಾಂಸ್ಕೃತಿಕ ನಾಶದ ಪ್ರಕ್ರಿಯೆಯಲ್ಲಿ ಭಾಗಿಯಾಗದೆ ಉಳಿಯಲಾಗದ ಒಂದು ರಾಜಕೀಯ-ಸಾಮಾಜಿಕ ಪರಿಸರ ಯಕ್ಷಗಾನದ ನೆಲದಲ್ಲಿ ಸೃಷ್ಟಿಯಾಗಿದೆ. ಹಾಗಾಗಿ, ಪ್ರಸ್ತುತ ಕರಾವಳಿಯ ಧರ್ಮದ್ವೇಷದ ವೈರಸ್‌ಗೆ ಮದ್ದು ಅರೆಯಲು ಹೊರಟವರು ಆ ಪುಣ್ಯ ಕೆಲಸವನ್ನು ಯಕ್ಷಗಾನ ರಂಗಸ್ಥಳಗಳಿಂದಲೇ ಪ್ರಾರಂಭಿಸಿದರೆ ಒಳಿತು.

ಚುರುಮುರಿ



ತಪ್ ಯಾರ್ದು?

• ಮಣ್ಣೆ ರಾಜು

ಎಲ್ಲಾ ಮಾದರಿಯ ಕ್ರಿಕೆಟ್‌ಗೆ ಶಂಕ್ರಿ ವಿದಾಯ ಹೇಳಿದ್ದ.

'ಕ್ರಿಕೆಟ್ ಬಗ್ಗೆ ನಿನಗಿನ್ನೂ ಏಜು, ಕ್ರೇಜು ಉಳಿದಿದೆ. ನಿರ್ಧಾರ ವಾಪಸ್ ತಗೊ...' ಗೆಳೆಯ ಗೋಪಾಲಿ ಮನವೊಲಿಸಲೆತ್ನಿಸಿದ.

'ಆರ್‌ಸಿಬಿ ಕಪ್ ಗೆದ್ದ ನಂತರದ ಬೆಳವಣಿಗೆ ಕ್ರಿಕೆಟ್ ಬಗ್ಗೆ ಜಿಗುಪ್ಸೆ ಮೂಡಿಸಿದೆ' ಶಂಕ್ರಿಗೆ ಬೇಸರ.

'ನೀನು ಆಟಗಾರನಲ್ಲ, ಕ್ರಿಕೆಟ್ ನೋಟಗಾರ. ನಿನ್ನಂಥವರೇ ವಿದಾಯ ಹೇಳಿಬಿಟ್ಟರೆ ಕ್ರಿಕೆಟ್ ಉಳಿಯುತ್ತಾ?'

'11 ಜನ ಗೆದ್ದ ಕಪ್‌ಗೆ 11 ಅಭಿಮಾನಿಗಳು ಬಲಿಯಾದರು. ಗೆದ್ದವರಿಗೂ ಆನಂದ ಕೊಡಲಿಲ್ಲ, ನಾವೂ ಸಂಭ್ರಮಪಡಲಿಲ್ಲ, ಛೇ...'

'ಕಪ್ ನಮ್ದೆ, ಕಪ್ ನಮ್ದೆ ಅಂತ ನಾವೇ ಆತುರಪಟ್ವಿ, ತಪ್ ನಮ್ದೇ...' ಸುಮಿ ಕಾಫಿ ತಂದುಕೊಟ್ಟಳು.

'ನಮಗೇನೋ ಆತುರವಿತ್ತು, ಆರ್‌ಸಿಬಿಗೆ ಕಪ್ ಗೆಲ್ಲುವ ಅವಸರವೇನಿತ್ತು? 18 ವರ್ಷದ ಜೊತೆಗೆ ಇನ್ನಷ್ಟು ವರ್ಷ ತೆಪ್ಪಗಿರಬೇಕಾಗಿತ್ತು, ತಪ್ ಅವರ್ದೇ...' ಅಂದ ಗೋಪಾಲಿ.

'ಮುಂದಿನ ವರ್ಷ ಆರ್‌ಸಿಬಿ ಕಪ್ ಗೆದ್ದಾಗ ಸಂಭ್ರಮಿಸೋಣ ಬಿಡು'.

'ಇಷ್ಟೆಲ್ಲಾ ಅವಾಂತರ ಆಗಿರುವಾಗ ಆರ್‌ಸಿಬಿಗೆ ಕಪ್ ಗೆಲ್ಲೋ ಹುಮ್ಮಸ್ಸು ಬರುತ್ತಾ?'

'ಕಪ್ ಗೆಲ್ಲೋದಿರಲಿ, ಅಭಿಮಾನಿಗಳ ಉನ್ಮಾದಕ್ಕೆ ಹೆದರಿ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಮ್ಯಾಚ್ ಆಡೋದಿಲ್ಲ, ಇಲ್ಲಿ ಆಡಬೇಕಾದ ಮ್ಯಾಚ್‌ಗಳನ್ನು ತಟಸ್ಥ ಸ್ಥಳದಲ್ಲಿ ಆಡ್ತೀವಿ ಅಂತ ಆರ್‌ಸಿಬಿ ತಂಡ ಹಟ ಮಾಡಬಹುದು'.

'ಅಭಿಮಾನಿ ಪ್ರೇಕ್ಷಕರನ್ನು ಸ್ಟೇಡಿಯಂನಿಂದ ಹೊರಗಿಟ್ಟು, ಸಿ.ಸಿ.ಟಿ.ವಿ. ಕ್ಯಾಮೆರಾ, ಟಿ.ವಿ. ಕ್ಯಾಮೆರಾ ಕಾವಲಿನಲ್ಲಿ ಆಟವಾಡಲು ಅವಕಾಶ ಮಾಡಿಕೊಡಬಹುದು'.

'ಶಿಳ್ಳೆ, ಚಪ್ಪಾಳೆ ಹೊಡೆಯೊ ಪ್ರೇಕ್ಷಕರಿಲ್ಲದಿದ್ದರೆ ಆಟಗಾರರಿಗೆ ಬೌಂಡರಿ, ಸಿಕ್ಸರ್ ಬಾರಿಸಲು ಮೂಡ್ ಬರೊಲ್ಲ, ಸಿಂಗಲ್ಸ್ ಆಡಿಕೊಂಡು ಮ್ಯಾಚ್ ಮುಗುಸ್ತಾರೆ'.

'ಇನ್ನು ಮುಂದೆ ಆರ್‌ಸಿಬಿ ಕಪ್ ಗೆದ್ದರೆ ಸಾರ್ವಜನಿಕ ಸೆಲೆಬ್ರೇಷನ್ ನಿರ್ಬಂಧಿಸಿ ಮನೆಗಳಲ್ಲೇ ಸಂಭ್ರಮ ಆಚರಿಸಿಕೊಳ್ಳುವಂತೆ ಸರ್ಕಾರ ಎಚ್ಚರಿಕೆ ವಹಿಸುತ್ತದೆ' ಎಂದು ಹೇಳಿ ಗೋಪಾಲಿ ಹೊರಟ.

ಸಂಗತ

ಅಭಿಮಾನ, ಉನ್ಮಾದ ಮತ್ತು ಎಚ್ಚರ!

ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ ವ್ಯವಸ್ಥೆಯ ಪಾಲಿನಷ್ಟೇ ಸಾರ್ವಜನಿಕ ಉನ್ಮಾದದ್ದೂ ಪಾಲು ಇದೆ

• ಕುಸುಮಾ ಆಯರಹಳ್ಳಿ

ಸಂಘಜೀವಿ ಮನುಷ್ಯನಿಗೆ ನಿರ್ದಿಷ್ಟ ವ್ಯಕ್ತಿ ಅಥವಾ ಬಲಶಾಲಿ ಗುಂಪಿನ ಜೊತೆ ಗುರುತಿಸಿಕೊಂಡು ತನ್ನ ಅಸ್ತಿತ್ವ ಕಂಡುಕೊಳ್ಳುವ, ಸಮಾಧಾನಪಟ್ಟುಕೊಳ್ಳುವ ಅವಕಾಶವು ಪುರಾಣ, ಇತಿಹಾಸ ಸೇರಿದಂತೆ ಎಲ್ಲ ಕಾಲಘಟ್ಟಗಳಲ್ಲೂ ಇತ್ತು, ಈಗಲೂ ಇದೆ.

ಪ್ರಸ್ತುತ ನಾವು ರಾಜಕೀಯ ಪಕ್ಷಗಳು, ಸಿನಿಮಾ ಹೀರೊಗಳು, ಕ್ರಿಕೆಟ್ ತಂಡ ಮುಂತಾದ ಕಡೆ ಗುರುತಿಸಿಕೊಳ್ಳುವ ಅವಕಾಶಗಳಿವೆ. ಹೀಗೆ ಗುರುತಿಸಿಕೊಳ್ಳುವಿಕೆ ಒಬ್ಬ ಮನುಷ್ಯನಿಗೆ ಮಾನಸಿಕವಾಗಿ ನಿಜವಾಗಿಯೂ ಎಷ್ಟು ಅಗತ್ಯ ಎಂಬುದು ಬೇರೆ ಚರ್ಚೆ. ಆದರೆ, ನವನಾಗರಿಕತೆಯ ನವ ವ್ಯಾಪಾರಗಳು ಅದು ಅಗತ್ಯವೆಂಬ ಭ್ರಮೆಯನ್ನು ಸೃಷ್ಟಿಸಿವೆ. ಅಭಿಮಾನ ಎನ್ನುವುದು ಕುರುಡು ಉನ್ಮಾದದ ಸ್ಥಿತಿಗೆ ತಲುಪಿದಾಗ ಬುದ್ಧಿ ನಮ್ಮ ಅಂಕೆಯಲ್ಲಿರುವುದಿಲ್ಲ. ಉನ್ಮಾದವೆಂದರೆ, ಒಂದು ಬಗೆಯಲ್ಲಿ ಸಾವಿಗೂ ಹಿಂಜರಿಯದ ಸ್ಥಿತಿ.

ಕನ್ನಡ ನಾಡಿಗೂ ರಾಜ್ಯ ಸರ್ಕಾರಕ್ಕೂ ಆರ್‌ಸಿಬಿ ಕ್ರಿಕೆಟ್ ತಂಡಕ್ಕೂ ಯಾವುದೇ ಸಂಬಂಧವಿಲ್ಲ. ಆದರೂ ಆಟಗಾರರನ್ನು ಕರೆದು ಸನ್ಮಾನಿಸುವ ಉಮೇದು ರಾಜ್ಯ ಸರ್ಕಾರಕ್ಕೆ ಯಾಕೆ ಬಂತು? ಲಕ್ಷ ಲಕ್ಷ ಜನ ಆ ತಂಡದ ಅಭಿಮಾನಿಗಳಾಗಿರುವಾಗ ತಾವು ಆ ತಂಡವನ್ನು ಕರೆದು ಗೌರವಿಸಿಬಿಟ್ಟರೆ ಅವರೆಲ್ಲರೂ ತಮ್ಮನ್ನು ಮೆಚ್ಚುತ್ತಾರೆ, ನವತರುಣರ ಮೆಚ್ಚುಗೆ ಗಳಿಸಿದರೆ ಮುಂದೆ ಸಹಾಯವಾಗಲಿದೆ ಎಂಬ ಲೆಕ್ಕಾಚಾರ ಸರ್ಕಾರವನ್ನು ಮುನ್ನಡೆಸುವವರಿಗೆ ಇದ್ದಿರಬಹುದು.

ಕ್ರಿಕೆಟ್ ವಿಜಯೋತ್ಸವದ ಉನ್ಮಾದವನ್ನು ಆಡಳಿತ ಪಕ್ಷ ತನ್ನೆಡೆಗೆ ತಿರುಗಿಸಿಕೊಳ್ಳಲು ನೋಡಿದರೆ, ಸಾವುಗಳು ಸಂಭವಿಸುತ್ತಿದ್ದಂತೆಯೇ ಪರಿಸ್ಥಿತಿಯ ಲಾಭವನ್ನು ತನ್ನ ದಿಕ್ಕಿಗೆ ತಿರುಗಿಸಿಕೊಳ್ಳಲು ವಿರೋಧ ಪಕ್ಷಗಳು ಪ್ರಯತ್ನಿಸಿದವು. ಬೀದಿ ಹೆಣಗಳಾದ ಯಾರದೋ ಮನೆಯ ಮಕ್ಕಳು ವಿರೋಧ ಪಕ್ಷಗಳಿಗೆ, ಆಡಳಿತ ಪಕ್ಷವನ್ನು ಹಣಿಯಲು ಬೇಕಾದ ಮಾತಿನ ಅಸ್ತ್ರವಾದರು.

ಇಷ್ಟೊಂದು ಜನ ಬರಬಹುದು, ಇಂತಹದೊಂದು ಸ್ಥಿತಿ ನಿರ್ಮಾಣವಾಗಬಹುದು ಎಂಬ ಕಲ್ಪನೆ ಯುವ ಅಭಿಮಾನಿಗಳಿಗೆ ಇರಲಿಲ್ಲ ಎನ್ನುವ ವಾದವಿದೆ. ಹೋಗುವಾಗ ಅಂದಾಜು ಇರಲಿಲ್ಲ ಎನ್ನುವುದನ್ನು ಒಪ್ಪಬಹುದು. ಆದರೆ, ಹೋದ ಮೇಲೆ? ಸಮುದ್ರವೇ ಮೈಮೇಲೆ ಬೀಳುವ ಸ್ಥಿತಿಯಲ್ಲೂ ಹಿಂದೆ ಸರಿಯುವ ಮನಸೇ ಯಾರೊಬ್ಬರಿಗೂ ಇದ್ದಂತಿರಲಿಲ್ಲ. ಎಲ್ಲರಿಗೂ ನುಗ್ಗುತ್ತಿರುವ ಸಮುದ್ರದ ಜೊತೆ ಗುದ್ದಾಡಿ ನಡುವೆ ಎಲ್ಲೋ ನಿಂತ ಹಡಗಿನ ಮೇಲೆ ನಡೆಯುವುದನ್ನು ಕಾಣುವ ಆಸೆ. ವಿದ್ಯಾವಂತ ಯುವಕ, ಯುವತಿಯರು ಅನಾಗರಿಕವಾಗಿ ವರ್ತಿಸಿದ್ದಾರೆ. ಹೆಣ್ಣುಮಕ್ಕಳು ಯಾವೆಲ್ಲಾ ಹೇಳಬಾರದ ಹಿಂಸೆಗಳನ್ನು ಅನುಭವಿಸಿದರೋ? ಆದರೆ, ಕೆಲವು ಹೆಣ್ಣುಮಕ್ಕಳೂ ಅನಾಗರಿಕ ವರ್ತನೆಯಲ್ಲಿ ಯಾವ ರಿಯಾಯಿತಿಯನ್ನೂ ಬಯಸಿದಂತಿರಲಿಲ್ಲ. ಅಮಲಿಗೆ, ಉನ್ಮಾದಕ್ಕೆ ಲಿಂಗಭೇದವಾದರೂ ಎಲ್ಲಿದೆ?

ಬಹುತೇಕ ಯುವಜನರ ಮನಃಸ್ಥಿತಿ ಗಮನಿಸಿ. ಈ ಭೂಮಿ ಮೇಲೆ ಜನ್ಮ ತಾಳಿರುವುದರ ಉದ್ದೇಶವೇ ಕ್ರಿಕೆಟ್ ನೋಡುವುದು; ಆಟಗಾರರ, ಸಿನಿಮಾ ನಾಯಕ ನಟರ, ರಾಜಕಾರಣಿಗಳ ಅಭಿಮಾನಿಗಳಾಗುವುದು ಎನ್ನುವಂತಾಗಿದೆ. ಅವರು ಸೋತರೆ ನಾವು ಅಳುವುದು, ಅವರು ಗೆದ್ದರೆ ನಾವು ಬೀಗುವುದು, ಅವರ ಬಗ್ಗೆ ಯಾರಾದರೂ ಮಾತಾಡಿದರೆ ಮುಗಿಬೀಳುವುದು... ಒಟ್ಟಿನಲ್ಲಿ ಭಜನೆ ಮತ್ತು ಭಂಜನೆ!

ಹನ್ನೊಂದು ಜನರ ದುರ್ಮರಣದ ಘಟನೆ ನಡೆದ ಮರುದಿನ ಬೆಂಗಳೂರಿನ ಕಂಟೋನ್ಮೆಂಟ್ ಬಳಿ ಮರ ಕಡಿಯಬಾರದೆಂದು ನಾಡಿನ ಹೋರಾಟಗಾರರು, ಸ್ವಾಮೀಜಿಗಳು, ನ್ಯಾಯಮೂರ್ತಿಗಳು ಸೇರಿದಂತೆ ಅನೇಕರು ಸಭೆ ಸೇರಿದ್ದರು. ಅಲ್ಲಿ ಸೇರಿದ್ದವರ ಉದ್ದೇಶ, ಸಂಖ್ಯೆ, ವಯಸ್ಸು ಹಾಗೂ ಗೆಲುವನ್ನು ಸಂಭ್ರಮಿಸಲು ಸೇರಿದ್ದವರ ಉದ್ದೇಶ, ಸಂಖ್ಯೆ ಮತ್ತು ವಯಸ್ಸು ನಮ್ಮ ಸಮಾಜದ ಸ್ಥಿತಿಯ ಪ್ರತಿಬಿಂಬದಂತಿದೆ.



ಸರಳ, ಸಹಜ, ನಿರುಪದ್ರವಿ ಅಭಿಮಾನ ಅಥವಾ ಭಕ್ತಿಯಾದರೆ ಅದು ಒಳ್ಳೆಯದೇ. ಅಂತಹದ್ದು ಇರಬೇಕು ಕೂಡ. ಆದರೆ, ಅಭಿಮಾನವು ಕುರುಡಾಗಿ, ಅಮಲಾಗಿ ಬದಲಾದರೆ ಕಾಲವೇ ಎಲ್ಲಿಂದಲೋ ಒಂದು ಎಚ್ಚರಿಕೆ ಕೊಡುತ್ತದೆ. ನೆಚ್ಚಿನ ಕ್ರಿಕೆಟ್ ತಂಡ ಗೆದ್ದ ಕೂಡಲೇ ಮನಸ್ಸಿನ ಮೇಲೆ ಹತೋಟಿ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾದರೆ ಹೇಗೆ? ನಾಗರಿಕ ಪ್ರಜ್ಞೆಯನ್ನೇ ಮರೆತು ಸಂವೇದನಾಹೀನರಂತೆ ನುಗ್ಗುತ್ತಾ, ಸಹ ಮನುಷ್ಯರನ್ನು ತಳ್ಳಿ, ತುಳಿದು, ಕೆಳಗೆ ಬಿದ್ದವರ ಮೇಲೆ ಹತ್ತಿ, ಒಬ್ಬ ಕ್ರಿಕೆಟ್ ಆಟಗಾರನನ್ನು ನೋಡಬೇಕೆಂದು ಬಯಸುವ ಹೀನಾಯ ಸ್ಥಿತಿಗೆ ಲಕ್ಷ ಲಕ್ಷ ಜನ ಬಂದು ನಿಂತರೆ, ಆ ಒತ್ತಡವನ್ನು ಕಾಲ ಹೇಗಾದರೂ ಭರಿಸಬೇಕು?

ಮಿತಿಮೀರುತ್ತಿದೆ ಅನ್ನುವಾಗ ಎಚ್ಚರಿಸುವ ಕೆಲಸ ಕಾಲಕ್ಕೆ ಅನಿವಾರ್ಯ ಆಗುತ್ತದೆ. ಅನಿವಾರ್ಯ ಎಚ್ಚರಕ್ಕೆ ಅವರಿವರ ಮಕ್ಕಳೆಂಬ ಭೇದವಿಲ್ಲ. ಅದು ಪ್ರವಾಹ. ಸಿಕ್ಕಿದವರನ್ನು ಕೊಚ್ಚಿಕೊಂಡು ಹೋಗುವುದು ಅದರ ಗುಣ. ಇಲ್ಲಿಯೂ ಹಾಗೆಯೇ ಆಗಿದೆ. ನಡೆದ ಘಟನೆಯಲ್ಲಿ ವ್ಯವಸ್ಥೆಯ ದೋಷದಷ್ಟೇ ಉನ್ಮಾದದ್ದೂ ಸಮಾನ ಪಾಲು ಇದೆ.

ಪ್ರತಿ ಮನೆಯನ್ನೂ ಆವರಿಸಿ ಕೂತಂತಿರುವ ಉನ್ಮಾದವನ್ನು ಈ ಮಹಾದುರಂತವೂ ಎಚ್ಚರಿಸದಿದ್ದರೆ, ನಮ್ಮ ಬದುಕಿನ ಉದ್ದೇಶ ನಮಗೆ ಈಗಲಾದರೂ ಅರ್ಥವಾಗದಿದ್ದರೆ ನಾಳೆಗಳು ಇನ್ನೂ ದುರ್ಭರವಾಗಲಿವೆ. ಎಚ್ಚರದ ಪ್ರವಾಹ ಇನ್ನಷ್ಟು ನಿರ್ದಾಕ್ಷಿಣ್ಯವಾಗಲಿದೆ.

ವಾಚಕರ ವಾಣಿ

'ಸುಪ್ರೀಂ'ಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿ

ಕಟ್ಟಡಗಳಿಗೆ ವಿದ್ಯುತ್ ಮತ್ತು ಕುಡಿಯುವ ನೀರಿನ ಸಂಪರ್ಕ ಪಡೆಯಲು ಕಟ್ಟಡದ ಸ್ವಾಧೀನಾನುಭವ ಪತ್ರವನ್ನು (ಒಸಿ) ಇತ್ತೀಚೆಗೆ ಕಡ್ಡಾಯಗೊಳಿಸಲಾಗಿದೆ (ಪ್ರ.ವಾ., ಜೂನ್ 10). ಇದಕ್ಕೆ ಸುಪ್ರೀಂ ಕೋರ್ಟ್‌ನ ಆದೇಶ ಕಾರಣವಾಗಿದೆ. ಇದರಿಂದ ಕಂದಾಯ ಮತ್ತು 'ಬಿ' ಖಾತಾ ನಿವೇಶನಗಳಲ್ಲಿ ಮನೆ ನಿರ್ಮಾಣ ಮಾಡಿಕೊಂಡವರಿಗೆ ತೀವ್ರ ತೊಂದರೆಯಾಗಿದೆ. ಹಲವರು ಸಾಲ ಮಾಡಿ ಮನೆ ನಿರ್ಮಿಸಿದ್ದು, ವಿದ್ಯುತ್ ಇಲ್ಲದೆ ಹೊಸ ಮನೆಗೆ ಹೋಗದಂತಾಗಿದೆ.

ಕಟ್ಟಡ ನಿರ್ಮಾಣಕ್ಕೆ ಪಡೆದಿರುವ ಅನುಮೋದಿತ ನಕ್ಷೆಗೂ ನಿರ್ಮಾಣವಾದ ಕಟ್ಟಡಕ್ಕೂ ಅಜಗಜಾಂತರ ವ್ಯತ್ಯಾಸ ಇದ್ದು, ನಿಯಮಗಳನ್ನು ಕೆಲವು ಮಾಲೀಕರು ಗಾಳಿಗೆ ತೂರಿರುವುದೇ ಸುಪ್ರೀಂ ಕೋರ್ಟ್‌ನ ಈ ಆದೇಶಕ್ಕೆ ಕಾರಣ ಎಂಬುದು ಒಪ್ಪುವಂತಹ ವಿಚಾರ. ಈ ಆದೇಶದಿಂದ ಅಕ್ರಮ ಕಟ್ಟಡಗಳಿಗೆ ಕಡಿವಾಣ ಬೀಳಲಿದೆ.

ಕಟ್ಟಡ ನಿರ್ಮಾಣ ಮಾಡುವಾಗಲೇ ಸಂಬಂಧಿಸಿದ ಅಧಿಕಾರಿಗಳು ಪ್ರತಿ ಹಂತದಲ್ಲೂ ಪರೀಕ್ಷಿಸಿ, ನಿಯಮ ಉಲ್ಲಂಘಿಸಿದವರಿಗೆ ಎಚ್ಚರಿಕೆಯ ನೋಟಿಸ್ ನೀಡಿದ್ದರೆ ಪರಿಸ್ಥಿತಿ ಹದಗೆಡುತ್ತಿರಲಿಲ್ಲ. ಕಡೇಪಕ್ಷ ಈಗಾಗಲೇ ನಿರ್ಮಾಣ ಆರಂಭಿಸಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಕಟ್ಟಡಗಳಿಗೆ ಈ ಆದೇಶದಿಂದ ವಿನಾಯಿತಿ ನೀಡಬೇಕಿದೆ. ಅಂತೆಯೇ, ಈ ಪ್ರಕ್ರಿಯೆ ಜಾರಿಗೆ ಗಡುವು ನೀಡುವುದು ಉತ್ತಮ. ತಕ್ಷಣದಿಂದಲೇ ಆದೇಶ ಜಾರಿಗೊಂಡಿರುವುದರಿಂದ ಮನೆ ಮಾಲೀಕರು ತೊಂದರೆಗೆ ಸಿಲುಕಿದ್ದಾರೆ. ಈ ಆದೇಶದ ವಿರುದ್ಧ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಬೇಕಿದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬಾಲ್ಯವಿವಾಹದ ಮೂಲ ಬೇರು ಕೀಳಬೇಕು

'ಕುಲಪಂಚಾಯಿತಿ: ಬೇಕು ನಿಯಂತ್ರಣ' (ಸಂಗತ, ಜೂನ್ 10) ಲೇಖನವು ಬಾಲ್ಯವಿವಾಹದ ಮೂಲ ಬೇರು ಎಲ್ಲಿದೆ ಹಾಗೂ ಈ ಅನಿಷ್ಟ ಪದ್ಧತಿಯನ್ನು ತಡೆಗಟ್ಟುವಲ್ಲಿ ಸಂಬಂಧಿಸಿದ ಇಲಾಖೆಗಳು ವೈಫಲ್ಯ ಕಂಡಿರುವ ಬಗ್ಗೆ ಬೆಳಕು ಚೆಲ್ಲಿದೆ.

ಅಲೆಮಾರಿ, ಆದಿವಾಸಿ ಬುಡಕಟ್ಟುಗಳಲ್ಲಿ ಹೆಚ್ಚಾಗಿ ಬಾಲ್ಯವಿವಾಹ ನಡೆಯುತ್ತಿರುವುದು ದುರಂತ. ಈ ಸಮುದಾಯಗಳು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿವೆ. ಈ ನಡುವೆಯೇ ಸಮುದಾಯದ ಮಕ್ಕಳು ಬಾಲ್ಯವಿವಾಹದ ಸಂಕೋಲೆಯಲ್ಲಿ ಬಂದಿಯಾಗುತ್ತಿರುವುದು ಅಮಾನವೀಯ. ಕಾನೂನಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡದಿರುವ ಕುಲಪಂಚಾಯಿತಿಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು.

ಅಂಬಿಕಾ ಬಿ.ಟಿ., ಹಾಸನ

ಬಮೂಲ್ ನಡೆ ಸ್ವಾಗತಾರ್ಹ

ಬೆಂಗಳೂರು ಹಾಲು ಒಕ್ಕೂಟವು (ಬಮೂಲ್) ಮಣ್ಣಿನಲ್ಲಿ ಕರಗಬಲ್ಲ ಪೊಟ್ಟಣದಲ್ಲಿ 'ನಂದಿನಿ' ಹಾಲಿನ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಲು ಮುಂದಾಗಿರುವುದು ಸ್ವಾಗತಾರ್ಹ (ಪ್ರ.ವಾ., ಜೂನ್ 10). ಇದರಿಂದ ಪರಿಸರಕ್ಕೆ ತುಂಬಾ ಅನುಕೂಲವಾಗಲಿದೆ.

ಇತ್ತೀಚೆಗೆ ದೇವಸ್ಥಾನಗಳಿಗಿಂತ ಕಲ್ಯಾಣ ಮಂಟಪಗಳಲ್ಲಿ ಪ್ಲಾಸ್ಟಿಕ್ ಬಳಕೆ ಪ್ರಮಾಣ ಮಿತಿಮೀರಿದೆ. ಮದುವೆ ವೇಳೆ ಬೆಳಿಗ್ಗೆ ನೀಡುವ ಉಪಾಹಾರದಿಂದ ಹಿಡಿದು ಮಧ್ಯಾಹ್ನ ಹಾಗೂ ರಾತ್ರಿ ಊಟದ ವೇಳೆ ನೀರಿನ ಪ್ಲಾಸ್ಟಿಕ್ ಬಾಟಲ್‌ಗಳ ಬಳಕೆ ಸಾಮಾನ್ಯವಾಗಿದೆ. ಊಟದ ನಂತರ ಕಲ್ಯಾಣ ಮಂಟಪದ ಸುತ್ತಮುತ್ತ ಪ್ಲಾಸ್ಟಿಕ್ ಬಾಟಲ್‌ಗಳ ರಾಶಿ ಬಿದ್ದಿರುತ್ತದೆ. ಇದಕ್ಕೆ ಕಡಿವಾಣ ಹಾಕಬೇಕಿದೆ.

ಕಡೂರು ಫಣಿಶಂಕರ್, ಬೆಂಗಳೂರು

ಮುದ ನೀಡಿದ ಅಲ್ಕರಾಜ್– ಸಿನ್ನರ್ ಸೆಣಸು

ಪ್ಯಾರಿಸ್‌ನ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆದ ಫ್ರೆಂಚ್ ಓಪನ್ ಟೆನಿಸ್‌ನ ಅಂತಿಮ ಪಂದ್ಯವು ದಾಖಲೆಯ 5 ಗಂಟೆ 29 ನಿಮಿಷ ನಡೆದು ಪ್ರೇಕ್ಷಕರಿಗೆ ರೋಚಕ ಕ್ಷಣಗಳನ್ನು ಉಣಬಡಿಸಿತು. ಆರಂಭದಲ್ಲಿ ಇಟಲಿಯ ಯಾನಿಕ್ ಸಿನ್ನರ್ ಎರಡು ಸೆಟ್‌ಗಳನ್ನು ಗೆದ್ದು ಗೆಲುವಿನ ಹೊಸ್ತಿಲಲ್ಲಿದ್ದರು. ಆದರೆ, ತೀವ್ರ ಪೈಪೋಟಿ ನೀಡಿದ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಏರಿಳಿತಗಳ ನಡುವೆ ಕೊನೆಗೂ ಟ್ರೋಫಿಗೆ ಮುತ್ತಿಕ್ಕಿದರು.

ಇಬ್ಬರ ಹೋರಾಟ ಗಮನಿಸಿದಾಗ ಯಾರೂ ಕಡಿಮೆಯಿಲ್ಲ ಎಂಬುದು ದಿಟವಾಯಿತು. ಸಮ ವಯಸ್ಸಿನ, ಸಮ ಬಲದ ಹೋರಾಟ ಟೆನಿಸ್‌ಪ್ರಿಯರಿಗೆ ರಸದೌತಣ ನೀಡಿತು. ಅಲ್ಲದೆ, ವೀಕ್ಷಕ ವಿವರಣೆ ಕೂಡ ಕ್ರಿಕೆಟ್‌ನಲ್ಲಿನ ಕಿರುಚಾಟ, ಅರಚಾಟಗಳಂತೆ ಇಲ್ಲದೆ ಸೌಮ್ಯವಾಗಿದ್ದು, ಖುಷಿ ನೀಡಿತು.

ಮುಳ್ಳೂರು ಪ್ರಕಾಶ್, ಮೈಸೂರು

ಸರ್ಕಾರದ ದ್ವಂದ್ವ ನಿಲುವು

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸಲು ನಡೆಯುತ್ತಿರುವ ಸಮೀಕ್ಷಾ ಕಾರ್ಯ ಇನ್ನೂ ಪೂರ್ಣಗೊಳ್ಳದ ಕಾರಣ ಸರ್ಕಾರವು ಕಾಲಾವಧಿಯನ್ನು ವಿಸ್ತರಣೆ ಮಾಡುತ್ತಲೇ ಇದೆ. ಸಮೀಕ್ಷೆ ಬಗ್ಗೆ ಘೋಷಣೆ ವೇಳೆ ಖಾಲಿ ಇರುವ ಸರ್ಕಾರಿ ಹುದ್ದೆಗಳಿಗೆ ಹೊಸ ನೇಮಕಾತಿ ಮತ್ತು ಬಡ್ತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವುದಾಗಿ ಹೇಳಿತ್ತು.

ಇತ್ತೀಚೆಗೆ ಕೆಲವೊಂದು ಇಲಾಖೆಗಳಲ್ಲಿ ಬಡ್ತಿ ಪ್ರಕ್ರಿಯೆ ಸರಾಗವಾಗಿ ನಡೆಯುತ್ತಿರುವುದು ವರದಿಯಾಗಿದೆ. ಹೀಗಾದರೆ ಹೊಸ ನೇಮಕಾತಿಗೆ ಮಾತ್ರವಷ್ಟೇ ಗ್ರಹಣ ಹಿಡಿದಿರುವುದು ಏಕೆ? ಸರ್ಕಾರದ ಈ ನಡೆ ಸರಿಯಲ್ಲ. ಲಕ್ಷಾಂತರ ಉದ್ಯೋಗಾಕಾಂಕ್ಷಿಗಳು ನೇಮಕಾತಿಗಾಗಿ ಕಾದು ಕುಳಿತಿದ್ದಾರೆ. ಬಡ್ತಿ ಪ್ರಕ್ರಿಯೆ ನಡೆಯುತ್ತಿದೆ ಎಂದಾದರೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗೂ ಅಧಿಸೂಚನೆ ಪ್ರಕಟಿಸಬೇಕಿದೆ.


ಇಂಗಳೇಶ್ವರ ಸತೀಶ್, ವಿಜಯಪುರ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.




'ಚಿಂತಕರ ಚಾವಡಿ' ಎಂದೇ ಕರೆಸಿಕೊಳ್ಳುವ ವಿಧಾನ ಪರಿಷತ್ತಿಗೆ ಸಾಹಿತ್ಯ, ಕಲೆ, ಸಂಗೀತ, ಶಿಕ್ಷಣ, ಸಮಾಜ ಸೇವೆಯಂತಹ ಕ್ಷೇತ್ರಗಳಲ್ಲಿ ಅಪಾರ ಶ್ರಮ ಹಾಕಿದ ಗಣ್ಯರ ನಾಮ ನಿರ್ದೇಶನ ಮಾಡಬೇಕು. ಇದಕ್ಕಾಗಿ 11 ಸ್ಥಾನಗಳಿವೆ. ಆದರೆ ಬಹಳಷ್ಟು ಸಂದರ್ಭಗಳಲ್ಲಿ ಚುನಾವಣೆಗಳಲ್ಲಿ ಸೋತ ಪ್ರಮುಖ ರಾಜಕಾರಣಿಗಳು ಮತ್ತು ಪ್ರಭಾವಿ ರಾಜಕಾರಣಿಗಳ ಹಿಂಬಾಲಕರು ಈ 'ಕೋಟಾ'ದಡಿ ಮೇಲ್ಮನೆ ಪ್ರವೇಶಿಸುತ್ತಿದ್ದಾರೆ

ಚಿಂತಕರ ಚಾವಡಿಗೆ ಎಂಥವರು ಬೇಕು?


ಗೊರೂರು ರಾಮಸ್ವಾಮಿ ಅಯ್ಯಂಗಾರ್



ಬಸವರಾಜ ಕಟ್ಟೀಮನಿ


ಎಚ್‌.ನರಸಿಂಹಯ್ಯ


ಆರತಿ


ಮಲ್ಲಿಕಾರ್ಜುನ ಮನ್ಸೂರ್


ಗಂಗೂಬಾಯಿ ಹಾನಗಲ್


ಎಚ್‌.ಎಲ್ ನಾಗೇಗೌಡ

ಆಯ್ಕೆ ವಿಧಾನ

ವಿಧಾನ ಪರಿಷತ್ 1957ರಲ್ಲಿ ಅಸ್ತಿತ್ವಕ್ಕೆ ಬಂದಿತು. ಆಗ ಸದಸ್ಯರ ಸಂಖ್ಯೆ 63 ಇತ್ತು. 1987ರಲ್ಲಿ ಈ ಸಂಖ್ಯೆಯನ್ನು 75ಕ್ಕೆ ಏರಿಸಲಾಯಿತು. 75ರಲ್ಲಿ 25 ಸದಸ್ಯರನ್ನು ವಿಧಾನಸಭೆಯಿಂದ, 25 ಸದಸ್ಯರನ್ನು ಸ್ಥಳೀಯ ಸಂಸ್ಥೆಗಳಿಂದ, ತಲಾ 7 ಸದಸ್ಯರನ್ನು ಪದವೀಧರರು ಮತ್ತು ಶಿಕ್ಷಕರ ಕ್ಷೇತ್ರಗಳಿಂದ ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ. ರಾಜ್ಯ ಸರ್ಕಾರದ ಶಿಫಾರಸಿನ ಅನುಸಾರ 11 ಸದಸ್ಯರನ್ನು ರಾಜ್ಯಪಾಲರು ನಾಮ ನಿರ್ದೇಶನ ಮಾಡುತ್ತಾರೆ.

• ಎಸ್.ರವಿಪ್ರಕಾಶ್, ರಾಜೇಶ್ ರೈ ಚಟ್ಲ

ಸಂಸದೀಯ ಪ್ರಜಾಸತ್ತೆ ವ್ಯವಸ್ಥೆಗೆ ಸಾಹಿತ್ಯ, ಸಂಗೀತ, ಕಲೆ, ಶಿಕ್ಷಣ, ಮಾಧ್ಯಮ, ಸಮಾಜಸೇವೆಯ ಗಂಧ ತೀಡಿ, ಶಾಸನ ರಚನೆಯ ವೇಳೆ ರಾಜಕೀಯಕ್ಕೆ ಮಿಗಿಲಾದ ಮಾನವೀಯ ಸ್ಪರ್ಶವೂ ಸಿಗಬೇಕೆಂಬ ಆಶಯದಿಂದ ವಿಧಾನ ಪರಿಷತ್ತು ಅಥವಾ ಮೇಲ್ಮನೆಯನ್ನು ಸೃಜಿಸಲಾಯಿತು. ಚುನಾವಣೆ ಎದುರಿಸಿ ಗೆಲ್ಲಲಾಗದ ಬಲಹೀನ ಸಮುದಾಯ, ಧ್ವನಿಯೇ ಇಲ್ಲದ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಿ ಆ ಜನವರ್ಗದ ಮಾತು ಕೇಳುವ ವೇದಿಕೆಯೂ ಇದಾಗಬೇಕೆಂಬ ಹಂಬಲವೂ ಇತ್ತು. ಸ್ಥಳೀಯ ಸಂಸ್ಥೆ ಹಾಗೂ ಪದವೀಧರ, ಶಿಕ್ಷಕರ ಪ್ರಾತಿನಿಧ್ಯಕ್ಕೂ ಅವಕಾಶ ಕಲ್ಪಿಸಿ, ಅವರ ಅನುಭವವು ಆಡಳಿತಕ್ಕೆ ದಕ್ಕಲಿ ಎಂಬ ಸಂಕಲ್ಪವೂ ಪರಿಷತ್ತಿನ ಸೃಷ್ಟಿಯ ಹಿಂದಿತ್ತು.

ರಾಜಕೀಯೇತರ ನೆಲೆಯಿಂದ ಬಂದವರು ಮೇಲ್ಮನೆಯ ಘನತೆ ಹೆಚ್ಚಿಸಲು ನಡೆಸಬಹುದಾದ ಮೌಲಿಕ ಚರ್ಚೆ ಮತ್ತು ಸಂವಾದಕ್ಕೆ ಇಲ್ಲಿ ಆದ್ಯತೆ ಸಿಗಬೇಕೆಂಬ ಆಶಯವೂ ಇದನ್ನು ರಚಿಸಿದವರ ಹಿಂದಿತ್ತು. ಹೀಗಾಗಿಯೇ, ಇದನ್ನು 'ಚಿಂತಕರ ಚಾವಡಿ' ಎಂದು ಕರೆಯುವ ಪರಿಪಾಟವಿದೆ.

ಪ್ರಜಾಪ್ರಭುತ್ವದಲ್ಲಿ ಉನ್ನತ ಮೌಲ್ಯಗಳನ್ನು ಪ್ರತಿಪಾದಿಸುವ ಮತ್ತು ಆ ನಿಟ್ಟಿನಲ್ಲಿ ಪ್ರೌಢಿಮೆಯಿಂದ ಕೂಡಿದ ಚರ್ಚೆ, ಸಂವಾದ ಮತ್ತು ಶಾಸನ ರಚನೆಯಲ್ಲಿ ಇವರೆಲ್ಲರೂ ಪಾಲ್ಗೊಳ್ಳಬೇಕು ಎಂಬುದು ಮೇಲ್ಮನೆ ರಚನೆಯ ಉದ್ದೇಶವಾಗಿತ್ತು. ಹೀಗಾಗಿ ಇತ್ತೀಚಿನ ದಶಕಗಳಲ್ಲಿ ಸಾಹಿತಿಗಳಾದ ಚಂದ್ರಶೇಖರ ಕಂಬಾರ, ಸಿದ್ಧಲಿಂಗಯ್ಯ, ಎಲ್.ಹನುಮಂತಯ್ಯ, ಮಹದೇವ ಬಣಕಾರ, ಏಜಾಸುದ್ದೀನ್, ಕಲಾವಿದರಾದ ಆರತಿ, ಅನಂತನಾಗ್, ಬಿ.ಜಯಮ್ಮ, ಜಯಮಾಲ, ಶ್ರೀನಾಥ್, ಮುಖ್ಯಮಂತ್ರಿ ಚಂದ್ರು, ಉಮಾಶ್ರೀ, ಶಿಕ್ಷಣ ತಜ್ಞರಾದ ಎಚ್.ನರಸಿಂಹಯ್ಯ, ಪ್ರೊ.ಎಂ.ಆರ್.ದೊರೆಸ್ವಾಮಿ, ಪ್ರೊ. ಪಿ.ವಿ. ಕೃಷ್ಣ ಭಟ್, ಪತ್ರಕರ್ತರಾದ ಖಾದ್ರಿ ಶಾಮಣ್ಣ, ಪಿ.ರಾಮಯ್ಯ, ಹಿಂದೂಸ್ತಾನಿ ಸಂಗೀತದ ದಿಗ್ಗಜರಾದ ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್, ಸಮಾಜ ಸೇವೆ ಕ್ಷೇತ್ರದಲ್ಲಿ ಅದ್ವಿತೀಯ ಸೇವೆ ಸಲ್ಲಿಸಿದ ಡಾ.ಎಂ.ಸಿ.ಮೋದಿ ಅಂತಹವರು ಮೇಲ್ಮನೆ ಮೆಟ್ಟಿಲು ಹತ್ತಲು ಸಾಧ್ಯವಾಯಿತು.

ಸಂವಿಧಾನದ ಅನುಚ್ಛೇದ 171(5)ರ ಅನ್ವಯ ರಾಜ್ಯಪಾಲರಿಂದ ನಾಮನಿರ್ದೇಶಿತರಾಗುವವರು ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರ ಚಳವಳಿ ಮತ್ತು ಸಮಾಜ ಸೇವೆಗಳಲ್ಲಿ ವಿಶೇಷ, ಪ್ರಾಯೋಗಿಕ ಜ್ಞಾನ ಮತ್ತು ಅನುಭವ ಪಡೆದಿರಬೇಕು. ಈ ಕ್ಷೇತ್ರಗಳಲ್ಲಿ ಇವರು ಸಮಾಜಕ್ಕೆ ಸಲ್ಲಿಸಿರುವ ಗಣನೀಯ ಸೇವೆಯನ್ನು ಪರಿಗಣಿಸಿ ಆಯ್ಕೆ ಮಾಡಲಾಗುತ್ತದೆ. ಅಲ್ಲದೇ, ರಾಜಕಾರಣಿಗಳು ಕಾಣಲಾಗದ ಸಮಾಜದ, ಜನರ ಮತ್ತು ಸಮಸ್ಯೆಗಳ ಕುರಿತು ಸೂಕ್ಷ್ಮ ಒಳನೋಟಗಳನ್ನು ಇವರು ಹೊಂದಿರುತ್ತಾರೆ. ಇದು ಸರ್ಕಾರ ನಡೆಸುವವರಿಗೆ ಮಾರ್ಗದರ್ಶನವಾಗುತ್ತದೆ ಎಂಬ ಸದುದ್ದೇಶವೂ ಇದೆ. ಆದರೆ, ಇವರ ಸಲಹೆಯನ್ನು ಎಷ್ಟರ ಮಟ್ಟಿಗೆ ಪಡೆಯಲಾಗುತ್ತದೆ ಎಂಬುದು ಬೇರೆ ವಿಷಯ. ಆಯಾ ಕಾಲಕ್ಕೆ ರಚಿತವಾಗುವ ಸರ್ಕಾರವೂ ಈ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರನ್ನು ಗುರುತಿಸಿ ನಾಮ ನಿರ್ದೇಶನ ಮಾಡಬೇಕು ಎಂಬುದು ಆಶಯ.

ಇತ್ತೀಚಿನ ದಿನಗಳಲ್ಲಿ ಸಾಹಿತ್ಯ, ಕಲೆ ಹೆಸರಿನಲ್ಲಿ ಚುನಾವಣೆಯಲ್ಲಿ ಸೋತ ರಾಜಕಾರಣಿಗಳನ್ನೇ ಹಿಂಬಾಗಿಲ ಮೂಲಕ ತಂದು ಕೂರಿಸುವ ಪರಿಪಾಟ ನಡೆದಿದೆ.

ಹೊರಟ್ಟಿ ಪತ್ರ: ಪರಿಷತ್ತಿನ ನಾಮನಿರ್ದೇಶನ ಹಾಗೂ ಅದರಿಂದಾಗಿರುವ ಪರಿಣಾಮಗಳಿಂದ ಬೇಸತ್ತ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಇತ್ತೀಚೆಗೆ ಪತ್ರ ಬರೆದು ಗಮನ ಸೆಳೆದಿದ್ದರು.

'ಸಂವಿಧಾನದ ಅನ್ವಯ ವಿಧಾನ ಪರಿಷತ್ತು ರಚನೆಗೊಂಡಿದೆ. ಇದನ್ನು ಹಿರಿಯರ ಮನೆ, ಚಿಂತಕರ ಚಾವಡಿ ಎಂದೂ ಕರೆಯಲಾಗುತ್ತದೆ. ಹಲವು ಕ್ಷೇತ್ರಗಳ ಗಣ್ಯರು ಮೇಲ್ಮನೆ ಪ್ರವೇಶಿಸಿದ ಕಾರಣ ಇದರ ಘನತೆ, ಗಾಂಭೀರ್ಯ ಮತ್ತು ಹಿರಿಮೆಯೂ ಹೆಚ್ಚಿದೆ. ವಿಧಾನ ಪರಿಷತ್ತಿನ ಒಟ್ಟು ಸದಸ್ಯರ ಸಂಖ್ಯೆಯಲ್ಲಿ 11 ಸ್ಥಾನಗಳಿಗೆ ಸಂವಿಧಾನದ ಅನುಚ್ಛೇದ 171(3)(ಇ) ಅನ್ವಯ (5)ನೇ ಖಂಡದ ಉಪಬಂಧಗಳಿಗೆ ಅನುಸಾರ ರಾಜ್ಯಪಾಲರಿಂದ ನಾಮನಿರ್ದೇಶನಗೊಳ್ಳುತ್ತಾರೆ. ಇದರ ಪ್ರಕಾರ ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರ ಚಳವಳಿ ಮತ್ತು ಸಮಾಜ ಸೇವೆ ಕ್ಷೇತ್ರದಿಂದ ಆಯ್ಕೆ ಮಾಡಬೇಕು. ಈಗ ವಿಧಾನ ಪರಿಷತ್ತಿನ ನಾಲ್ಕು ಸ್ಥಾನಗಳಿಗೆ ನಾಮ ನಿರ್ದೇಶನ ಮಾಡಬೇಕಿದೆ. ಇದಕ್ಕೆ ಸೂಕ್ತ ಮತ್ತು ಅರ್ಹ ವ್ಯಕ್ತಿಗಳನ್ನು ನಾಮ ನಿರ್ದೇಶನಗೊಳಿಸಲು ಶಿಫಾರಸು ಮಾಡುವ ಹೊಣೆಗಾರಿಕೆ ನಿಮ್ಮ (ಕೆಪಿಸಿಸಿ ಅಧ್ಯಕ್ಷರು) ಮೇಲಿದೆ. ಸಂವಿಧಾನದ ಆಶೋತ್ತರ ಅನ್ವಯ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡುವ ಮೂಲಕ ಮೇಲ್ಮನೆಯಲ್ಲಿ ಕಾರ್ಯ ಕಲಾಪದ ಗುಣಮಟ್ಟದ ಹೆಚ್ಚಿಸಲು ಸಾಧ್ಯ ಎಂಬುದು ನಮ್ಮ ಅಭಿಲಾಷೆ' ಎಂದು ಹೊರಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದ್ದರು.

'ಇತ್ತೀಚಿನ ದಿನಗಳಲ್ಲಿ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ಸೋತವರು ಮತ್ತು ಪ್ರಭಾವಿ ನಾಯಕರ ಹಿಂದೆ ಓಡಾಡುವವರು ನಾಮ ನಿರ್ದೇಶನಗೊಳ್ಳುತ್ತಿದ್ದಾರೆ. ಈ ಪರಿಪಾಟ ಎಲ್ಲ ಸರ್ಕಾರದ ಅವಧಿಯಲ್ಲೂ ನಡೆದುಕೊಂಡು ಬಂದಿದೆ. ಈ ಬಾರಿ ನೀವು ಇಂತಹದ್ದೊಂದು ಕೆಟ್ಟ ಪರಂಪರೆಗೆ ಕಡಿವಾಣ ಹಾಕಬೇಕು. ಈಗಾಗಲೇ ನಾಲ್ಕು ಜನರ ನಾಮನಿರ್ದೇಶನ ಪ್ರಕ್ರಿಯೆ ಆರಂಭವಾಗಿದೆ. ಸಾಹಿತ್ಯ, ಸಂಗೀತ, ಕಲೆ, ಸಂಸ್ಕೃತಿ, ಶಿಕ್ಷಣ, ಸಮಾಜಸೇವೆ ಕ್ಷೇತ್ರದಲ್ಲಿ ಸಲ್ಲಿಸಿದವರನ್ನೇ ನಾಮ ನಿರ್ದೇಶನ ಮಾಡುವುದು ಸೂಕ್ತ ಎಂಬ ಕೂಗು ಸಾರ್ವಜನಿಕರಿಂದಲೂ ಕೇಳಿ ಬಂದಿದೆ' ಎಂದು ಹೇಳಿದ್ದಾರೆ.

ವಿಧಾನ ಪರಿಷತ್‌ಗೆ ನಾಮನಿರ್ದೇಶನಗೊಂಡ ಪ್ರಮುಖರು

ಹೆಸರು	ಪಕ್ಷ	ಅವಧಿ
ಗೊರೂರು ರಾಮಸ್ವಾಮಿ ಅಯ್ಯಂಗಾರ್	ಕಾಂಗ್ರೆಸ್	1958-64
ಬಸವರಾಜ ಕಟ್ಟೀಮನಿ	ಕಾಂಗ್ರೆಸ್	1968-74
ಎಚ್.ಶ್ರೀಕಂಠಯ್ಯ	ಕಾಂಗ್ರೆಸ್	1978-84
ಬಿ.ಜಯಮ್ಮ	ಕಾಂಗ್ರೆಸ್	1980-86
ಎಚ್.ನರಸಿಂಹಯ್ಯ	ಸ್ವತಂತ್ರ	1980-86
ಆರತಿ	ಬಿಜೆಪಿ	1984-90
ಖಾದ್ರಿ ಶಾಮಣ್ಣ	ಜನತಾ ಪಕ್ಷ	1984-90
ಮಲ್ಲಿಕಾರ್ಜುನ ಮನ್ಸೂರ್	ಜನತಾ ಪಕ್ಷ	1984-90
ಬಿ.ಟಿ.ಲಲಿತಾ ನಾಯಕ್	ಜನತಾ ದಳ	1986-92
ಎ.ರಾಮಣ್ಣ	ಜನತಾ ದಳ	1986-92
ಅನಂತನಾಗ್	ಜನತಾ ದಳ	1988-94
ಮೈಕಲ್ ಫರ್ನಾಂಡಿಸ್	ಜನತಾ ದಳ	1988-94
ಗಂಗೂಬಾಯಿ ಹಾನಗಲ್	ಸ್ವತಂತ್ರ	1990-96
ಎಂ.ಸಿ.ಮೋದಿ	ಕಾಂಗ್ರೆಸ್	1990-96
ಮಹದೇವ ಬಣಕಾರ್	ಜನತಾ ದಳ	1995-2001
ಎಚ್.ಎಲ್.ನಾಗೇಗೌಡ	ಜನತಾ ದಳ	1995-2001
ಪಿ.ರಾಮಯ್ಯ	ಜನತಾ ದಳ	1998-2004
ಎಲ್.ಹನುಮಂತಯ್ಯ	ಕಾಂಗ್ರೆಸ್	2001-07
ಪ್ರಭಾಕರ ಕೋರೆ	ಕಾಂಗ್ರೆಸ್	2001-07
ಚಂದ್ರಶೇಖರ ಕಂಬಾರ	ಕಾಂಗ್ರೆಸ್	2004-2010
ವೈ.ಎಸ್.ವಿ ದತ್ತ	ಜೆಡಿಎಸ್	2006-12
ದೊಡ್ಡರಂಗೇಗೌಡ	ಬಿಜೆಪಿ	2008-14
ಎಸ್.ಆರ್.ಲೀಲಾ	ಬಿಜೆಪಿ	2008-14
ಎಂ.ಆರ್.ದೊರೆಸ್ವಾಮಿ	ಬಿಜೆಪಿ	2008-14
ಜಗ್ಗೇಶ್	ಬಿಜೆಪಿ	2010-16
ಪ್ರೊ.ಪಿ.ವಿ.ಕೃಷ್ಣ ಭಟ್	ಬಿಜೆಪಿ	2010-16
ಕೆ.ಬಿ.ಶಾಣಪ್ಪ	ಬಿಜೆಪಿ	2012-18
ತಾರಾ ಅನೂರಾಧ	ಬಿಜೆಪಿ	2012-18
ಜಯಮಾಲ	ಕಾಂಗ್ರೆಸ್	2014-2020

'ರಾಜಕೀಯ' ಆಯ್ಕೆಗಳು

ರಾಮಕೃಷ್ಣ ಹೆಗಡೆ
1983ರಲ್ಲಿ ಮೊದಲ ಬಾರಿಗೆ ಜನತಾಪಕ್ಷವು ಮಿತ್ರ ಪಕ್ಷಗಳೊಂದಿಗೆ ಅಧಿಕಾರ ಹಿಡಿದಾಗ, ವಿಧಾನಸಭೆ ಅಥವಾ ಪರಿಷತ್ತಿನ ಸದಸ್ಯರಾಗಿರದ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾದರು. ತತ್‌ಕ್ಷಣಕ್ಕಾಗಿ ಅವರು ಪರಿಷತ್ತಿನ ಸದಸ್ಯರಾದರು. ಕೆಲ ತಿಂಗಳ ಬಳಿಕ ಕನಕಪುರ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆ ಆದರು. ಪಿ.ಜಿ.ಆರ್.ಸಿಂಧ್ಯ ಅವರು ಹೆಗಡೆ ಅವರಿಗೆ ಕ್ಷೇತ್ರ ತೆರವು ಮಾಡಿಕೊಟ್ಟಿದ್ದರು.

ಡಿ.ವಿ.ಸದಾನಂದಗೌಡ
ಡಿ.ವಿ.ಸದಾನಂದಗೌಡ ಅವರು 2011ರಲ್ಲಿ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಮಂಗಳೂರು ಕ್ಷೇತ್ರದ ಲೋಕಸಭಾ ಸದಸ್ಯರಾಗಿದ್ದರು. ಮುಖ್ಯಮಂತ್ರಿಯಾದ ಬಳಿಕ ಅವರು ಲೋಕಸಭೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಯಾವುದಾದರೂ ಸದನದ ಸದಸ್ಯರಾಗಿರದ ಕಾರಣಕ್ಕೆ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು. 2013ರಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿಯೂ ಅವರು ಕಾರ್ಯನಿರ್ವಹಿಸಿದರು.

ಬಿ.ಎಸ್.ಯಡಿಯೂರಪ್ಪ
1999ರ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದ ಯಡಿಯೂರಪ್ಪ ಅವರನ್ನು 2000ರಲ್ಲಿ ಮೇಲ್ಮನೆಗೆ ಆಯ್ಕೆ ಮಾಡಲಾಯಿತು. ಅವರು ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿಯೂ ಕಾರ್ಯನಿರ್ವಹಿಸಿದರು.

ವಿ.ಸೋಮಣ್ಣ
2008ರಲ್ಲಿ ಗೋವಿಂದರಾಜನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದಿದ್ದ ವಿ.ಸೋಮಣ್ಣ 'ಆಪರೇಷನ್ ಕಮಲ'ದ ಮೂಲಕ ಬಿಜೆಪಿ ಸೇರಿದರು. ಅವರನ್ನು ಸಚಿವರಾಗಿ ಮಾಡಲಾಯಿತು. ನಿಯಮದಂತೆ ಆರು ತಿಂಗಳೊಳಗೆ ವಿಧಾನಸಭೆ ಅಥವಾ ಪರಿಷತ್ತಿನ ಸದಸ್ಯರಾಗಲೇಬೇಕಿತ್ತು. ಉಪಚುನಾವಣೆಯಲ್ಲಿ ಸೋತ ಸೋಮಣ್ಣ ಅವರನ್ನು 2009ರಲ್ಲಿ ವಿಧಾನಪರಿಷತ್‌ಗೆ ನಾಮ ನಿರ್ದೇಶನ ಮಾಡಲು ಸರ್ಕಾರ ಶಿಫಾರಸು ಮಾಡಿತು. ಆಗ ರಾಜ್ಯಪಾಲರಾಗಿದ್ದ ಎಚ್.ಆರ್. ಭಾರದ್ವಾಜ್ ಅವರು, ರಾಜಕೀಯ ನಾಮನಿರ್ದೇಶನ ಎಂಬ ಕಾರಣ ಮುಂದೊಡ್ಡಿ ತಿರಸ್ಕರಿಸಿದರು. ಎರಡೂ ಮನೆಯ ಸದಸ್ಯರಾಗದ ಕಾರಣಕ್ಕೆ ಸೋಮಣ್ಣ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಮತ್ತೆ ಪರಿಷತ್ ಸದಸ್ಯರಾಗಲು 2010ರವರೆಗೆ ಕಾಯಬೇಕಾಯಿತು. 2010ರಲ್ಲಿ ಮೇಲ್ಮನೆ ಪ್ರವೇಶಿಸಿ, ಸಚಿವರಾದರು.

ಜಗ್ಗೇಶ್
2008ರಲ್ಲಿ ತುರುವೇಕರೆ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಿಂದ ಗೆದ್ದಿದ್ದ ಜಗ್ಗೇಶ್ ಆಪರೇಷನ್ ಕಮಲದ ಮೂಲಕ ಬಿಜೆಪಿ ಸೇರಿದರು. ಇವರನ್ನು ಸಿನಿಮಾ ವಿಭಾಗದಿಂದ ಪರಿಷತ್‌ಗೆ ನಾಮ ನಿರ್ದೇಶನ ಮಾಡಲಾಯಿತು.

ಎಚ್.ವಿಶ್ವನಾಥ್
2019ರಲ್ಲಿ ಜೆಡಿಎಸ್ ತೊರೆದು ಬಿಜೆಪಿ ಸೇರಿದ ಎಚ್.ವಿಶ್ವನಾಥ್ ಅವರು ವಿಧಾನಸಭೆಯ ಉಪಚುನಾವಣೆಯಲ್ಲಿ ಸೋತರು. 2020ರಲ್ಲಿ ಅವರನ್ನು ಸಾಹಿತ್ಯ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಾಮನಿರ್ದೇಶನ ಮಾಡಲಾಯಿತು.

ಸಿ.ಪಿ.ಯೋಗೇಶ್ವರ
2018ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಚನ್ನಪಟ್ಟಣ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದ ಸಿ.ಪಿ.ಯೋಗೇಶ್ವರ ಅವರು, ಆಗ ಅಸ್ತಿತ್ವದಲ್ಲಿದ್ದ ಜೆಡಿಎಸ್–ಕಾಂಗ್ರೆಸ್ ಸರ್ಕಾರ ಪತನಗೊಳಿಸುವ ಕಾರ್ಯಾಚರಣೆಯ ಭಾಗವಾಗಿದ್ದರು. ಬಿಜೆಪಿ ಸರ್ಕಾರ ಬಂದ ಬಳಿಕ ಸಚಿವ ಸ್ಥಾನ ನೀಡುವ ಭರವಸೆ ನೀಡಲಾಗಿತ್ತು. 2020ರಲ್ಲಿ ಸಿ.ಪಿ.ಯೋಗೇಶ್ವರ ಅವರನ್ನು ಸಿನಿಮಾ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಾಮ ನಿರ್ದೇಶನ ಮಾಡಿ, ಸಚಿವ ಸ್ಥಾನ ನೀಡಲಾಯಿತು.

ಎಂ.ಪಿ.ಪ್ರಕಾಶ್
1999ರ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದ ಎಂ.ಪಿ.ಪ್ರಕಾಶ್ ಅವರನ್ನು 2000ರಲ್ಲಿ ಮೇಲ್ಮನೆಗೆ ಆಯ್ಕೆ ಮಾಡಲಾಯಿತು.

ಕೆ.ಎಸ್.ಈಶ್ವರಪ್ಪ
2013ರ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದ ಕೆ.ಎಸ್.ಈಶ್ವರಪ್ಪ ಅವರನ್ನು ವಿಧಾನಪರಿಷತ್ತಿಗೆ ಕಳುಹಿಸಲಾಯಿತು. 2014ರಲ್ಲಿ ಮೇಲ್ಮನೆ ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದರು.

ಜಿ.ಪರಮೇಶ್ವರ
2013ರ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದ ಜಿ.ಪರಮೇಶ್ವರ ಅವರನ್ನು ಕಾಂಗ್ರೆಸ್ ಪಕ್ಷ ಮೇಲ್ಮನೆಗೆ ಕಳುಹಿಸಿತು.

ಜಗದೀಶ ಶೆಟ್ಟರ್
2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ಸಿಗದಿದ್ದಾಗ ಜಗದೀಶ ಶೆಟ್ಟರ್ ಅವರು ಕಾಂಗ್ರೆಸ್ ಸೇರಿದರು. ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಚುನಾವಣೆಯಲ್ಲಿ ಸೋತ ಅವರನ್ನು ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆ ಮಾಡಲಾಯಿತು. ಆದರೆ ಅವರು 2024ರ ಲೋಕಸಭಾ ಚುನಾವಣೆ ಸಂದರ್ಭ ಮತ್ತೆ ಬಿಜೆಪಿ ಸೇರಿದರು.

ಸಿ.ಟಿ.ರವಿ
2023ರ ವಿಧಾನಸಭಾ ಚುನಾವಣೆಯಲ್ಲಿ ಪರಾಭವ ಅನುಭವಿಸಿದ ಸಿ.ಟಿ. ರವಿ ಅವರನ್ನು ಮೇಲ್ಮನೆಗೆ ಕಳುಹಿಸಲಾಯಿತು.

ಛಲವಾದಿ ನಾರಾಯಣಸ್ವಾಮಿ
2018ರಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಛಲವಾದಿ ನಾರಾಯಣಸ್ವಾಮಿ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಲಾಯಿತು. ಬಳಿಕ ಅವರು ವಿರೋಧ ಪಕ್ಷದ ನಾಯಕ ಹುದ್ದೆಗೇರಿದರು.

ರಾಷ್ಟ್ರೀಯ

ಮುಂಬೈ ಉಪನಗರ ರೈಲು: 11 ವರ್ಷದಲ್ಲಿ 29 ಸಾವಿರ ಸಾವು

ಮುಂಬೈ(ಪಿಟಿಐ): ಮುಂಬೈನ ಉಪನಗರ ರೈಲು ಜಾಲದಲ್ಲಿ ಸಂಭವಿಸಿದ ಅವಘಡಗಳಲ್ಲಿ ಕಳೆದ 11 ವರ್ಷಗಳಲ್ಲಿ 29,970 ಮಂದಿ ಮೃತಪಟ್ಟಿದ್ದು, 30,214 ಜನರು ಗಾಯಗೊಂಡಿದ್ದಾರೆ ಎಂದು ರೈಲ್ವೆ ಪೊಲೀಸ್ ಮೂಲಗಳು ಹೇಳಿವೆ.

2014ರ ಜನವರಿಯಿಂದ ಕಳೆದ ಮೇವರೆಗೆ, ರೈಲುಗಳಿಂದ ಬಿದ್ದ ಕಾರಣ 6,760 ಪ್ರಯಾಣಿಕರು ಮೃತಪಟ್ಟಿದ್ದರೆ, 14,257 ಜನರು ಗಾಯಗೊಂಡಿದ್ದಾರೆ ಎಂದು ಇವೇ ಮೂಲಗಳು ಹೇಳಿವೆ.

ಮುಂಬೈ ಉಪನಗರ ರೈಲ್ವೆ ಜಾಲದಲ್ಲಿ ನಿತ್ಯವೂ ಅಂದಾಜು 75 ಲಕ್ಷ ಜನರು ಪ್ರಯಾಣಿಸುತ್ತಾರೆ.

'ಸುರಕ್ಷತೆಗೆ ಯೋಜನೆ': 'ಉಪನಗರ ರೈಲುಗಳಲ್ಲಿ ಸಂಚರಿಸುವವರ ಸುರಕ್ಷತೆ ಹಾಗೂ ಅಪಘಾತಗಳನ್ನು ತಡೆಗಟ್ಟುವುದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಸ್ಟರ್ ಪ್ಲಾನ್ ರೂಪಿಸುತ್ತಿವೆ' ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮಂಗಳವಾರ ಹೇಳಿದ್ದಾರೆ.

'ಮೆಟ್ರೊ ರೈಲು ಯೋಜನೆಗಳು ಪೂರ್ಣಗೊಳ್ಳುವುದು ವಿಳಂಬವಾಗುತ್ತಿದೆ. ಇದರಿಂದಾಗಿ ಉಪನಗರ ರೈಲುಗಳಲ್ಲಿ ಪ್ರಯಾಣಿಕರ ದಟ್ಟಣೆ ಉಂಟಾಗುತ್ತಿದ್ದು, ಅಪಘಾತಗಳಿಗೂ ಕಾರಣವಾಗುತ್ತಿದೆ' ಎಂದೂ ಹೇಳಿದ್ದಾರೆ.

ಅಂಕಿ ಅಂಶಗಳು

16,087 ಹಳಿ ದಾಟುವಾಗ ಮೃತಪಟ್ಟವರ ಸಂಖ್ಯೆ

3,369 ಹಳಿ ದಾಟುವಾಗ ಗಾಯಗೊಂಡವರ ಸಂಖ್ಯೆ

103 ರೈಲ್ವೆ ಕಂಬಕ್ಕೆ ಡಿಕ್ಕಿ ಹೊಡೆದು ಮೃತಪಟ್ಟವರ ಸಂಖ್ಯೆ

655 ರೈಲ್ವೆ ಕಂಬಕ್ಕೆ ಡಿಕ್ಕಿ ಹೊಡೆದು ಗಾಯಗೊಂಡವರ ಸಂಖ್ಯೆ

ಎನ್‌ಸಿಐಎಸ್‌ಎಂಸಿ ಮುಖ್ಯಸ್ಥರ ವಜಾ ಆದೇಶಕ್ಕೆ ತಡೆ

ನವದೆಹಲಿ (ಪಿಟಿಐ): ಹುದ್ದೆಗೆ ಅನರ್ಹ ಎಂಬ ಕಾರಣದ ಮೇಲೆ ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗದ (ಎನ್‌ಸಿಐಎಸ್‌ಎಂಸಿ) ಮುಖ್ಯಸ್ಥರ ನೇಮಕಾತಿಯನ್ನು ರದ್ದು ಮಾಡಿದ್ದ ದೆಹಲಿ ಹೈಕೋರ್ಟ್ ಆದೇಶಕ್ಕೆ ಸುಪ್ರೀಂಕೋರ್ಟ್ ಮಂಗಳವಾರ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಮನ್‌ಮೋಹನ್ ಅವರು ಇದ್ದ ಪೀಠವು ವೈದ್ಯ ಜಯಂತ್ ಯಶವಂತ್ ದೇವ್ ಪೂಜಾರಿ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಎನ್‌ಸಿಐಎಸ್‌ಎಂಸಿಗೆ ನೋಟಿಸ್ ಜಾರಿ ಮಾಡಿದೆ.

ದೇವ್ ಪೂಜಾರಿ ಅವರನ್ನು ಆಯೋಗದ ಮುಖ್ಯಸ್ಥರನ್ನಾಗಿ ನೇಮಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಎರಡು ಅರ್ಜಿಗಳ ವಿಚಾರಣೆ ನಡೆಸಿದ್ದ ದೆಹಲಿ ಹೈಕೋರ್ಟ್ ಜೂನ್ 6ರಂದು ಆದೇಶ ನೀಡಿತ್ತು.

ಎನ್‌ಸಿಐಎಸ್‌ಎಂ ಕಾಯ್ದೆಯ ಪ್ರಕಾರ, ಆಯೋಗದ ಅಧ್ಯಕ್ಷ ಹುದ್ದೆಗೆ ಅರ್ಹತೆ ಪಡೆಯಲು ಸ್ನಾತಕೋತ್ತರ ಪದವಿ ಹೊಂದಿರುವುದು ಕಡ್ಡಾಯ ಎಂಬ ನಿಯಮ ಇದೆ. ದೇವ್ ಪೂಜಾರಿ ಈ ಅರ್ಹತೆ ಹೊಂದಿಲ್ಲ. ಆಯೋಗದ ನಿಯಮಗಳಿಗೆ ವಿರುದ್ಧವಾಗಿ ದೇವ್ ಪೂಜಾರಿ ನೇಮಕ ನಡೆದಿದೆ ಎಂದು ವೇದ ಪ್ರಕಾಶ್ ತ್ಯಾಗಿ, ಡಾ.ರಘುನಂದನ್ ಶರ್ಮಾ ಎಂಬುವರು ಅರ್ಜಿ ಸಲ್ಲಿಸಿದ್ದರು.

ಸ್ನಾತಕೋತ್ತರ ಪದವಿ ಪಡೆಯದೇ ಆಯುರ್ವೇದ ಪದವಿ ನಂತರ ಪಿಎಚ್‌ಡಿ ಮಾಡಿರುವುದನ್ನು ದೇವ್‌ಪೂಜಾರಿ ಹೈಕೋರ್ಟ್‌ಗೆ ತಿಳಿಸಿದ್ದರು. ಹೀಗಾಗಿ ದೇವ್ ಪೂಜಾರಿ ಅವರ ನೇಮಕಾತಿ ಆದೇಶವನ್ನು ದೆಹಲಿ ಹೈಕೋರ್ಟ್ ವಜಾ ಮಾಡಿತ್ತು.


ಜಾಮೀನು ಕೋರಿ ಯೂಟ್ಯೂಬರ್ ಜ್ಯೋತಿ ಅರ್ಜಿ

ಹಿಸಾರ್ (ಪಿಟಿಐ): ಪಾಕಿಸ್ತಾನದ ಪರ ಗೂಢಚಾರಿಕೆ ಮಾಡಿದ ಆರೋಪದಡಿ ಬಂಧಿತರಾಗಿರುವ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ, ಜಾಮೀನು ಕೋರಿ ಸ್ಥಳೀಯ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ವಕೀಲರ ಮೂಲಕ ಇಲ್ಲಿನ ಜೆಎಂಎಫ್‌ಸಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ನ್ಯಾಯಾಧೀಶ ಸುನಿಲ್ ಕುಮಾರ್ ಅವರು ಜೂನ್ 11ರ ಒಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಪೊಲೀಸರಿಗೆ ಸೂಚಿಸಿದ್ದಾರೆ.

ಜೂನ್ 9ರಂದು ಜ್ಯೋತಿ ಅವರ ನ್ಯಾಯಾಂಗ ಬಂಧನ ಅವಧಿ ವಿಸ್ತರಿಸಿದ್ದ ಕೋರ್ಟ್ ವಿಚಾರಣೆಯನ್ನು ಜೂನ್ 23ಕ್ಕೆ ಮುಂದೂಡಿತ್ತು. ವಿಡಿಯೊ ಕಾನ್ಫರೆನ್ಸ್ ಮೂಲಕ ಆರೋಪಿ ವಿಚಾರಣೆ ಎದುರಿಸಿದ್ದರು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜೂನ್ 11, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಪೂರ್ಣಿಮಾ ಗಂ. 13-14 ನಕ್ಷತ್ರ: ಜ್ಯೇಷ್ಠ ಗಂ.20-11 ಯೋಗ: ಸಾಧ್ಯ ಗಂ. 14-04 ಕರಣ: ಬವ ಗಂ. 13-14, ವೃಷಭ ಮಾಸದ 28 ನೇ ದಿನ. ಮಳೆ ನಕ್ಷತ್ರ : ಮೃಗಶಿರ 1ನೇ ಪಾದ.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-07 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 14 ಜುಲ್‌ಹಿಜಾ
ದಿನ ವಿಶೇಷ : ದೇವ ಸ್ನಾನ ಪೂರ್ಣಿಮಾ, ಅದೃಷ್ಟ ಸಂಖ್ಯೆ : 2, 8

ಮೇಷ: ಪಾದರಸದಂತೆ ಚುರುಕಾದ ವ್ಯಕ್ತಿತ್ವವಿರುವುದರಿಂದ ಕಾರ್ಯ ಸಾಧನೆಯಲ್ಲಿ ಪರಿಶ್ರಮ ಫಲ ನೀಡಲಿದೆ. ಸಾಹಿತಿ ಹಾಗೂ ಕಲಾವಿದರಿಗೆ ಉತ್ತಮ ದಿನ. ವಿದ್ಯಾಭ್ಯಾಸದಲ್ಲಿ ಒಳ್ಳೆಯ ಫಲಿತಾಂಶ ಸಿಗುತ್ತದೆ.

ವೃಷಭ: ಆಕರ್ಷಕ ವ್ಯಕ್ತಿತ್ವದ ನೀವು, ಆಯಸ್ಕಾಂತೀಯ ಗುಣಗಳಿಂದ ಗಮನವನ್ನೂ ಸೆಳೆಯುವಿರಿ. ಅಡಿಕೆ ಮತ್ತು ಕಾಫಿ ಬೆಳೆಗಾರರು ಬೆಳೆಯ ಬಗ್ಗೆ ಜಾಗ್ರತೆ ವಹಿಸಿ. ಕೃಷಿಯಲ್ಲಿ ಯಾವುದೇ ಹೊಸ ಪ್ರಯೋಗಗಳು ಬೇಡ.

ಮಿಥುನ: ಮುಂದಿನ ಯೋಜನೆಗಳೇನು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳದೆ ಇತರರೊಂದಿಗೆ ಚರ್ಚಿಸಬೇಡಿ. ವಿವಾಹಯೋಗ್ಯ ವಯಸ್ಕರಿಗೆ ನೂತನ ಸಂಬಂಧಗಳು ಬರಲಿವೆ. ಆಕಸ್ಮಿಕ ಪ್ರಯಾಣವು ಲಾಭಕರ.

ಕರ್ಕಾಟಕ: ಪರಿಸ್ಥಿತಿಯ ಮೇಲಿನ ನಿಯಂತ್ರಣ ತಪ್ಪದಂತೆ ಎಚ್ಚರವಹಿಸಿ. ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಚೋರ ಭೀತಿ ಎದುರಾಗಬಹುದು. ಪಶುವೈದ್ಯರಿಗೆ ವೃತ್ತಿ ಜೀವನದಲ್ಲಿ ಹೊಸ ಅನುಭವ ಸಿಗಲಿದೆ.

ಸಿಂಹ: ಸಮಯ ಪಾಲನೆ ಮುಖ್ಯ. ಸಮಯಕ್ಕೆ ಬೆಲೆ ಕೊಡುವ ನೀವು ಕಾರ್ಯ ಸಾಧಿಸಲು ಶ್ರಮಪಡಬೇಕಾಗಿಲ್ಲ. ಕಚೇರಿಯಲ್ಲಿ ಸಂಯಮದಿಂದ ವರ್ತಿಸಿ ಕೆಲಸ ಸಾಧಿಸಿಕೊಳ್ಳುವಿರಿ. ಶಸ್ತ್ರವೈದ್ಯರಿಗೆ ಕೆಲಸ ಇರಲಿದೆ.

ಕನ್ಯಾ: ನೋವು- ನಲಿವು ಜೀವನದಲ್ಲಿ ಪ್ರತಿಯೊಬ್ಬರಿಗೂ ಎದುರಾಗುತ್ತದೆ. ಅನಿರೀಕ್ಷಿತ ಘಟನೆಯಿಂದ ವಿಚಲಿತರಾಗದೆ ಕಾರ್ಯೋನ್ಮುಖರಾಗಿರಿ. ಕಾನೂನಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾತುಕತೆ ನಡೆಯಲಿದೆ.

ತುಲಾ: ಗುತ್ತಿಗೆದಾರರ ಬಾಕಿ ಹಣ ಪಡೆಯಲು ಉತ್ತಮ ಕಾಲ. ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಆಯುರ್ವೇದ ಔಷಧಿ ಸಂಪೂರ್ಣ ಗುಣಮುಖರನ್ನಾಗಿ ಮಾಡುತ್ತದೆ. ತರಕಾರಿ ಬೆಳೆಗಾರರಿಗೆ ಬೆಲೆ ಸಿಗುವುದು.

ವೃಶ್ಚಿಕ: ನೇರ ನಡೆ ನುಡಿಗಳ ಸ್ವಭಾವಗಳಿಗೆ ಸಹೋದ್ಯೋಗಿಗಳು ಮೆಚ್ಚುಗೆ ವ್ಯಕ್ತಪಡಿಸುವರು. ವಾಣಿಜ್ಯ ವ್ಯವಹಾರಗಳು ಲಾಭ ತರಲಿದೆ. ಮುದ್ರಣಾಕಾರರಿಗೆ ಬಿಡುವಿಲ್ಲದ ಕೆಲಸವಿದ್ದು ಆದಾಯ ಉತ್ತಮ ಇರಲಿದೆ.

ಧನು: ತೆರಿಗೆ ಮತ್ತು ವಾಣಿಜ್ಯ ಇಲಾಖೆಯ ಅಧಿಕಾರಿಗಳಿಗೆ ಅಧಿಕಾರಗಳು ಪ್ರಾಪ್ತವಾಗಲಿವೆ. ತಾಂತ್ರಿಕ ಕ್ಷೇತ್ರದಲ್ಲಿನ ಸಾಧನೆಗಾಗಿ ಆತಂಕ ಎದುರಾಗಬಹುದು. ಆಲಂಕಾರಿಕ ವಸ್ತುಗಳಿಗಾಗಿ ಹಣ ವಿನಿಯೋಗಿಸುವಿರಿ.

ಮಕರ: ನ್ಯಾಯಮೂರ್ತಿಗಳಿಗೆ, ಆಡಳಿತಾಧಿಕಾರಿಗಳಿಗೆ ಸತ್ಫಲಗಳು ಸಿಗಲಿವೆ. ಸತ್ಕಾರ್ಯಗಳಿಂದಾಗಿ ಮನೆಯಲ್ಲಿ ಸಡಗರವಿರುವುದು. ಆರೋಗ್ಯದಲ್ಲಿ ಸ್ವಲ್ಪಮಟ್ಟಿಗೆ ಏರುಪೇರಾದರೂ ಆತಂಕಕ್ಕೆ ಕಾರಣವಾಗಬೇಕಿಲ್ಲ.

ಕುಂಭ: ಕೆಲಸದಲ್ಲಿ ಬದಲಾವಣೆ ಕಾಣಲಿದ್ದೀರಿ. ಜೀವನಶೈಲಿಯೂ ವಿಭಿನ್ನವಾಗಿ ಬದಲಾಗಲಿದೆ. ಸಮಯ ಸಂದರ್ಭವನ್ನು ಗಮನಿಸಿ ಮಾತುಗಳನ್ನು ಆರಂಭಿಸಿ. ಇಲ್ಲವಾದರೆ ಗೌರವಕ್ಕೆ ಹಾನಿ ಉಂಟಾಗಬಹುದು.

ಮೀನ: ವೃತ್ತಿ ಪ್ರಪಂಚದಲ್ಲಿ ಬಾಧಿಸುವ ಸಮಸ್ಯೆ ದೊಡ್ಡದಾದರೂ ಹೂ ಎತ್ತಿದಂತೆ ಬಗೆಹರಿಯಲಿದೆ. ರಚನಾತ್ಮಕ ಕೆಲಸಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದರಿಂದ ಸಂತಸ. ಬಾಲ್ಯಗೆಳೆಯನ ಭೇಟಿ ಸಂತೋಷ ತರಲಿದೆ.

ನುಡಿ ಬೆಳಗು


ವಾಸುದೇವ ನಾಡಿಗ್

ಹೂವಿನ ದಾರಿಯಲ್ಲ ಬಾಳು

ಚಳಿ, ಮಳೆ ಏನೇ ಇರಲಿ, ಮಾರುಕಟ್ಟೆಯ ಹರಾಜಿನ ಕೂಗಿನ ಹೊತ್ತು ಸಾವಿತ್ರಮ್ಮ ಮೂಟೆಗಟ್ಟಲೆ ಸೇವಂತಿಗೆ ಹೂವನ್ನು ತರಲೇಬೇಕಿತ್ತು. ಬಿಸಿಲು ಏರುವುದರೊಳಗೆ ಖಾಲಿಯಾದರೆ ಲಾಭ. ಇಲ್ಲದೇ ಇದ್ದರೆ ಸುಡು ಬಿಸಿಲಿನ ಝಳದಿಂದ ಅವುಗಳನ್ನು ಕಾಪಾಡಬೇಕಿತ್ತು. ಒದ್ದೆ ಬಟ್ಟೆಯನ್ನು ಹಾಸಿ ಆಗಾಗ ಹಿತವಾಗಿ ನೀರನ್ನು ಸಿಂಪಡಿಸುತ್ತ ಅವುಗಳ ನಾಜೂಕು ತಾಜಾತನವನ್ನು ಉಳಿಸುವ ಹರಸಾಹಸ. ತಿಂಗಳ ತಿಂಗಳ ಪಗಾರ ಬರುವ ಅನೇಕರ ಪಾಲಿಗೆ ಸಾವಿತ್ರಮ್ಮ ಬಹುದೊಡ್ಡ ಪಾಠ. ಪಿಯುಸಿಗೆ ಪ್ರವೇಶ, ಎಂಜಿನಿಯರಿಂಗ್ ಸೀಟ್, ಮೆಡಿಕಲ್ ಸೀಟ್‌ಗಳಿಗಾಗಿ ತಾವು ಖರ್ಚು ಮಾಡಿದ ಹಣದ ಬಗ್ಗೆ ಸದಾ ಕೊರಗುವ ಅನೇಕರ ಪಾಲಿಗೆ ಸಾವಿತ್ರಮ್ಮ ಒಂದು ವಿಸ್ಮಯವೇ. ಒಬ್ಬ ಮಗನನ್ನು ಜೆಇಇ ಇಂಟೆಗ್ರೇಟೆಡ್ ಕಾಲೇಜಿಗೆ ಸೇರಿಸಿ, ಇನ್ನೊಬ್ಬ ಮಗಳು ಸಿಇಟಿ ಪಾಸಾಗಿದ್ದರಿಂದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿಗೆ ಸೇರಿಸಿ ಬಂದಿದ್ದಳು. ಮಾರು ಮಾರು ಹೂಗಳ ಮಾರಾಟದಿಂದಲೇ ಮಕ್ಕಳನ್ನು ಇಷ್ಟು ಜತನವಾಗಿ ಬೆಳೆಸಿದ ಬಗ್ಗೆ ಬಂದುಹೋದವರ ಬಳಿ ಎಲ್ಲ ಹುಬ್ಬೇರಿಸಿ ಕಥೆಯನ್ನು ಹೇಳುವುದು ಕೂಡಾ ಸಾವಿತ್ರಮ್ಮನ ಖುಷಿಯ ಕೆಲಸ. ಬರಿ ಹೂ ಮಾರುತ್ತಲೇ ಮಕ್ಕಳಿಗೆ ಇಷ್ಟು ವಿದ್ಯಾಭ್ಯಾಸವನ್ನು ಒದಗಿಸುವ ಪರಿ ಯಾವತ್ತೂ ಒಗಟೇ.

ಒಂಟಿ ಹೆಣ್ಣು ಇಷ್ಟು ಖರ್ಚು ಹೇಗೆ ನಿಭಾಯಿಸಬಲ್ಲಳೋ ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ಎಲುಬಿರದ ನಾಲಗೆಗಳು ಸಾವಿತ್ರಮ್ಮನ ಚಾರಿತ್ರ್ಯವನ್ನು ಕುರಿತೂ ಕಥೆ ಕಟ್ಟಿದ್ದುಂಟು. ಆ ಮಾತುಗಳು ಕಿವಿಗೆ ಬಿದ್ದರೂ ನಕ್ಕು ಸಾಗಿಬಿಡುವ ಮನೋಭಾವದ ಸಾವಿತ್ರಮ್ಮನ ಆತ್ಮವಿಶ್ವಾಸವೇ ಅಚಲವಾದದ್ದು. ರಜೆಗಳಲ್ಲಿ ಮಗ, ಮಗಳನ್ನು ಕೂಡಾ ಹೂವಿನ ಅಂಗಡಿಗೆ ಕರೆಸಿಕೊಳ್ಳದ ಸಾವಿತ್ರಮ್ಮನ ದಾಂಪತ್ಯವೇ ಒಂದು ರಹಸ್ಯ. ಎಲ್ಲರ ಕಡು ಕುತೂಹಲ– ಅವಳ ಪತಿ ಯಾರು? ಒಂದು ಸತ್ಯವನ್ನು ಹೂ ಕೊಳ್ಳುವ ಅನೇಕರಿಗೆ ಹಂಚಿಕೊಂಡಿರಲಿಲ್ಲ. ಅದು, ಅದೇ ಸರ್ಕಲ್‌ನ ಎದುರೇ ಸುಮಾರು ಇನ್ನೂರು ಅಡಿ ದೂರದಲ್ಲಿ ತಳ್ಳುಗಾಡಿ ಬಳಿ ಎತ್ತರದ ಕುರ್ಚಿ ಮೇಲೆ ಕೂತು ಸೊಪ್ಪು ಹಸಿ ಮೆಣಸಿನಕಾಯಿ, ನಿಂಬೆ ಹಣ್ಣುಗಳನ್ನು ಮಾರುತ್ತ ಕೂತಿರುವ ಬಿಳಿ ಪಂಚೆ ಬಿಳಿ ಅಂಗಿಯ ವ್ಯಕ್ತಿ. ಅಪಘಾತವೊಂದರಲ್ಲಿ ಬಲಗಾಲನ್ನು ಕಳೆದುಕೊಂಡ ಆ ವ್ಯಕ್ತಿಯನ್ನು ಕುರಿಸಿ ಸದಾ ಇಲ್ಲಿಂದಲೇ ಕಾವಲು ಕಾಯ್ತಾ ಕೂತವಳು ಸಾವಿತ್ರಮ್ಮ.


ಅನುಕಂಪದ ಮೂಲಕ ವ್ಯಾಪಾರ ನಡೆಯಬಾರದೆಂಬ ಹಟಕ್ಕೆ ಬಿದ್ದಂತಹ ಸ್ವಾಭಿಮಾನದ ಬಾಳು ಅದು. ❖

ಪದಬಂಧ 6070

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮನಸ್ಸಿನಲ್ಲಿ ಮೊದಲೇ ಮಾಡಿಕೊಂಡ ಅಭಿಪ್ರಾಯಕ್ಕೆ ಕೊನೆಯಲ್ಲಿ ಗ್ರಹ ಬಡಿದಿದೆಯಲ್ಲಾ! (4)
3.ಕೊನೆಗೆ ಹಾರವನ್ನಿಟ್ಟು ಹೋಗಲಾಡಿಸುವಿಕೆ (4)
5.ಕೆರೆಯ ಬಳಿ ಬಿಟ್ಟಿರುವ ಎಕ್ಕಡ (2)
7.ತಾರುಣ್ಯವನ್ನು ಹೊಂದಿದವನು (3)
8.ಮಾವನ ಮರ್ಯಾದೆಯಿದು! (2)
10.ಪರವಶನಾಗಿದ್ದಾಗ ಕಂಡ ಹೆಣ (2)
11.ಬೆನ್ನೆಲುಬು ಕರುವಿನೊಳಗೆ ಕಾಣುತ್ತಿದೆ (3)
13. ಸಮ್ಮತಿ ಕೊಟ್ಟವನ ಬುದ್ಧಿ ! (2)
15.ಮಧುರವಾದ ಧ್ವನಿಯಿದು (4)
16.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)

ಮೇಲಿಂದ ಕೆಳಕ್ಕೆ
1.ಒದಗಿಸುವಿಕೆಗೊಂದು ಪರ್ಯಾಯ ಪದ (3)
2.ಹರಿಯಿಂದ ಬಂದಿರುವ ತೀಕ್ಷ್ಣತೆ (3)
3.ಪಣ ಕಟ್ಟಿ ಮಾಡಿದ ಪ್ರವಾಸ (3)
4.ರಸ ಒಸರುವ ಜಿಹ್ವೆ (3)
6.ಬೆಳ್ಳಿ ಹಬ್ಬವಿದು (5)
8.ಮಾಮನಲ್ಲಿ ಕಾಣುತ್ತಿರುವ ಅಳಿವು! (5)
10. ನೂರರ ಗುಂಪು (3)
11.ಕಕ್ಕಾವಿಕ್ಕಿ ಆಗಿರುವ ಪೆದ್ದ ಇಲ್ಲಿದ್ದಾನೆ (3)
12.ರಕ್ತವನ್ನು ಹೀಗೂ ಹೇಳುವರು (3)
14.ಉಲ್ಟಾಪಲ್ಟಾ ಆಗಿರುವ ಲೆಕ್ಕ (3)



6069ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಳಗ 4.ಒಮ್ಮತ 6.ಹಯವದನ 7.ರವಿ 9.ಕಡ 10.ವಾರ 11.ಟಆ 16.ನಯವಂಚಕ 17.ನಡುಕ 18.ರಿವಾಜು

ಮೇಲಿಂದ ಕೆಳಕ್ಕೆ:
1.ಬಡಿವಾರ 2.ಗಹನ 3.ಕವನ 4.ಒನಪು 5.ತಡಬಡ 8.ವಿಕಾರ 9.ಕವಾಟ 10.ವಾತಾಯನ 12.ಆಜುಬಾಜು 13.ಶುನಕ 14.ಲವಂಗ 15.ಮಂಕರಿ

ಸುಡೊಕು 6454


	5			7			3	
7			2		3	6		8
		6		4			2	
4		3		1		8		6
	1		9		4		7	
9		8		3		4		1
1		9	3		5		8	
	6			9			1	
5		7	4		1	9		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6453 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ಷೇರುಪೇಟೆ ವಹಿವಾಟು
53



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,103
ಇಂದಿನ ಅಂತ್ಯ	25,104
▲	1
ದಿನದ ಗರಿಷ್ಠ	25,199

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹277-510

ದ್ವಿತಳಿ (ಬಿ.ವಿ) ₹342-649

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)


ಆರ್‌ಎಸ್‌ಎಸ್-4 ₹193

ಆರ್‌ಎಸ್‌ಎಸ್-5 ₹188

ಗುಡ್ ಲಾಟ್ ₹178

ಭಾರತ ಅತ್ಯಂತ ವೇಗವಾಗಿ ಪ್ರಗತಿ ಕಾಣುವ ದೇಶ: ವಿಶ್ವಬ್ಯಾಂಕ್ ಅಂದಾಜು

ಆರ್ಥಿಕ ಬೆಳವಣಿಗೆ ಶೇ 6.3



ವಾಷಿಂಗ್ಟನ್ (ಪಿಟಿಐ): ಜಾಗತಿಕ ಅನಿಶ್ಚಿತತೆಗಳಿಂದಾಗಿ ರಫ್ತಿನ ಮೇಲೆ ಪರಿಣಾಮ ಉಂಟಾಗಬಹುದಾದರೂ, 2025–26ರಲ್ಲಿ ಭಾರತದ ಆರ್ಥಿಕ ಬೆಳವಣಿಗೆಯು ಶೇಕಡ 6.3ರಷ್ಟು ಇರಬಹುದು ಎಂದು ವಿಶ್ವ ಬ್ಯಾಂಕ್ ಅಂದಾಜು ಮಾಡಿದೆ.

ಹೀಗಿದ್ದರೂ ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ 'ಅತ್ಯಂತ ವೇಗದ ಬೆಳವಣಿಗೆ' ಕಾಣುವ ಹೆಗ್ಗಳಿಕೆಯು ಭಾರತದ್ದೇ ಆಗಿರಲಿದೆ.

ಜನವರಿಯಲ್ಲಿ ಸಿದ್ಧಪಡಿಸಿದ್ದ ಅಂದಾಜಿನಲ್ಲಿ ವಿಶ್ವ ಬ್ಯಾಂಕ್, ಭಾರತದ ಅರ್ಥ ವ್ಯವಸ್ಥೆಯು ಶೇ 6.7ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿತ್ತು. ಏಪ್ರಿಲ್‌ನಲ್ಲಿ ಸಿದ್ಧಪಡಿಸಿದ ಇನ್ನೊಂದು ಅಂದಾಜಿನಲ್ಲಿ ಭಾರತದ ಆರ್ಥಿಕ ಬೆಳವಣಿಗೆ ದರವನ್ನು ಶೇ 6.3ಕ್ಕೆ ಇಳಿಕೆ ಮಾಡಿತ್ತು. ವಿಶ್ವ ಬ್ಯಾಂಕ್‌ನ ಈಗಿನ ವರದಿಯು ಇದೇ ಅಂದಾಜು ಮಟ್ಟವನ್ನು ಉಳಿಸಿಕೊಂಡಿದೆ.

ವಾಣಿಜ್ಯ ಬಿಕ್ಕಟ್ಟು ಮತ್ತು ನೀತಿಗಳಲ್ಲಿನ ಅನಿಶ್ಚಿತತೆಯ ಕಾರಣದಿಂದಾಗಿ ಜಾಗತಿಕ ಅರ್ಥ ವ್ಯವಸ್ಥೆಯ ಬೆಳವಣಿಗೆಯು 2025ರಲ್ಲಿ ಶೇ 2.3ಕ್ಕೆ ತಗ್ಗಲಿದೆ ಎಂದು ಅಂದಾಜು ಮಾಡಲಾಗಿದೆ. ಈ ವರ್ಷದ ಆರಂಭದಲ್ಲಿನ ಅಂದಾಜಿಗಿಂತ ಇದು ಸರಿಸುಮಾರು ಶೇ 0.5ರಷ್ಟು ಕಡಿಮೆ.

2024–25ನೆಯ ಆರ್ಥಿಕ ವರ್ಷದಲ್ಲಿ ಭಾರತದಲ್ಲಿ ಕೈಗಾರಿಕಾ ಉತ್ಪಾದನೆಯು ತಗ್ಗಿದ ಪರಿಣಾಮವಾಗಿ ಆರ್ಥಿಕ ಬೆಳವಣಿಗೆ ಕಡಿಮೆ ಆಗಿತ್ತು ಎಂದು ವಿಶ್ವ ಬ್ಯಾಂಕ್ ವರದಿಯು ಹೇಳಿದೆ. ಆದರೆ, ನಿರ್ಮಾಣ ವಲಯ ಹಾಗೂ ಸೇವಾ ವಲಯದಲ್ಲಿ ಚಟುವಟಿಕೆಗಳು ತಗ್ಗಿರಲಿಲ್ಲ, ಕೃಷಿ ವಲಯದ ಉತ್ಪಾದಕತೆಯು ತೀವ್ರ ಬರದ ಸ್ಥಿತಿಯಿಂದ ಹೊರಬಂದಿದೆ, ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆಯು ಕುಗ್ಗಿಲ್ಲ ಎಂದು ಹೇಳಿದೆ.

2025ರಲ್ಲಿ ಚೀನಾದ ಬೆಳವಣಿಗೆ ಪ್ರಮಾಣವು ಶೇ 4.5ರಷ್ಟು ಇರಲಿದೆ, ಮುಂದಿನ ವರ್ಷದಲ್ಲಿ ಅದು ಶೇ 4ರಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿದೆ.

ಕಳೆದ ವಾರ ಹಣಕಾಸು ನೀತಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್, ದೇಶದ ಆರ್ಥಿಕತೆಯ ಬೆಳವಣಿಗೆ ದರವು ಶೇ 6.5ರಷ್ಟು ಆಗಲಿದೆ ಎಂದು ಅಂದಾಜಿಸಿತ್ತು.

ವಿಶ್ವ ಬ್ಯಾಂಕ್ ಹೇಳಿದ್ದು

- ಹೂಡಿಕೆಯಲ್ಲಿನ ಬೆಳವಣಿಗೆ ಪ್ರಮಾಣವು ತಗ್ಗುವ ಸಾಧ್ಯತೆ ಇದೆ
- ಜಾಗತಿಕ ಮಟ್ಟದಲ್ಲಿ ಆರ್ಥಿಕ ಹಿಂಜರಿತದ ನಿರೀಕ್ಷೆ ಇಲ್ಲ
- ವಾಣಿಜ್ಯ ಬಿಕ್ಕಟ್ಟನ್ನು ತಗ್ಗಿಸಲು ಪ್ರಮುಖ ದೇಶಗಳಿಗೆ ಸಾಧ್ಯವಾದರೆ ಬೆಳವಣಿಗೆಯು ಪುಟಿದೇಳಲಿದೆ

ಚಿನ್ನ, ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹110 ಕಡಿಮೆಯಾಗಿ, ₹97,670ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ₹100 ಇಳಿಕೆಯಾಗಿ, ₹97,250 ಆಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹1 ಸಾವಿರ ಕಡಿಮೆಯಾಗಿದ್ದು, ₹1,07,100 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

10-06-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1370 (1370)
ಒಂದು ವಾರದ ಡೆಲಿವರಿ	1365 (1365)
ಪಾಮ್ ವಾರದ ಡೆಲಿವರಿ	1143 (1148)
ಸೂರ್ಯಕಾಂತಿ ಎಣ್ಣೆ ಕಚ್ಚಾ	1245 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹96,200 (95,400)

ಬೆಳ್ಳಿ ಕೆ.ಜಿ ₹1,06,900 (1,05,500)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಅಡಿಕೆ ಧಾರಣೆ (₹ಗಳಲ್ಲಿ)

ಸಾಗರ	
ಬಿಳಿಗೋಟು	14780-23500
ಚಾಲಿ	31731-36029
ಕೋಕ	16899-19899
ಕೆಂಪುಗೋಟು	25899-26699
ರಾಶಿ	32989-55899
ಸಿಪ್ಪೆಗೋಟು	10505-16855
ಶಿವಮೊಗ್ಗ	
ಬೆಟ್ಟೆ	49000-59308
ಗೊರಬಲು	18209-31509
ರಾಶಿ	46009-58799
ಸರಕು	51500-89510
ಸಿದ್ದಾಪುರ	
ಬಿಳಿಗೋಟು	24699-31209
ಚಾಲಿ	35099-40500
ಕೋಕ	16109-26699
ಕೆಂಪುಗೋಟು	19700-25199
ರಾಶಿ	41699-46799
ತಟ್ಟಿಬೆಟ್ಟೆ	29300-36659
ಶಿರಸಿ	
ಬೆಟ್ಟೆ	26089-40110
ಬಿಳಿಗೋಟು	17899-31699
ಚಾಲಿ	35018-42599
ಕೆಂಪುಗೋಟು	19099-22699
ರಾಶಿ	41899-48009
ಯಲ್ಲಾಪುರ	
ಬಿಳಿಗೋಟು	16001-34600
ಚಾಲಿ	35019-42479
ಕೋಕ	9601-16910
ಕೆಂಪುಗೋಟು	17099-24899
ರಾಶಿ	39119-54009
ತಟ್ಟಿಬೆಟ್ಟೆ	28306-38199

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹1,400-1,800
ಮಧ್ಯಮ	₹1,000-1,400
ಸಣ್ಣ	₹500-1,000

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1360 (1360)
ಸೋಯಾ (ರಿಫೈನ್ಡ್)	₹1170 (1170)
ಸೂರ್ಯಕಾಂತಿ (ರಿಫೈನ್ಡ್)	₹1320 (1320)
ಪಾಮೋಲಿನ್	₹1145 (1150)


ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹12000-20000
ದಾವಣಗೆರೆ	₹16000-16000
ಮಧುಗಿರಿ	₹10000-19500

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಿಘ್ನೇಶ್, ಮಡಿಕೇರಿ

- **ಪ್ರಶ್ನೆ:** ನಾನು ವಿಮಾ ಪಾಲಿಸಿ ಮಾಡಿಸಬೇಕೆಂದಿದ್ದೇನೆ. ಅನೇಕ ಬಗೆಯ ಪಾಲಿಸಿಗಳ ಬಗ್ಗೆ ಜಾಹೀರಾತುಗಳಲ್ಲಿ ನೋಡಿದ್ದೇನೆ. ನಾನು ಉದ್ಯೋಗಿಯಾಗಿದ್ದು ನನಗೆ ಪತ್ನಿ, ಮಕ್ಕಳು ಹಾಗೂ ನನ್ನ ಹೆತ್ತವರಿದ್ದಾರೆ. ಹೀಗಿರುವಾಗ ಯಾವ ರೀತಿಯ ವಿಮೆಯನ್ನು ಆಯ್ಕೆ ಮಾಡಬಹುದು?

ಉತ್ತರ: ನೀವು ಸೂಕ್ತವಾದ ವಿಮೆಯ ಆಯ್ಕೆ ಮಾಡುವಾಗ ಆರ್ಥಿಕ ಸುರಕ್ಷತೆ, ವೈದ್ಯಕೀಯ ವೆಚ್ಚಗಳ ನಿರ್ವಹಣೆ ಹಾಗೂ ಭವಿಷ್ಯದ ಕೆಲವು ಖರ್ಚುಗಳನ್ನು ಗಮನಿಸಬೇಕಿರುವುದು ಅನಿವಾರ್ಯ.

ನೀವು ಕುಟುಂಬಕ್ಕೆ ಆದಾಯ ಗಳಿಸುವ ವ್ಯಕ್ತಿಯಾಗಿದ್ದರೆ, ಅವಧಿ ವಿಮೆಯನ್ನು ನಿಮ್ಮ ನಿರೀಕ್ಷಿತ ಪ್ರೀಮಿಯಂ ಹಾಗೂ ಪರಿಹಾರದ ಮೊತ್ತ ಗಮನಿಸಿ ನಿರ್ಧರಿಸಿ. ಕಡಿಮೆ ಪ್ರೀಮಿಯಂನಲ್ಲಿ ಹೆಚ್ಚಿನ ವಿಮಾ ಮೊತ್ತ ದೊರಕುವುದು ಇದರ ವಿಶೇಷ. ಆದರೆ ಇದು ವಾರ್ಷಿಕ ವೆಚ್ಚವಾಗಿರುತ್ತದೆ. ಪತ್ನಿ, ಮಕ್ಕಳು ಹಾಗೂ ಹೆತ್ತವರಿಗೂ ಅನ್ವಯವಾಗುವ ಫ್ಯಾಮಿಲಿ ಫ್ಲೋಟರ್ ಆರೋಗ್ಯ ವಿಮೆಯನ್ನು ತೆಗೆದುಕೊಳ್ಳಬಹುದು. ಇದು ಆಸ್ಪತ್ರೆಗೆ ದಾಖಲಾದಾಗ ಆಗುವ ಖರ್ಚುಗಳು, ಶಸ್ತ್ರಚಿಕಿತ್ಸೆ ಹಾಗೂ ಇತರ ಚಿಕಿತ್ಸೆ, ಔಷಧಗಳ ಖರ್ಚುಗಳನ್ನು ಭರಿಸಲು ನೆರವಾಗುತ್ತದೆ. ಮಕ್ಕಳ ವಿದ್ಯಾಭ್ಯಾಸ ಅಥವಾ ಭವಿಷ್ಯದ ಉದ್ದೇಶಕ್ಕಾಗಿ ಮಕ್ಕಳ ಭದ್ರತಾ ಯೋಜನೆ ಅಥವಾ ಉಳಿತಾಯ ಯೋಜನೆಗಳನ್ನೂ ಪರಿಗಣಿಸಬಹುದು.

ಇದಲ್ಲದೆ ನಿಮ್ಮ ನಿವೃತ್ತಿ ನಂತರದ ಜೀವನಕ್ಕೆ ಕೂಡ ಸರಿಹೊಂದುವ ಯೋಜನೆಗಳಿವೆ. ಈ ಯೋಜನೆಗಳಲ್ಲಿ ಹೂಡಿಕೆಯು ಸೇವಾ ಅವಧಿಯಲ್ಲಿ ನಡೆಯುತ್ತದೆ ಮತ್ತು ನಿವೃತ್ತಿಯ ನಂತರ ನಿಯಮಿತವಾಗಿ ಪಿಂಚಣಿ ರೂಪದಲ್ಲಿ ಹಣ ನೀಡಲಾಗುತ್ತದೆ. ಇದರಿಂದ ಜೀವನದ ಇಳಿವಯಸ್ಸಿನಲ್ಲಿ ಖರ್ಚು ನಿರ್ವಹಣೆಗೆ ಸಹಾಯವಾಗುತ್ತದೆ.

ದೀರ್ಘಾವಧಿ ವಿಮಾ ಯೋಜನೆ ಪಡೆದರೆ ವ್ಯಕ್ತಿ ಬದುಕಿರುವ ತನಕ ಅಥವಾ 100ನೇ ವಯಸ್ಸಿನತನಕ ವಿಮಾ ಯೋಜನೆಯ ಲಭ್ಯತೆ ಇರುತ್ತದೆ. ಮಧ್ಯದಲ್ಲಿ ನಿಗದಿತ ಮೊತ್ತವನ್ನು ನೀಡುವ ಸೌಲಭ್ಯಗಳೂ ಇವೆ. ಯಾವುದೇ ಯೋಜನೆ ಪಡೆಯುವ ಮೊದಲು ಅದರ ಬಗ್ಗೆ ಅರಿವು, ಆ ಕಂಪನಿಗಳು ಇರಿಸುವ ಷರತ್ತುಗಳ ಮಾಹಿತಿಗಳನ್ನು ಪಡೆಯಿರಿ. ಈ ಎಲ್ಲ ವಿಮೆಗಳ ಆಯ್ಕೆ ನಿಮ್ಮ ವಯಸ್ಸು, ಆರೋಗ್ಯ, ಪ್ರೀಮಿಯಂ ಪಾವತಿ ಸಾಮರ್ಥ್ಯ ಹಾಗೂ ಉದ್ದೇಶಿತ ಭವಿಷ್ಯದ ಯೋಜನೆಗಳನ್ನು ಆಧರಿಸಿದೆ.

ಮಮತಾ, ಬೆಂಗಳೂರು

- **ಪ್ರಶ್ನೆ:** ನಾನು 52 ವರ್ಷ ವಯಸ್ಸಿನ ಪದವೀಧರ ಮಹಿಳೆ. ಮ್ಯೂಚುವಲ್ ಫಂಡ್ ಹಂಚಿಕೆ (ಡಿಸ್ಟ್ರಿಬ್ಯೂಟರ್) ಏಜೆನ್ಸಿ ತೆಗೆದುಕೊಳ್ಳಲು ಯೋಚಿಸುತ್ತಿದ್ದೇನೆ. ನಾನು ಸದ್ಯ ಎಲ್‌ಐಸಿ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಈ ಕ್ಷೇತ್ರದಲ್ಲಿ ಅಗತ್ಯವಿರುವ ಪ್ರವೇಶ ಪರೀಕ್ಷೆ ಬರೆಯದೇ ಈ ಏಜೆನ್ಸಿ ತೆಗೆದುಕೊಳ್ಳುವುದು ಸಾಧ್ಯವೇ ಎಂಬುದನ್ನು ತಿಳಿಸಿ. ಈ ಕ್ಷೇತ್ರದಲ್ಲಿ ಅಗತ್ಯವಿರುವ ವಿದ್ಯಾರ್ಹತೆಗಳು, ಕೌಶಲಗಳು, ಜವಾಬ್ದಾರಿಗಳು, ಸಂಪಾದನೆಯ ಸಾಧ್ಯತೆ ಮತ್ತು ಯಾರನ್ನು ಸಂಪರ್ಕಿಸಬೇಕೆಂಬ ವಿಷಯಗಳನ್ನು ವಿವರವಾಗಿ ತಿಳಿಸಿ.


ಉತ್ತರ: ನೀವು ಪದವೀಧರೆ, ಪ್ರಸ್ತುತ ಎಲ್‌ಐಸಿ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತಿದ್ದೀರಿ. ನಿಮಗೆ ಹಣಕಾಸು ಉತ್ಪನ್ನಗಳನ್ನು ಗ್ರಾಹಕರಿಗೆ ಪರಿಚಯಿಸುವ ಮತ್ತು ಅವುಗಳನ್ನು ಮಾರಾಟ ಮಾಡುವ ಉತ್ತಮ ಅನುಭವವಿದೆ ಎಂಬುದು ಇದರಿಂದ ಅರ್ಥೈಸಬಹುದಾದ ವಿಷಯ. ಈ ಹಿನ್ನೆಲೆಯಲ್ಲಿ ಮ್ಯೂಚುವಲ್ ಫಂಡ್ ಹಂಚಿಕೆ (ಡಿಸ್ಟ್ರಿಬ್ಯೂಟರ್) ಏಜೆನ್ಸಿ ಆರಂಭಿಸಲು ನೀವು ಯೋಚಿಸುತ್ತಿರುವುದು ಅತ್ಯಂತ ಸೂಕ್ತ ಮತ್ತು ಸರಿಯಾದ ಆಯ್ಕೆಯಾಗಿದೆ. ಆದರೆ, ಮ್ಯೂಚುವಲ್ ಫಂಡ್ ಏಜೆಂಟ್ ಆಗಲು ಕೆಲವೆಲ್ಲ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಹೂಡಿಕೆದಾರರ ಹಿತವನ್ನು ಗಮನದಲ್ಲಿ ಇರಿಸಿಕೊಂಡು ಈ ನಿಯಮಗಳು ಜಾರಿಗೆ ಬಂದಿವೆ.

ನೀವು ಭಾರತೀಯ ಮ್ಯೂಚುವಲ್ ಫಂಡ್‌ಗಳ ಸಂಘಟನೆಯಿಂದ (ಎಎಂಎಫ್ಐ) ಪ್ರಮಾಣೀಕೃತವಾಗಿರುವ ಏಜೆಂಟ್ ನೊಂದಣಿ ಸಂಖ್ಯೆಯಾದ 'ಎಆರ್‌ಎನ್' ಪಡೆಯಬೇಕು. ಇದಕ್ಕಾಗಿ, ನೀವು ಮೊದಲು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೆಕ್ಯುರಿಟೀಸ್ ಮಾರ್ಕೆಟ್ (ಎನ್‌ಐಎಸ್‌ಎಂ) ನಡೆಸುವ 'ಸೀರೀಸ್ V-ಎ: ಮ್ಯೂಚುವಲ್ ಫಂಡ್ ಡಿಸ್ಟ್ರಿಬ್ಯೂಟರ್‌ಗಳ ಪ್ರಮಾಣಪತ್ರ ಪರೀಕ್ಷೆ' ಎಂಬ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಆಗಬೇಕಾಗುತ್ತದೆ. ಈ ಪರೀಕ್ಷೆಯು ಡಿಸ್ಟ್ರಿಬ್ಯೂಟರ್ ಆಗುವ ಗುರಿ ಹೊಂದಿದ ಎಲ್ಲರಿಗೂ ಕಡ್ಡಾಯವಾಗಿದ್ದು, ಯಾವುದೇ ವಿನಾಯಿತಿ ಇಲ್ಲ. ಪರೀಕ್ಷೆಯಲ್ಲಿ ತೇರ್ಗಡೆಯಾದ ಬಳಿಕ, ನೀವು ಎಎಂಎಫ್ಐನಲ್ಲಿ ನೊಂದಾಯಿಸಿಕೊಂಡು ಎಆರ್‌ಎನ್ ಪಡೆಯಬಹುದು. ಒಂದು ವೇಳೆ ನೀವು ಒಂದು ಸಂಸ್ಥೆಯನ್ನು ಹುಟ್ಟುಹಾಕಿ, ಅದರ ಮೂಲಕ ಈ ವಿತರಣಾ ವ್ಯವಹಾರ ನಡೆಸುವ ಉದ್ದೇಶ ಹೊಂದಿದ್ದರೆ, ನಿಮ್ಮ ಸಂಸ್ಥೆಯ ಒಬ್ಬ ಉದ್ಯೋಗಿಯಾದರೂ ಈ ಪರೀಕ್ಷೆಯಲ್ಲಿ ಉತ್ತೀರ್ಣ ಆಗಿರಬೇಕು.

ಇನ್ನು ಆದಾಯದ ಅವಕಾಶದ ಬಗ್ಗೆ ಹೇಳುವುದಾದರೆ, ಮೇಲಿನ ನಿಯಂತ್ರಣಾತ್ಮಕ ಮಾರ್ಗಸೂಚಿಯ ಪ್ರಕಾರ, ಮ್ಯೂಚುವಲ್ ಫಂಡ್ ಆಸ್ತಿ ನಿರ್ವಹಣಾ ಸಂಸ್ಥೆಗಳಿಂದ ಕಮಿಷನ್ ಸಿಗುತ್ತದೆ. ಇದಲ್ಲದೆ ಯಾವುದೇ ಇತರ ರೂಪದ ಪ್ರೋತ್ಸಾಹ ಧನಗಳನ್ನು ಡಿಸ್ಟ್ರಿಬ್ಯೂಟರ್‌ಗಳಿಗೆ ನೀಡುವುದಕ್ಕೆ ಅನುಮತಿ ಇಲ್ಲ. ಮೊದಲ ಹಂತದಲ್ಲಿ ಬರುವ ಆದಾಯ ಕಡಿಮೆ ಇದ್ದರೂ , ಮುಂದೆ ಸಹಜವಾಗಿ ವ್ಯವಹಾರ ವೃದ್ಧಿಸಿದಂತೆ ಆದಾಯವೂ ಅದಕ್ಕೆ ಅನುಗುಣವಾಗಿ ಹೆಚ್ಚುತ್ತದೆ.

ಈ ಕ್ಷೇತ್ರದಲ್ಲಿ ಯಶಸ್ಸು ಪಡೆಯಲು ನೀವು ಹೊಂದಿರಬೇಕಾದ ಅರ್ಹತೆಗಳಲ್ಲಿ, ಹಣಕಾಸಿನ ಸರಿಯಾದ ಅರಿವು ಮುಖ್ಯವಾಗಿದೆ. ಇದು ಗ್ರಾಹಕರ ಸಂದೇಹ ಹಾಗೂ ಅವರು ಯಾವ ಹಂತದಲ್ಲಿದ್ದಾರೆ ಹಾಗೂ ಆ ಸಂದರ್ಭಕ್ಕೆ ಅನುಗುಣವಾಗಿ ಮುಂದೆ ಯಾವ ಆಯ್ಕೆ ಉತ್ತಮ ಎಂಬ ಅರಿವು ಮೂಡಿಸುವ ಜವಾಬ್ದಾರಿ ಇದ್ದರೆ ಮುಂದಿನ ನಡೆ ಬಹು ಸುಲಭ. ನೀವು ವಿಮಾ ಏಜೆಂಟ್ ಆಗಿ ಗಳಿಸಿರುವ ಅನುಭವವನ್ನು ಮ್ಯೂಚುವಲ್ ಫಂಡ್ ಕ್ಷೇತ್ರದಲ್ಲೂ ಯಶಸ್ವಿಯಾಗಿ ಅನ್ವಯಿಸಲು ಪ್ರಯತ್ನಿಸಿ. ನೀವು ಹೆಚ್ಚಿನ ಮಾಹಿತಿಗಾಗಿ ಎಎಂಎಫ್ಐ ಜಾಲತಾಣ www.amfiindia.com ಮತ್ತು ಎನ್‌ಐಎಸ್‌ಎಂ www.nism.ac.in ತಾಣವನ್ನು ಭೇಟಿ ನೀಡಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in







ಈಕ್ವಿಟಿ ಫಂಡ್: ಹೂಡಿಕೆ ಇಳಿಕೆ

ಉದ್ಯಮದ ನಿರ್ವಹಣಾ ಸಂಪತ್ತು ₹72.2 ಲಕ್ಷ ಕೋಟಿ



ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಿಗೆ ಒಳಹರಿವು ಮೇ ತಿಂಗಳಲ್ಲಿ ₹19,013 ಕೋಟಿಗೆ ಇಳಿಕೆ ಆಗಿದೆ. ಇದು 13 ತಿಂಗಳ ಕನಿಷ್ಠ ಮಟ್ಟ. ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳಿಗೆ ಹಣದ ಒಳಹರಿವು ತಗ್ಗಿದೆ. ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಹೂಡಿಕೆ ಹಿಂಪಡೆದಿದ್ದು ಇದಕ್ಕೆ ಒಂದು ಕಾರಣ.

ಮೇ ತಿಂಗಳನ್ನು ಪರಿಗಣಿಸಿದರೆ, ಸತತ ಐದು ತಿಂಗಳುಗಳಿಂದ ಒಳಹರಿವು ತಗ್ಗುತ್ತಿದೆ. ಏಪ್ರಿಲ್ ತಿಂಗಳಲ್ಲಿ ₹24,269 ಕೋಟಿ ಒಳಹರಿವು ಇತ್ತು. ಅದಕ್ಕೆ ಹೋಲಿಸಿದರೆ ಮೇ ತಿಂಗಳಲ್ಲಿನ ಒಳಹರಿವಿನ ಪ್ರಮಾಣವು ಶೇ 22ರಷ್ಟು ಕಡಿಮೆ ಆಗಿದೆ. ಭಾರತದ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್ಐ) ಈ ಮಾಹಿತಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಆಗುವ ಹೂಡಿಕೆಯು ಮೇ ತಿಂಗಳಲ್ಲಿ ₹26,688 ಕೋಟಿ ಆಗಿದೆ. ಇದು ಏಪ್ರಿಲ್ ತಿಂಗಳ ಎಸ್‌ಐಪಿ ಹೂಡಿಕೆಯಾದ ₹26,632 ಕೋಟಿಗಿಂತ ತುಸು ಹೆಚ್ಚಿದೆ.

'ಏಪ್ರಿಲ್‌ಗೆ ಹೋಲಿಸಿದರೆ ಮೇ ತಿಂಗಳಲ್ಲಿ ಷೇರು ಮಾರುಕಟ್ಟೆಯು ಹೆಚ್ಚು ಏರಿಕೆ ಕಾಣಲಿಲ್ಲ. ಜಾಗತಿಕ ಆರ್ಥಿಕ ಸಮಸ್ಯೆಗಳ ಕುರಿತು ಕೆಲವು ಕಳವಳಗಳು ಇದ್ದವು. ಹಿಂದಿನ ತಿಂಗಳುಗಳಲ್ಲಿ ಷೇರುಪೇಟೆಗಳು ಕಂಡ ಏರಿಕೆಯ ನಂತರ ಮೇ ತಿಂಗಳಲ್ಲಿ ಹೂಡಿಕೆದಾರರು ಲಾಭ ಗಳಿಕೆಗಾಗಿ ಮಾರಾಟಕ್ಕೆ ಮುಂದಾಗಿರಬಹುದು. ಇವೆಲ್ಲ ಹೂಡಿಕೆ ಪ್ರಮಾಣ ತಗ್ಗಿರುವುದಕ್ಕೆ ಕಾರಣಗಳಾಗಿರಬಹುದು' ಎಂದು ಮಾರ್ನಿಂಗ್‌ಸ್ಟಾರ್ ರಿಸರ್ಚ್ ಇಂಡಿಯಾ ಸಂಸ್ಥೆಯ ಸಹ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ. ಫ್ಲೆಕ್ಸಿ ಕ್ಯಾಪ್ ಫಂಡ್‌ಗಳಲ್ಲಿ ಹೂಡಿಕೆಯು ಹೆಚ್ಚಳ ಕಂಡಿದೆ.

ವಿನಿಮಯ ದರ

$ ಡಾಲರ್	85.57
£ ಪೌಂಡ್	115.54
€ ಯುರೊ	97.77
¥ ಯೆನ್ (100ಕ್ಕೆ)	59

ಚಾಟ್‌ಜಿಪಿಟಿ ಸೇವೆಯಲ್ಲಿ ವ್ಯತ್ಯಯ

ನವದೆಹಲಿ (ಪಿಟಿಐ): ಓಪನ್‌ಎಐನ ಚಾಟ್‌ಜಿಪಿಟಿ ಸೇವೆಯಲ್ಲಿ ಮಂಗಳವಾರ ಜಾಗತಿಕವಾಗಿ ವ್ಯತ್ಯಯ ಉಂಟಾಗಿದೆ.

ವ್ಯತ್ಯಯದಿಂದಾಗಿ ಹಲವಾರು ರಾಷ್ಟ್ರಗಳಲ್ಲಿನ ಸಾವಿರಾರು ಬಳಕೆದಾರರು ಸೇವೆ ಪಡೆಯಲು ಸಾಧ್ಯವಾಗಲಿಲ್ಲ. ಭಾರತ ಮತ್ತು ಅಮೆರಿಕದಲ್ಲಿ ಹೆಚ್ಚಿನ ಬಳಕೆದಾರರು ಸೇವೆಯಲ್ಲಿ ಅಡಚಣೆ ಎದುರಿಸಿದ್ದಾರೆ.

ಡೌನ್‌ಡಿಟೆಕ್ಟರ್ ವೆಬ್‌ಸೈಟ್ ಮಾಹಿತಿ ಪ್ರಕಾರ, ಮಂಗಳವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಸೇವೆಯಲ್ಲಿ ವ್ಯತ್ಯಯವಾಗಿರುವುದಾಗಿ ಬಳಕೆದಾರರು ಹೇಳಿದ್ದಾರೆ. ಭಾರತದಿಂದಲೇ 800 ದೂರುಗಳು ದಾಖಲಾಗಿವೆ.

ಬಳಕೆದಾರರು ಸೇವೆಯನ್ನು ಬಳಸಲು ಪ್ರಯತ್ನಿಸಿದಾಗ 'ನಿಮ್ಮ ಸಂಪರ್ಕವನ್ನು ದಯವಿಟ್ಟು ಪರಿಶೀಲಿಸಿ ಮತ್ತು ಪುನಃ ಪ್ರಯತ್ನಿಸಿ' ಎಂಬ ಸಂದೇಶ ಬಿತ್ತರವಾಗುತ್ತಿತ್ತು.

ಸೇವೆಯಲ್ಲಿ ವ್ಯತ್ಯಯವಾಗಿದೆ. ಈ ಸಮಸ್ಯೆಯ ಬಗ್ಗೆ ಪರಿಶೀಲನೆ ನಡೆದಿದೆ ಎಂದು ಓಪನ್‌ಎಐ ತಿಳಿಸಿದೆ. ಸಮಸ್ಯೆ ಯಾವಾಗ ಬಗೆಹರಿಯುತ್ತದೆ ಎಂಬ ನಿರ್ದಿಷ್ಟ ಗಡುವನ್ನು ಓಪನ್‌ಎಐ ನೀಡಿಲ್ಲ.

ಬ್ರಿಟನ್ ಲೇಖಕ ಫ್ರೆಡರಿಕ್ ಫೋರ್ಸೈತ್ ನಿಧನ



ಲಂಡನ್ (ಎಪಿ): ಬ್ರಿಟನ್‌ನ ಜನಪ್ರಿಯ ಲೇಖಕ ಫ್ರೆಡರಿಕ್ ಫೋರ್ಸೈತ್ (86) ಅವರು ಅನಾರೋಗ್ಯದಿಂದ ಮೃತಪಟ್ಟಿದ್ದಾರೆ ಎಂದು ಅವರ ಏಜೆಂಟ್ ಸೋಮವಾರ ತಿಳಿಸಿದರು.

'ದಿ ಡೇ ಆಫ್ ದಿ ಜಾಕಲ್' ಸೇರಿದಂತೆ ಅನೇಕ ಥ್ರಿಲ್ಲರ್ ಕಾದಂಬರಿಗಳಿಂದ ಫ್ರೆಡರಿಕ್ ಅವರು ಜನಪ್ರಿಯರಾಗಿದ್ದರು.

'ಜಗತ್ತಿನ ಶ್ರೇಷ್ಠ ಥ್ರಿಲ್ಲರ್ ಕಾದಂಬರಿಗಳ ಲೇಖಕ ನಮ್ಮನ್ನು ಅಗಲಿದ್ದಾರೆ' ಎಂದು ಏಜೆಂಟ್ ಜೊನಾಥನ್ ಲಾಯ್ಡ್ ತಿಳಿಸಿದರು.

'ದಿ ಅಫ್ಘನ್', 'ದಿ ಕಿಲ್ ಲಿಸ್ಟ್', 'ಡಾಗ್ಸ್ ಆಫ್ ವಾರ್', 'ದಿ ಫಿಸ್ಟ್ ಆಫ್ ಗಾಡ್' ಸೇರಿದಂತೆ 25ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಈ ಪುಸ್ತಕಗಳ 7.5 ಕೋಟಿ ಪ್ರತಿಗಳು ಮಾರಾಟವಾಗಿವೆ ಎಂದು ಲಾಯ್ಡ್ ತಿಳಿಸಿದರು.

ಫ್ರೆಡರಿಕ್ ಅವರು ದಕ್ಷಿಣ ಬ್ರಿಟನ್‌ನ ಕೆಂಟ್‌ನಲ್ಲಿ 1938ರಲ್ಲಿ ಜನಿಸಿದ್ದರು. ಇವರು ರಾಯಲ್ ಏರ್‌ಫೋರ್ಸ್ ಪೈಲಟ್ ಆಗಿಯೂ ಸೇವೆ ಸಲ್ಲಿಸಿದ್ದರು. ವಿದೇಶದಲ್ಲಿ ಸುದ್ದಿಗಾರರಾಗಿದ್ದರು. 1962ರಲ್ಲಿ ನಡೆದ ಫ್ರಾನ್ಸ್ ಅಧ್ಯಕ್ಷ ಚಾರ್ಲ್ಸ್ ದೆ ಗೌಲೆ ಅವರ ಹತ್ಯೆ ಯತ್ನದ ಬಗ್ಗೆಯೂ ವರದಿ ಮಾಡಿದ್ದರು. 'ದಿ ಡೇ ಆಫ್ ದಿ ಜಾಕಲ್' ಕಾದಂಬರಿ ಬರೆಯಲು ಇದು ಸ್ಫೂರ್ತಿಯಾಗಿತ್ತು. ಈ ಪುಸ್ತಕ ಅವರಿಗೆ ಜಗತ್ಪ್ರಸಿದ್ಧಿ ತಂದುಕೊಟ್ಟಿತ್ತು. 1973ರಲ್ಲಿ ಈ ಕಾದಂಬರಿ ಆಧರಿತ ಸಿನಿಮಾ ಮಾಡಲಾಗಿದೆ.

ಮಾಜಿ ವಿದ್ಯಾರ್ಥಿಯಿಂದ ಶಾಲೆಯಲ್ಲಿ ಗುಂಡಿನ ದಾಳಿ: 10 ಸಾವು


ವಿಯೆನ್ನಾ (ಎಪಿ): ಆಸ್ಟ್ರಿಯಾದ ಗ್ರಾಜ್ ನಗರದ ಶಾಲೆಯೊಂದರಲ್ಲಿ, 21 ವರ್ಷದ ಮಾಜಿ ವಿದ್ಯಾರ್ಥಿಯೊಬ್ಬ ಗುಂಡು ಹಾರಿಸಿದ್ದು, ಕನಿಷ್ಠ 10 ಜನರು ಮೃತಪಟ್ಟಿದ್ದಾರೆ. ಮೃತರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು.

'12 ಮಂದಿ ಗಾಯಗೊಂಡಿದ್ದಾರೆ. ಗುಂಡು ಹಾರಿಸಿದ ಮಾಜಿ ವಿದ್ಯಾರ್ಥಿಯು ಸ್ವತಃ ಗುಂಡು ಹಾರಿಸಿಕೊಂಡು ಮೃತಪಟ್ಟಿದ್ದಾನೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ದಾಳಿಗೆ ಕಾರಣ ತಿಳಿದಿಲ್ಲ. ಆತನ ಬಳಿ ಎರಡು ಬಂದೂಕು ಇದ್ದು, ಅಕ್ರಮವಾಗಿ ಹೊಂದಿದ್ದ. ಈತ ಶಾಲೆಯಲ್ಲಿ ಕೋರ್ಸ್ ಪೂರ್ಣಗೊಳಿಸಿರಲಿಲ್ಲ' ಎಂದು ಗ್ರಾಜ್‌ನ ಪೊಲೀಸರು ತಿಳಿಸಿದ್ದಾರೆ. 'ಶಾಲೆಯ ಬಳಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ. ಘಟನೆ ಹಿನ್ನೆಲೆಯಲ್ಲಿ ರಾಷ್ಟ್ರೀಯ ಶೋಕ ಘೋಷಿಸಲಾಗಿದೆ' ಎಂದು ಆಸ್ಟ್ರಿಯಾದ ಚಾನ್ಸೆಲರ್ ಕ್ರಿಸ್ಟಿಯನ್ ಸ್ಟಾಕರ್ ತಿಳಿಸಿದ್ದಾರೆ.

ಸಚಿವ ಶಿವಾನಂದ ಪಾಟೀಲ ಅಧ್ಯಕ್ಷತೆಯ ಸಭೆಯಲ್ಲಿ ನಿರ್ಧಾರ

ಕಬ್ಬು ಅರೆಯುವಿಕೆಗೆ ದಿನಾಂಕ ನಿಗದಿ

ಪ್ರಜಾವಾಣಿ ವಾರ್ತೆ



ತೂಕದಲ್ಲಿನ ವಂಚನೆ ಕುರಿತು ದಾಖಲೆ ಸಹಿತ ದೂರು ನೀಡುವ ರೈತರಿಗೆ ₹5 ಲಕ್ಷ ಬಹುಮಾನ ಘೋಷಣೆ ಮಾಡಲಾಗಿದೆ. ಮೊಬೈಲ್ ಡಿಜಿಟಲ್ ತೂಕದ ಯಂತ್ರಗಳನ್ನು ಪ್ರಾಯೋಗಿಕವಾಗಿ ಅಳವಡಿಸಲಾಗಿದೆ

ಶಿವಾನಂದ ಪಾಟೀಲ, ಕಬ್ಬು ಅಭಿವೃದ್ಧಿ, ಸಕ್ಕರೆ ಸಚಿವ

ಬೆಂಗಳೂರು: ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ ಜೂನ್ 22ರಿಂದ ಕಬ್ಬು ಅರೆಯುವಿಕೆ ಆರಂಭಿಸಲಾಗುತ್ತಿದ್ದು, ಇತರೆ ಜಿಲ್ಲೆಗಳಲ್ಲಿ ನ.1ರಿಂದ ಆರಂಭಿಸಲು ಮಂಗಳವಾರ ನಡೆದ ಕಬ್ಬು ನಿಯಂತ್ರಣ ಮಂಡಳಿ ಸಭೆ ನಿರ್ಧರಿಸಿತು.

ಕಬ್ಬು, ಸಕ್ಕರೆ ಅಭಿವೃದ್ಧಿ ಸಚಿವ ಶಿವಾನಂದ ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಕುರಿತು ನಿರ್ಧಾರಕ್ಕೆ ಬರಲಾಯಿತು.

ಕಳೆದ ಮೂರು ವರ್ಷದ ಹಂಗಾಮಿನಲ್ಲಿ ಕಬ್ಬು ಪೂರೈಕೆ ಮಾಡಿದ ರೈತರಿಗೆ ಪೂರ್ಣ ಪ್ರಮಾಣದಲ್ಲಿ ಮೊತ್ತ ಪಾವತಿಯಾಗಿದೆ. ಕಬ್ಬು ಪೂರೈಕೆ ಮಾಡಿದ 14 ದಿನಗಳ ಒಳಗೆ ಬಾಕಿ ಪಾವತಿ ಮಾಡಬೇಕು ಎಂಬ ನಿಯಮ ಬಹುತೇಕ ಪಾಲನೆಯಾಗಿದೆ. ಕೆಲ ಕಾರ್ಖಾನೆಗಳು ವಿಳಂಬ ಮಾಡಿದರೂ, ಬಾಕಿ ಉಳಿಸಿಕೊಂಡಿಲ್ಲ. ಕಬ್ಬು ಪೂರೈಕೆ ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ಉತ್ತರ ಪ್ರದೇಶದಲ್ಲಿ ₹594 ಕೋಟಿ, ಮಹಾರಾಷ್ಟ್ರ ರಾಜ್ಯದಲ್ಲಿ ₹123 ಕೋಟಿ ಬಾಕಿ ಉಳಿಸಿಕೊಂಡಿವೆ. ಕಬ್ಬಿನ ಬಾಕಿ ಪಾವತಿ ವಿಚಾರದಲ್ಲಿ ಕರ್ನಾಟಕ ಇತರೆ ರಾಜ್ಯಗಳಿಗೆ ಮಾದರಿಯಾಗಿದೆ ಎಂದು ಶಿವಾನಂದ ಪಾಟೀಲ ಹೇಳಿದರು.

2025-26ನೇ ಸಾಲಿನ ಹಂಗಾಮಿಗೆ ಎಫ್‌ಆರ್‌ಪಿ ದರವನ್ನು ಪ್ರತಿ ಟನ್‌ಗೆ ₹4,440 ಅಥವಾ ₹4,200 (ಶೇ 9.5ಕ್ಕೆ) ನಿಗದಿಪಡಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಕಳೆದ ಜನವರಿಯಲ್ಲೇ ರಾಜ್ಯ ಸರ್ಕಾರ ಮನವಿ ಮಾಡಿತ್ತು. ಕೇಂದ್ರ ಸರ್ಕಾರ ಶೇ 10.25 ಸಕ್ಕರೆ ಇಳುವರಿಗೆ ಪ್ರತಿಟನ್‌ಗೆ ₹3,550, ಶೇ 10.25ಕ್ಕೂ ಮೇಲ್ಪಟ್ಟ ಇಳುವರಿಗೆ ಪ್ರತಿ ಟನ್‌ಗೆ ₹346 ಹೆಚ್ಚುವರಿ ಬೆಲೆ ನಿಗದಿಪಡಿಸಿದೆ ಎಂದರು.

ಕೆಲ ಕಾರ್ಖಾನೆಗಳು ಎಫ್‌ಆರ್‌ಪಿ ದರದಂತೆ ಸಂಪೂರ್ಣ ಹಣ ಪಾವತಿ ಮಾಡಿದ್ದರೂ ಕಬ್ಬು (ನಿಯಂತ್ರಣ) ಆದೇಶದ ಅನ್ವಯ ವಿಳಂಬದ ಅವಧಿಗೆ ರೈತರಿಗೆ ಶೇ 15 ಬಡ್ಡಿ ವಿತರಿಸಿರುವ ಬಗ್ಗೆ ಮಾಹಿತಿ ನೀಡಿಲ್ಲ. ಕಾರ್ಖಾನೆಗಳಿಂದ ಬರಬೇಕಾದ ಬಾಕಿ, ಬಡ್ಡಿ ಮೊತ್ತ ಪಾವತಿ ಬಗ್ಗೆ ಖಚಿತಪಡಿಸಿಕೊಳ್ಳಲು ಹಾಗೂ ಅನುಪಾಲನಾ ವರದಿ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಕೋರ್ಟ್ ಆದೇಶವಿದ್ದರೂ ಸಕ್ಕರೆ ಕಾರ್ಖಾನೆಗಳಲ್ಲಿ ಡಿಜಿಟಲ್ ತೂಕದ ಯಂತ್ರಗಳನ್ನು ಅಳವಡಿಸಲು ಕ್ರಮ ಕೈಗೊಂಡಿಲ್ಲ. ಕೆಲವೆಡೆ ಡಿಜಿಟಲ್ ಯಂತ್ರಗಳನ್ನು ಅಳವಡಿಸಿದ್ದರೂ ರೈತರಲ್ಲಿ ವಿಶ್ವಾಸ ಬಂದಿಲ್ಲ. ಈ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.




ಮೂರು ವಿಭಾಗಗಳ ನಾಮನಿರ್ದೇಶಿತರು

CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

‘ಕಾಸಾಗ್ರ್ಯಾಂಡ್’ ಪ್ರಸ್ತುತಿಯ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ 3ನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ಚಂದನವನದ ಪ್ರತಿಭೆಗಳನ್ನು ಗುರುತಿಸುವ ಉದ್ದೇಶದೊಂದಿಗೆ ‘ಪ್ರಜಾವಾಣಿ’ಯು ಅಮೃತ ಮಹೋತ್ಸವದ ಸಂದರ್ಭದಲ್ಲಿ ಈ ಪ್ರಶಸ್ತಿಯನ್ನು ಆರಂಭಿಸಿತು. ಕಳೆದ ಎರಡು ಆವೃತ್ತಿಗಳು ಅದ್ದೂರಿಯಾಗಿ ನಡೆದಿದ್ದು ಇದೀಗ ಮೂರನೇ ಆವೃತ್ತಿಗೆ ವೇದಿಕೆ ಸಜ್ಜಾಗಿದೆ. ಈ ಆವೃತ್ತಿಗೆ 2024ರಲ್ಲಿ ಬಿಡುಗಡೆಗೊಂಡ ಸಿನಿಮಾಗಳನ್ನು ಪರಿಗಣಿಸಲಾಗಿದ್ದು, ನಾಮನಿರ್ದೇಶಿತರಾದವರನ್ನು ತಿಳಿಸುವ ಸಮಯ ಇದಾಗಿದೆ. 200ಕ್ಕೂ ಅಧಿಕ ಸಿನಿಮಾಗಳನ್ನು ವೀಕ್ಷಿಸಿರುವ 21 ಪರಿಣತರು 15 ವಿಭಾಗಗಳಲ್ಲಿ ಪ್ರತಿಭಾವಂತರನ್ನು ಆಯ್ಕೆ ಮಾಡಲು ನಾಮನಿರ್ದೇಶನಗಳನ್ನು ಮಾಡಿದ್ದಾರೆ. ಆಯ್ಕೆ ಪ್ರಕ್ರಿಯೆಯು ಪಾರದರ್ಶಕವಾಗಿದ್ದು, ಪರಿಣತರು ನಾಮನಿರ್ದೇಶನಕ್ಕೆ ಆಯ್ಕೆ ಮಾಡಿದವರ ಹೆಸರುಗಳನ್ನು ಮುಖ್ಯತೀರ್ಪುಗಾರರು ಅನುಮೋದಿಸಿದ್ದಾರೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ಮತ ಹಾಕುವ ಮುಖಾಂತರ ವಿಜೇತರನ್ನಾಗಿ ಆಯ್ಕೆ ಮಾಡಲಿದ್ದಾರೆ. ಯಾವ ವಿಭಾಗದಲ್ಲಿ ಪ್ರಶಸ್ತಿ ಯಾರ ಮುಡಿಗೇರಲಿದೆ ಎನ್ನುವುದು ‘ಸಿನಿ ಸಮ್ಮಾನ’ ಕಾರ್ಯಕ್ರಮದಲ್ಲೇ ಘೋಷಣೆಯಾಗಲಿದೆ. ಮೊದಲ ಹಂತವಾಗಿ ಮೂರು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರು, ಸಿನಿಮಾಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳನ್ನು ಹಂತ ಹಂತವಾಗಿ ಪ್ರಕಟಿಸಲಾಗುವುದು.

ವರ್ಷದ ಅತ್ಯುತ್ತಮ ಚಿತ್ರ (2024)

ಶಾಖಾಹಾರಿ

ಬ್ಲಿಂಕ್

ಕೃಷ್ಣಂ ಪ್ರಣಯ ಸಖಿ

ರೂಪಾಂತರ

ಹದಿನೇಳೆಂಟು

ಶಿವಮ್ಮ ಯರೇಹಂಚಿನಾಳ


ಕುಬುಸ

ಕೆರೆಬೇಟೆ



ಅತ್ಯುತ್ತಮ ನಟ


ಕಿಚ್ಚ ಸುದೀಪ್
ಚಿತ್ರ: ಮ್ಯಾಕ್ಸ್


ದುನಿಯಾ ವಿಜಯ್
ಚಿತ್ರ: ಭೀಮ


ರಂಗಾಯಣ ರಘು
ಚಿತ್ರ: ಶಾಖಾಹಾರಿ



ದಿಗಂತ್
ಚಿತ್ರ: ಮಾರಿಗೋಲ್ಡ್


ವಿನಯ್ ರಾಜ್‌ಕುಮಾರ್
ಚಿತ್ರ: ಪೆಪೆ


ಪ್ರಮೋದ್ ಶೆಟ್ಟಿ
ಚಿತ್ರ: ಲಾಫಿಂಗ್ ಬುದ್ಧ


ಮಹಾದೇವ ಹಡಪದ
ಚಿತ್ರ: ಫೋಟೋ


ರಾಜವರ್ಧನ್
ಚಿತ್ರ: ಹಿರಣ್ಯ


ಗೌರಿಶಂಕರ್
ಚಿತ್ರ: ಕೆರೆಬೇಟೆ

ಅತ್ಯುತ್ತಮ ನಟಿ



ಶರಣಮ್ಮ ಚೆಟ್ಟಿ
ಚಿತ್ರ: ಶಿವಮ್ಮ ಯರೇಹಂಚಿನಾಳ


ಅಂಕಿತಾ ಅಮರ್
ಚಿತ್ರ: ಇಬ್ಬನಿ ತಬ್ಬಿದ ಇಳೆಯಲಿ


ಸ್ವತಿಷ್ಠ ಕೃಷ್ಣನ್
ಚಿತ್ರ: ಒಂದು ಸರಳ ಪ್ರೇಮ ಕಥೆ


ರೋಶಿನಿ ಪ್ರಕಾಶ್
ಚಿತ್ರ: ಮರ್ಫಿ


ಮಮತಾ ರಾಹುತ್
ಚಿತ್ರ: ತಾರಿಣಿ


ನಿಶಾ ರವಿಕೃಷ್ಣನ್
ಚಿತ್ರ: ಅಂಶು


ಮಹಾಲಕ್ಷ್ಮಿ
ಚಿತ್ರ: ಕುಬುಸ

5 ವರ್ಷ: 20 ಲಕ್ಷ ಉದ್ಯೋಗ ಸೃಷ್ಟಿ ಗುರಿ

₹7.5 ಲಕ್ಷ ಕೋಟಿ ಹೂಡಿಕೆಯ ನಿರೀಕ್ಷೆ: ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಐದು ವರ್ಷಗಳಲ್ಲಿ ₹7.5 ಲಕ್ಷ ಕೋಟಿ ಬಂಡವಾಳ ಹೂಡಿಕೆ ಆಕರ್ಷಿಸುವ ಮತ್ತು 20 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಉದ್ದೇಶ ಇದೆ. ಮೂರು ತಿಂಗಳ ಬಳಿಕ ಮತ್ತೊಮ್ಮೆ ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಲಾಗುವುದು ಎಂದು ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ತಯಾರಿಕಾ ವಲಯದ ಬಲವರ್ಧನೆಗೆ ಆಗಬೇಕಾದ ಕಾಯಕಲ್ಪ ಕುರಿತು 60 ಕಂಪನಿಗಳ 80 ಮುಖ್ಯಸ್ಥರು ಮತ್ತು ಸಿಇಒಗಳೊಂದಿಗೆ ನಗರದಲ್ಲಿ ಮಂಗಳವಾರ ನಡೆದ ಉತ್ಪಾದನಾ ಮಂಥನ’ ಸಮಾವೇಶದಲ್ಲಿ ಅವರು ಮಾತನಾಡಿದರು.

ಮುಂದಿನ ಐದು ವರ್ಷಗಳಲ್ಲಿ ರಾಜ್ಯವನ್ನು ತಯಾರಿಕಾ ವಲಯದಲ್ಲಿ ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ಸರ್ಕಾರವು 6 ಪ್ರಮುಖ ವಲಯಗಳ ಪ್ರಗತಿಗೆ ಪ್ರತ್ಯೇಕ ಕಾರ್ಯಪಡೆಗಳನ್ನು ರಚಿಸಲಿದೆ. ಇದಕ್ಕೆ ಬೇಕಾದ ಸಮಗ್ರ ಟೌನ್‌ಶಿಪ್‌ಗಳ ಅಭಿವೃದ್ಧಿ, ಕೈಗಾರಿಕಾ ಪ್ರದೇಶಗಳಿಂದ ಮಂಗಳೂರು ಮತ್ತು ಚೆನ್ನೈ ಬಂದರುಗಳಿಗೆ ಸಂಪರ್ಕ ಸೇರಿದಂತೆ ಪ್ರತಿಯೊಂದು ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ವಿವರಿಸಿದರು.

ಏರೋಸ್ಪೇಸ್ ಮತ್ತು ರಕ್ಷಣೆ, ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್, ಕ್ಯಾಪಿಟಲ್ ಗೂಡ್ಸ್ ಮತ್ತು ರೋಬೋಟಿಕ್ಸ್, ಆಟೊ ಮತ್ತು ಎಲೆಕ್ಟ್ರಿಕ್ ವಾಹನಗಳು, ಜವಳಿ ಹಾಗೂ ಪಾದರಕ್ಷೆ, ಆಟಿಕೆ ಮತ್ತು ಎಫ್‌ಎಂಸಿಜಿ ಉತ್ಪನ್ನಗಳ ಮೇಲೆ ಗಮನ ಕೇಂದ್ರೀಕರಿಸಲಾಗುವುದು ಎಂದರು.

ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ವಲಯಕ್ಕೆ ಅನುಕೂಲವಾಗುವಂತೆ ಐಚ್ಛಿಕ ಕೋರ್ಸ್ ಆರಂಭಿಸಬೇಕು, ಸುಗಮ ವಹಿವಾಟಿಗೆ ಕಸ್ಟಮ್ಸ್ ವ್ಯವಸ್ಥೆ ಸರಳವಾಗಬೇಕು, ಪ್ಲಗ್ ಅಂಡ್ ಪ್ಲೇ ಮಾದರಿಯಲ್ಲಿ ಕೈಗಾರಿಕಾ ಟೌನ್‌ಶಿಪ್‌ಗಳು ನಿರ್ಮಾಣವಾಗಬೇಕು, ಆಧುನಿಕ ತಯಾರಿಕಾ ಸಂಸ್ಥೆ ಬರಬೇಕು, ದಕ್ಷಿಣ ಕೊರಿಯಾದಂತಹ ದೇಶಗಳಲ್ಲಿ ರಾಜ್ಯವು ನಿರ್ದಿಷ್ಟ ವ್ಯಾಪಾರ ಕೇಂದ್ರ ಪ್ರಾರಂಭಿಸಬೇಕು, ಪರಿಸರ ಮತ್ತು ಅರಣ್ಯ ಇಲಾಖೆಯಿಂದ ಅನುಮೋದನೆ ಪಡೆಯುವ ಪ್ರಕ್ರಿಯೆ ಸರಳವಾಗಬೇಕು ಎಂಬ ಸಲಹೆಗಳನ್ನು ಉದ್ಯಮಿಗಳು ನೀಡಿದ್ದಾರೆ. ಸರ್ಕಾರ ಇವೆಲ್ಲವನ್ನೂ ಸಕಾರಾತ್ಮಕವಾಗಿ ಸ್ವೀಕರಿಸಿ, ರಚನಾತ್ಮಕ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಸಚಿವರು ಭರವಸೆ ನೀಡಿದರು.

ಉತ್ಪಾದನಾ ಮಂಥನದಲ್ಲಿ ಆ್ಯಕ್ಸೆಲ್ ಕಂಪನಿಯ ಸ್ಥಾಪಕ ಪಾಲುದಾರ ಪ್ರಶಾಂತ್ ಪ್ರಕಾಶ್, ಏಕಸ್ ಕಂಪನಿಯ ಮುಖ್ಯಸ್ಥ ಅರವಿಂದ್ ಮೆಳ್ಳಿಗೇರಿ, ಡೆಲ್ಟಾ ಎಲೆಕ್ಟ್ರಾನಿಕ್ಸ್ ವ್ಯವಸ್ಥಾಪಕ ನಿರ್ದೇಶಕ ನಿರಂಜನ್ ನಾಯಕ್, ಅಪ್ಲೈಡ್ ಮೆಟೀರಿಯಲ್ಸ್ ಮುಖ್ಯಸ್ಥ ಅವಿನಾಶ ಅವುಲಾ, ಕ್ರೋನ್ಸ್ ವ್ಯವಸ್ಥಾಪಕ ನಿರ್ದೇಶಕ ಹರೀಶ್ ಹನಗೂಡು, ವಿಂಗ್ಸ್ ಆಗ್ರೊ ಸಿಇಒ ಹಿರೇನ್ ಸೋಧಾ, ಶಾಹಿ ಎಕ್ಸ್‌ಪೋರ್ಟ್ ಮುಖ್ಯಸ್ಥ ಪಿ.ಬಿ. ಆನಂದ್, ನಾರ್ ಬ್ರೆಮ್ಸ್ ಸಿಟಿಒ ಶ್ರೀಕಿರಣ್ ಕೋಸನಂ ಮತ್ತು ನ್ಯೂಸ್ಪೇಸ್ ಕಂಪನಿಯ ಸಹ ಸಂಸ್ಥಾಪಕ ದಿಲೀಪ್ ಛಾಬ್ರಿಯಾ ಪಾಲ್ಗೊಂಡಿದ್ದರು.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಸಿಇಒ ಡಾ.ಮಹೇಶ್ ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಉತ್ಪಾದನಾ ಮಂಥನ' ಸಮಾವೇಶದಲ್ಲಿ ಸಚಿವ ಎಂ.ಬಿ.ಪಾಟೀಲ ಮಾತನಾಡಿದರು. ಎಸ್‌.ಸೆಲ್ವಕುಮಾರ್, ಪ್ರಶಾಂತ್ ಪ್ರಕಾಶ್, ಗುಂಜನ್ ಕೃಷ್ಣ ಇದ್ದರು ಪ್ರಜಾವಾಣಿ ಚಿತ್ರ

₹100 ಕೋಟಿ ಮೌಲ್ಯದ 92 ನಿವೇಶನ ಮುಟ್ಟುಗೋಲು

ಒಂದನೇ ಪುಟದಿಂದ..

ದಿನೇಶ್ ಅವರ ಸುಪರ್ದಿಯಲ್ಲೇ ಈ ಅಕ್ರಮಗಳೆಲ್ಲವೂ ನಡೆದಿವೆ. ನಿವೇಶನ ಹಂಚಿಕೆ ಮಾಡಿದ್ದಕ್ಕೆ ಪ್ರತಿಯಾಗಿ ದಿನೇಶ್ ಅವರು ಬಂಗಲೆ, ಕೃಷಿ ಜಮೀನು, ವಾಣಿಜ್ಯ ಸಂಕೀರ್ಣ, ಐಷಾರಾಮಿ ಕಾರುಗಳು ಮತ್ತು ಹಣವನ್ನು ಉಡುಗೊರೆಯಾಗಿ ಪಡೆದಿದ್ದರು. ಆ ಹಣದಿಂದ ಮತ್ತಷ್ಟು ಆಸ್ತಿಗಳನ್ನು ಖರೀದಿಸಿದ್ದರು ಎಂದು ಹೇಳಿವೆ.

ಈ ರೀತಿ ಹಂಚಿಕೆ ಆಗಿದ್ದ ₹300 ಕೋಟಿ ಮೌಲ್ಯದ 160 ನಿವೇಶನಗಳನ್ನು ಇ.ಡಿ ಈ ಹಿಂದೆಯೇ ಮುಟ್ಟುಗೋಲು ಹಾಕಿಕೊಂಡಿತ್ತು. ಈಗ ಮತ್ತೆ 92 ಸೇರಿ ಒಟ್ಟು 252 ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಂಡಂತಾಗಿದೆ. ಈ ಆಸ್ತಿಗಳ ಒಟ್ಟು ಮಾರುಕಟ್ಟೆ ಮೌಲ್ಯ ₹400 ಕೋಟಿ ದಾಟುತ್ತದೆ ಎಂದು ಇ.ಡಿ ಮಾಹಿತಿ ನೀಡಿದೆ.

ಸೋಮವಾರ ಮುಟ್ಟುಗೋಲು ಹಾಕಿಕೊಳ್ಳಲಾದ ನಿವೇಶನಗಳಲ್ಲಿ ಬೆಂಗಳೂರು ಮತ್ತು ಮೈಸೂರಿನ ರಿಯಲ್ ಎಸ್ಟೇಟ್ ಉದ್ಯಮಿಗಳು, ಮೈಸೂರಿನ ಗೃಹ ನಿರ್ಮಾಣ ಸಹಕಾರ ಸಂಘ, ಮುಡಾ ಆಯುಕ್ತರಾಗಿದ್ದ ದಿನೇಶ್ ಸಂಬಂಧಿಗಳು ಮತ್ತು ಮುಡಾದ ಕೆಲ ಅಧಿಕಾರಿಗಳ ಕುಟುಂಬದವರ ಹೆಸರಿನಲ್ಲಿದ್ದ ನಿವೇಶನಗಳು ಸೇರಿವೆ. ತನಿಖೆ ಮುಂದುವರೆದಿದೆ ಎಂದು ಇ.ಡಿ ತಿಳಿಸಿದೆ.

ಆಪ್ತರಿಗೆ ನೂರಾರು ನಿವೇಶನ

‘ಮುಡಾದಿಂದ ನಿವೇಶನ ಪಡೆದಿದ್ದ, ಕೆಲ ಪ್ರಭಾವಿ ರಾಜಕಾರಣಿಗಳ ಸಂಬಂಧಿಗಳ ನಿವೇಶನಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ’ ಎಂದು ಇ.ಡಿ ಮೂಲಗಳು ತಿಳಿಸಿವೆ.

‘ರಾಜ್ಯ ಸರ್ಕಾರದಲ್ಲಿ ಪ್ರಭಾವಿ ಸ್ಥಾನ ಹೊಂದಿರುವ ಹಿರಿಯ ರಾಜಕಾರಣಿಯ, ಸಂಬಂಧಿಯೊಬ್ಬರಿಗೆ ಹಲವು ನಿವೇಶನಗಳು ಹಂಚಿಕೆಯಾಗಿವೆ. ಆ ವ್ಯಕ್ತಿಯ ಅರಿವಿಗೆ ಬರದೇ ಇರುವ ರೀತಿಯಲ್ಲಿ ಮತ್ತೊಬ್ಬರು ಅರ್ಜಿ ಸಲ್ಲಿಸಿ ನಿವೇಶನ ಪಡೆದುಕೊಂಡಿದ್ದಾರೆ’ ಎಂದು ಮೂಲಗಳು ಖಚಿತಪಡಿಸಿವೆ.

‘ವಿರೋಧ ಪಕ್ಷದ ಪ್ರಮುಖ ಸ್ಥಾನದಲ್ಲಿರುವ ಹಿರಿಯ ರಾಜಕಾರಣಿಯೊಬ್ಬರ ಆಪ್ತರು ಮತ್ತು ಸಂಬಂಧಿಗಳಿಗೆ ಹಂಚಿಕೆಯಾಗಿದ್ದ ಹಲವು ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈ ರಾಜಕಾರಣಿಯ ಸಂಬಂಧಿಗಳಿಗೆ ನೂರಾರು ನಿವೇಶನಗಳು ಹಂಚಿಕೆಯಾಗಿದ್ದು, ಅವು ಅಕ್ರಮವೇ ಅಥವಾ ಸಕ್ರಮವೇ ಎಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದೆ’ ಎಂದಿವೆ.

ಮುನಿರತ್ನ ವಿರುದ್ಧ ಬಲವಂತದ ಕ್ರಮ ಇಲ್ಲ: ಹೈಕೋರ್ಟ್

ಬೆಂಗಳೂರು: ‘ಮಧ್ಯವಯಸ್ಸಿನ ಮಹಿಳೆಯೊಬ್ಬರ ಮೇಲೆ ತನ್ನ ಸಹಚರರಿಂದ ಕಣ್ಣೆದುರೇ ಅತ್ಯಾಚಾರ ಮಾಡಿಸಿದ ಆರೋಪ ಹೊತ್ತ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ನ್ಯಾಯಾಲಯದ ಅನುಮತಿ ಇಲ್ಲದೇ ವಿರುದ್ಧ ಬಲವಂತದ ಕ್ರಮ ಕೈಗೊಳ್ಳುವುದಿಲ್ಲ’ ಎಂದು ರಾಜ್ಯ ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ತಮ್ಮ ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿದ್ದ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಆದೇಶವನ್ನು ಪ್ರಶ್ನಿಸಿ ಮುನಿರತ್ನ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಂತ್ರಸ್ತೆಯ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು, ‘ಮುನಿರತ್ನ ವಿರುದ್ಧ ಬೇರೆ ಬೇರೆ 16 ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ ಇದೊಂದು ಗುರುತರ ಆಪಾದನೆಯ ಪ್ರಕರಣ. ಹಾಗಾಗಿ, ಇದರಲ್ಲಿ ಅವರು ಮತ್ತು ಇತರ ಆರೋಪಿಗಳನ್ನು ಕಸ್ಟಡಿಗೆ ಪಡೆದು ತನಿಖೆ ನಡೆಸುವ ಅಗತ್ಯವಿದೆ. ಆರೋಪಿ ಅತ್ಯಂತ ಪ್ರಭಾವಿ ಜನಪ್ರತಿನಿಧಿಯಾಗಿದ್ದು, ಒಂದು ವೇಳೆ ಜಾಮೀನು ನೀಡಿದರೆ ಸಾಕ್ಷ್ಯ ನಾಶಪಡಿಸಲು ಪ್ರಯತ್ನಿಸುವ ಸಾಧ್ಯತೆ ಇದೆ’ ಎಂದು ಆತಂಕ ವ್ಯಕ್ತಪಡಿಸಿದರು.

ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ದೇಶದ ಜನಸಂಖ್ಯೆ 146 ಕೋಟಿ

ಒಂದನೇ ಪುಟದಿಂದ...

ದೇಶದಲ್ಲಿ ವೃದ್ಧರ ಜನಸಂಖ್ಯೆ (65 ವರ್ಷ ವಯಸ್ಸು ಮತ್ತು ಅದಕ್ಕಿಂತ ಮೇಲಿನವರು) ಪ್ರಸ್ತುತ ಶೇ 7ರಷ್ಟಿದ್ದು, ಮನುಷ್ಯನ ಸರಾಸರಿ ಜೀವಿತಾವಧಿ ಸುಧಾರಿಸಿದಂತೆ ಮುಂಬರುವ ದಶಕಗಳಲ್ಲಿ ವೃದ್ಧರ ಜನಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ. ಪ್ರಸ್ತುತ ಭಾರತದಲ್ಲಿ ಸರಾಸರಿ ಜೀವಿತಾವಧಿ ಪುರುಷರಿಗೆ 71 ವರ್ಷ ಮತ್ತು ಮಹಿಳೆಯರಿಗೆ 74 ವರ್ಷ ಎಂದು ವರದಿ ಅಂದಾಜಿಸಿದೆ.

‘ಆರ್ಥಿಕ ಮಿತಿ ದೊಡ್ಡ ತಡೆ’: ಭಾರತದಲ್ಲಿ ಹೆಚ್ಚು ಮಕ್ಕಳನ್ನು ಹೊಂದುವುದಕ್ಕೆ ಆರ್ಥಿಕ ಇತಿಮಿತಿಯು ಅಡೆತಡೆಯಾಗಿ ಪರಿಣಮಿಸಿದೆ ಎಂದು ಯುಎನ್‌ಎಫ್‌ಪಿಎ ನಡೆಸಿದ ಸಮೀಕ್ಷೆ ತಿಳಿಸಿದೆ.

ಭಾರತ ಸೇರಿದಂತೆ 14 ದೇಶಗಳಲ್ಲಿ ಆನ್‌ಲೈನ್ ಮೂಲಕ ಸಮೀಕ್ಷೆ ನಡೆಸಲಾಗಿತ್ತು. ಇದರಲ್ಲಿ ಪಾಲ್ಗೊಂಡ 14,000 ಜನರಲ್ಲಿ ಭಾರತದ 1,048 ಮಂದಿ ಇದ್ದರು. ‘ನಾವು ಬಯಸಿದಷ್ಟು ಮಕ್ಕಳನ್ನು ಹೊಂದುವುದಕ್ಕೆ ಆರ್ಥಿಕ ಇತಿಮಿತಿ ಅಡ್ಡಿಯಾಗಿ ಪರಿಣಮಿಸಿದೆ’ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡ ಭಾರತೀಯರಲ್ಲಿ ಶೇ 38 ಮಂದಿ ಹೇಳಿದ್ದಾರೆ.

ಮತ್ತೊಮ್ಮೆ ಜಾತಿ ಜನಗಣತಿ

ಒಂದನೇ ಪುಟದಿಂದ....

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಕರ್ನಾಟಕ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಕೂಡ ಇದ್ದರು.

‘ಕರ್ನಾಟಕದಲ್ಲಿ ಸಮೀಕ್ಷೆಯು ವೈಜ್ಞಾನಿಕ, ತರ್ಕಬದ್ಧ ಹಾಗೂ ವ್ಯವಸ್ಥಿತವಾಗಿ ನಡೆದಿದ್ದು, ವರದಿಯನ್ನು ಮೊದಲು ಅಂಗೀಕರಿಸಿ. ಸಂದೇಹ, ಅಪಸ್ವರಗಳಿಗೆ ಅವಕಾಶವೇ ಇಲ್ಲದಂತೆ ಸಮುದಾಯಗಳ ಬೇಡಿಕೆಗೆ ಅನುಸಾರ ಮರುಸಮೀಕ್ಷೆ ನಡೆಸಿ’ ಎಂದು ವರಿಷ್ಠರು, ಸಿದ್ದರಾಮಯ್ಯ ಅವರಿಗೆ ಸೂಚಿಸಿದರು ಎಂದು ಗೊತ್ತಾಗಿದೆ.

ಸಭೆಯ ಬಳಿಕ ಮಾತನಾಡಿದ ಕೆ.ಸಿ. ವೇಣುಗೋಪಾಲ್, ‘ವಿಶೇಷ ಸಂಪುಟ ಸಭೆಯಲ್ಲಿ ಜಾತಿ ಸಮೀಕ್ಷೆ ಬಗ್ಗೆ ಸರ್ಕಾರ ಚರ್ಚಿಸಲಿದೆ. 10 ವರ್ಷಗಳ ಹಿಂದೆ ನಡೆದ ವರದಿಗೆ ಸಭೆ ತಾತ್ವಿಕವಾಗಿ ಒಪ್ಪಿಗೆ ನೀಡಲಿದೆ. ಆದರೆ, ಜಾತಿ ಜನಗಣತಿಯ ಬಗ್ಗೆ ಕೆಲವು ಜಾತಿಯ ಜನರಿಗೆ ಅನುಮಾನವಿದೆ. ನಿಗದಿತ ಸಮಯ ವಿಧಿಸಿ ಮತ್ತೊಮ್ಮೆ ಗಣತಿ ನಡೆಸುವಂತೆ ಸರ್ಕಾರಕ್ಕೆ ಸಲಹೆ ನೀಡಲಾಗಿದೆ’ ಎಂದರು.

‘ಜಾತಿಗಣತಿ ವರದಿ ಬಗ್ಗೆ ಅಪಸ್ವರ ಎದ್ದಿರುವ ಕಾರಣ ಈಗಾಗಲೇ ಸಲ್ಲಿಕೆಯಾಗಿರುವ ಜಾತಿಗಣತಿ ವರದಿಗೆ ತಾತ್ವಿಕ ಒಪ್ಪಿಗೆ ನೀಡಿ, ಸಮೀಕ್ಷೆಗೆ ಮರುಗಣತಿ ನಡೆಸಲು ವರಿಷ್ಠರ ಜೊತೆಗಿನ ಸಭೆಯಲ್ಲಿ ನಿರ್ಧರಿಸಲಾಗಿದೆ‘ ಎಂದು ಸಿದ್ದರಾಮಯ್ಯ ತಿಳಿಸಿದರು.

‘ಕರ್ನಾಟಕದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳ ಬಗ್ಗೆ ವರಿಷ್ಠರೊಂದಿಗೆ ಚರ್ಚಿಸಲಾಗಿದೆ. ವಿವಿಧ ಜಾತಿ, ಸಮುದಾಯಗಳ ಮುಖಂಡರು, ಸಂಘ–ಸಂಸ್ಥೆಗಳು, ಮಠಾಧೀಶರು, ಸಚಿವರು ಜಾತಿಗಣತಿ ವರದಿ ಬಗ್ಗೆ ಅಪಸ್ವರ ಎತ್ತಿರುವ ಬಗ್ಗೆಯೂ ವಿಚಾರ ವಿನಿಮಯ ನಡೆಸಲಾಗಿದೆ. ಈಗಾಗಲೇ ಸಲ್ಲಿಕೆಯಾಗಿರುವ ಜಾತಿ ಗಣತಿಯ ದತ್ತಾಂಶ 10 ವರ್ಷ ಹಳೆಯದಾಗಿರುವುದರಿಂದ ಮರುಗಣತಿ ಮಾಡಲು ತೀರ್ಮಾನಿಸಲಾಗಿದೆ. ಸದ್ಯ ನಡೆಯುತ್ತಿರುವ ಪರಿಶಿಷ್ಟ ಜಾತಿಗಳ ಜನಗಣತಿಯಂತೆ, ಹೊಸತಾಗಿ ಇತರೆ ಜಾತಿಗಳ ಸಮೀಕ್ಷೆಯನ್ನು 90 ದಿನದೊಳಗೆ ಪೂರ್ಣಗೊಳಿಸಿ ವರದಿ ನೀಡಬೇಕಾಗಿದೆ’ ಎಂದರು.

ಡಿ.ಕೆ. ಶಿವಕುಮಾರ್ ಮಾತನಾಡಿ, ‘ಮುಖ್ಯಮಂತ್ರಿ ಮತ್ತು ನನ್ನನ್ನು ಕರೆಸಿ ಪಕ್ಷ ಸಂಘಟನೆ ವಿಚಾರವಾಗಿ, ರಾಜ್ಯ ರಾಜಕಾರಣ ಹಾಗೂ ಇತ್ತೀಚಿನ ಕಾಲ್ತುಳಿತ ಪ್ರಕರಣದ ಬಗ್ಗೆ ವರಿಷ್ಠರು ಚರ್ಚೆ ನಡೆಸಿದರು. ಈಗಾಗಲೇ ನಡೆದಿರುವ ಜಾತಿ ಗಣತಿಗೆ ವಿರೋಧ ವ್ಯಕ್ತವಾಗಿರುವುದರಿಂದ ವರಿಷ್ಠರ ನಿರ್ದೇಶನದಂತೆ, ಮತ್ತೊಮ್ಮೆ ಮನೆ ಮನೆ ಸಮೀಕ್ಷೆ ನಡೆಸಲಾಗುವುದು. ಅಲ್ಲದೆ, ಆನ್‌ಲೈನ್ ಮೂಲಕವೂ ಮಾಹಿತಿ ನೀಡಲು ಅವಕಾಶ ನೀಡಲಾಗುವುದು. ಈ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗುವುದು’ ಎಂದು ಹೇಳಿದರು.

‘ಈಗಾಗಲೇ ನಡೆದಿರುವ ಜಾತಿ ಗಣತಿ ವಿಚಾರದಲ್ಲಿ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲು ನಿರ್ಧರಿಸಿದ್ದೆವು. ಈ ಜಾತಿ ಗಣತಿ ವಿಚಾರವಾಗಿ ವರಿಷ್ಠರ ಜತೆ ಪಕ್ಷದ ಸಂಸದರು, ಶಾಸಕರು ಮತ್ತು ಕೆಲವು ಸಂಘ–ಸಂಸ್ಥೆಗಳ ಪ್ರಮುಖರು ಚರ್ಚಿಸಿದ್ದಾರೆ. ಕೆಲವು ಸಮುದಾಯ ಹಾಗೂ ಸಂಘಟನೆಗಳಿಂದ ಅಪಸ್ವರ ಬಂದಿರುವ ಕಾರಣ, ಎಲ್ಲರಿಗೂ ನ್ಯಾಯಬದ್ಧವಾಗಿ ಅವಕಾಶ ಕಲ್ಪಿಸಿಕೊಡಬೇಕೆಂದು ವರಿಷ್ಠರು ನಿರ್ದೇಶನ ನೀಡಿದ್ದಾರೆ. ಹೊಸತಾಗಿ ನಡೆಸುವ ಜಾತಿ ಗಣತಿಯಲ್ಲಿ ಎಲ್ಲರೂ ಒಳಗೊಳ್ಳಬೇಕು, ಯಾರನ್ನೂ ಬಿಡಬಾರದೆಂದು ತೀರ್ಮಾನಿಸಲಾಗಿದೆ. ಯಾರ ಅಪಸ್ವರವೂ ಇಲ್ಲದಂತೆ ನೋಡಿಕೊಳ್ಳಲು ಮುಖ್ಯಮಂತ್ರಿಗೆ ವರಿಷ್ಠರು ನಿರ್ದೇಶಿಸಿದ್ದಾರೆ’ ಎಂದರು.

‘ಜಾತಿ ಗಣತಿಯಲ್ಲಿರುವ ಅಂಕಿ ಅಂಶಗಳ ಬಗ್ಗೆ ಆಕ್ಷೇಪಿಸಿರುವ ಸಮುದಾಯಗಳಿಗೆ ಸ್ಪಷ್ಟನೆ ನೀಡಲು ಅವಕಾಶ ಮಾಡಿಕೊಡಲು ತೀರ್ಮಾನಿಸಲಾಗಿದೆ. ಎಲ್ಲರಿಗೂ ನ್ಯಾಯ ಒದಗಿಸಿಕೊಡಲಾಗುವುದು. ನಮ್ಮ ರಾಜ್ಯದವರು ಎಲ್ಲೇ ಇದ್ದರೂ ಈ ಬಗ್ಗೆ ಆನ್‌ಲೈನ್ ಮೂಲಕ ಮಾಹಿತಿ ನೀಡಲು ಅವಕಾಶ ಕಲ್ಪಿಸಲಾಗುವುದು. ಸಮಾಜದ ಮುಖಂಡರು, ಮಠಾಧೀಶರು ಇದಕ್ಕೆ ಸಹಕರಿಸಬೇಕು’ ಎಂದೂ ಶಿವಕುಮಾರ್ ಮನವಿ ಮಾಡಿದರು.

ನಾಮನಿರ್ದೇಶನ: ಮರುಪರಿಶೀಲನೆ

ಒಂದನೇ ಪುಟದಿಂದ....

‘ಪರಿಷತ್‌ಗೆ ನಾಮನಿರ್ದೇಶನ ಕುರಿತಂತೆ ವರಿಷ್ಠರ ಜೊತೆ ಚರ್ಚೆ ಮಾಡಿದ್ದೇವೆ. ಈ ವಿಚಾರವಾಗಿ ಹೈಕಮಾಂಡ್ ಪರಿಶೀಲಿಸಿ, ಮುಖ್ಯಮಂತ್ರಿಗೆ ಮಾಹಿತಿ ನೀಡಲಿದೆ’ ಎಂದು ಶಿವಕುಮಾರ್ ತಿಳಿಸಿದರು.

‘ಸಚಿವ ಸಂಪುಟ ಪುನರ್‌ರಚನೆ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ’ ಎಂದು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ತಿಳಿಸಿದರು.

‘ಕ್ಷಮೆ ಕೇಳಲಿ’

ಬೆಂಗಳೂರು: ‘ರಾಜ್ಯ ಸರ್ಕಾರ ತಯಾರಿಸಿದ ಜಾತಿ ಗಣತಿ (ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ) ವರದಿಯನ್ನು ಖುದ್ದು ಕಾಂಗ್ರೆಸ್ ಹೈಕಮಾಂಡ್ ಕಿತ್ತು ಬಿಸಾಕಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಹಾಗೂ ಶಾಸಕ ವಿ.ಸುನಿಲ್‌ಕುಮಾರ್ ಟೀಕಿಸಿದ್ದಾರೆ.

‘₹150 ಕೋಟಿ ವೆಚ್ಚ ಮಾಡಿ ತಯಾರಿಸಿದ ಈ ವರದಿ ರಾಜ್ಯದ ತೆರಿಗೆದಾರರಿಗೆ ಮಾಡಿದ ಮೋಸ. ಅಲ್ಲದೇ, ಹಿಂದುಳಿದ ಹಾಗೂ ಶೋಷಿತ ಸಮುದಾಯಕ್ಕೆ ಮಾಡಿದ ಮಹಾಮೋಸ’ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ಜಾತಿಗಣತಿ ವರದಿಯ ದತ್ತಾಂಶದಲ್ಲಿ ಲೋಪವಿದೆ. ಇದನ್ನು ಪುನರ್‌ಪರಿಶೀಲಿಸಬೇಕು ಎಂದು ಬಿಜೆಪಿ ಆಗ್ರಹಿಸಿತ್ತು. ಆದರೆ, ಸಿದ್ದರಾಮಯ್ಯ ಅವರು ಇಂಥ ಸೂಕ್ಷ್ಮ ವಿಚಾರದಲ್ಲೂ ತಮ್ಮ ಎಂದಿನ ಉಡಾಫೆ ಧೋರಣೆ ಮುಂದುವರಿಸಿದ್ದರು. ಆದ್ದರಿಂದ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಪಕ್ಷ ರಾಜ್ಯದ ಜನತೆಯ ಕ್ಷಮೆ ಯಾಚಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಡಬ್ಲ್ಯುಟಿಸಿ ಫೈನಲ್ ಇಂದಿನಿಂದ • ಚೋಕರ್ಸ್ ಪಟ್ಟ ಕಳಚಿಕೊಳ್ಳುವುದೇ ದಕ್ಷಿಣ ಆಫ್ರಿಕಾ?

ಆಸ್ಟ್ರೇಲಿಯಾಕ್ಕೆ ಹರಿಣ ಪಡೆ ಸವಾಲು

ಲಂಡನ್ (ಎಪಿ/ಎಎಫ್‌ಪಿ): ಜಾಗತಿಕ ಮಟ್ಟದ ಪ್ರಮುಖ ಕ್ರಿಕೆಟ್ ಟೂರ್ನಿಗಳ ಫೈನಲ್ ನಡೆದಾಗಲೆಲ್ಲಾ ಆಸ್ಟ್ರೇಲಿಯಾ ತನ್ನ ತಾಕತ್ತನ್ನು ತೋರಿಸುತ್ತ ಬಂದಿದೆ. ಅದು ಚುಟುಕು ಕ್ರಿಕೆಟ್ ಇರಲಿ, ಏಕದಿನ ಮಾದರಿಯ ವಿಶ್ವಕಪ್ ಇರಲಿ ಅಥವಾ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಇರಲಿ ಆಸ್ಟ್ರೇಲಿಯಾದ ಪ್ರಾಬಲ್ಯ ಎದ್ದುಕಂಡಿದೆ.

ಕ್ರಿಕೆಟ್‌ನ ತವರು ಲಾರ್ಡ್ಸ್‌ನಲ್ಲಿ ಬುಧವಾರ ದಕ್ಷಿಣ ಆಫ್ರಿಕಾ ವಿರುದ್ಧ ಆರಂಭವಾಗಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಮೂರನೇ ಆವೃತ್ತಿಯ ಫೈನಲ್‌ನಲ್ಲೂ ಪ್ಯಾಟ್ ಕಮಿನ್ಸ್ ನಾಯಕತ್ವದ ತಂಡವೇ ಫೇವರಿಟ್ ತಂಡ ಎನಿಸಿದೆ.

ದೊಡ್ಡ ವೇದಿಕೆಗಳಲ್ಲಿ ಆಸ್ಟ್ರೇಲಿಯಾ ಪ್ರಾಬಲ್ಯ ಒಂದೆಡೆಯಾದರೆ, ದಕ್ಷಿಣ ಆಫ್ರಿಕಾ ತಂಡ ನಿರ್ಣಾಯಕ ಪಂದ್ಯಗಳಲ್ಲಿ ಒತ್ತಡಕ್ಕೆ ಒಳಗಾಗಿ 'ಚೋಕರ್ಸ್' ಎನಿಸಿಕೊಂಡಿದೆ. ಈ ತಂಡ ಕೆಲವು ಬಾರಿ ಪ್ರಶಸ್ತಿಯ ಸಮೀಪ ಬಂದು ಎಡವಿದೆ.

ಆದರೆ ಈ ಬಾರಿ ಅನುಭವಿಗಳಿಂದ ಕೂಡಿರುವ ಹರಿಣಗಳ ತಂಡವನ್ನು ಲಘುವಾಗಿ ಪರಿಗಣಿಸುವಂತಿಲ್ಲ. ಗೆಲ್ಲಬೇಕೆಂಬ ಕೆಚ್ಚು, ಒಬ್ಬರಿಗೊಬ್ಬರು ಧೈರ್ಯತುಂಬುವ ದೃಶ್ಯಗಳು ಈ ಬಾರಿ ತಂಡದಲ್ಲಿ ಢಾಳಾಗಿ ಕಾಣಿಸಿವೆ.

ಈ ಹಿಂದಿನ- 2023ರ ಫೈನಲ್‌ನಲ್ಲಿ ಅನುಭವಿಗಳಿಂದ ಕೂಡಿದ ಆಸ್ಟ್ರೇಲಿಯಾ ತಂಡ 209 ರನ್‌ಗಳಿಂದ ಭಾರತ ತಂಡವನ್ನು ಸದೆಬಡಿದಿತ್ತು. ಆ ತಂಡದ 11 ಮಂದಿಯಲ್ಲಿ 10 ಮಂದಿ ಈ ತಂಡದಲ್ಲೂ ಇದ್ದಾರೆ. ಟೆಸ್ಟ್‌ನಿಂದ ನಿವೃತ್ತರಾಗಿರುವ ಆರಂಭಿಕ ಆಟಗಾರ ಡೇವಿಡ್ ವಾರ್ನರ್ ಮಾತ್ರ ಈ ತಂಡದಲ್ಲಿಲ್ಲ.



ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಟ್ರೋಫಿಯೊಂದಿಗೆ ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಮತ್ತು ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ

ಐಸಿಸಿ ಎಕ್ಸ್ ಚಿತ್ರ

₹30.80 ಕೋಟಿ ವಿಶ್ವ ಚಾಂಪಿಯನ್‌ಷಿಪ್ ಗೆದ್ದ ತಂಡ ಪಡೆಯುವ ಬಹುಮಾನ ಮೊತ್ತ

₹18.48 ಕೋಟಿ ರನ್ನರ್ಸ್ ಅಪ್ ಆಗುವ ತಂಡಕ್ಕೆ ದೊರೆಯುವ ಬಹುಮಾನ

ಗಾಯಾಳಾಗಿದ್ದ ಜೋಶ್ ಹ್ಯಾಜಲ್‌ವುಡ್ ಚೇತರಿಸಿಕೊಂಡಿದ್ದು, ಅವರು ಸ್ಕಾಟ್ ಬೋಲ್ಯಾಂಡ್ ಬದಲು ಸ್ಥಾನ ಪಡೆದಿದ್ದಾರೆ. ಹ್ಯಾಜಲ್‌ವುಡ್ ಭುಜದ ಗಾಯದಿಂದ ಚೇತರಿಸಿಕೊಂಡಿದ್ದು, ಇತ್ತೀಚೆಗೆ ಆರ್‌ಸಿಬಿ ತಂಡ ಮೊದಲ ಬಾರಿ ಐಪಿಎಲ್ ಪ್ರಶಸ್ತಿ ಗೆಲ್ಲುವಲ್ಲಿ ಕೊಡುಗೆ ನೀಡಿದ್ದರು. ಲೀಗ್‌ನಲ್ಲಿ 22 ವಿಕೆಟ್ ಕಬಳಿಸಿದ್ದರು.

ವಾರ್ನರ್ ಬದಲು ಲಾಬುಶೇನ್ ಅವರು ಉಸ್ಮಾನ್ ಖ್ವಾಜಾ ಜೊತೆ ಇನಿಂಗ್ಸ್ ಆರಂಭಿಸಲಿದ್ದಾರೆ ಎಂದು ಪ್ಯಾಟ್ ಕಮಿನ್ಸ್ ಮಂಗಳವಾರ ಪ್ರಕಟಿಸಿದ್ದಾರೆ. 2016ರ ನಂತರ ಒಮ್ಮೆ ಮಾತ್ರ ಲಾಬುಶೇನ್ ಇನಿಂಗ್ಸ್ ಆರಂಭಿಸಿದ್ದಾರೆ. ಅವರ ಲಯ ಮೊದಲಿನ ರೀತಿಯಲ್ಲಿಲ್ಲ.

ಬಲಾಬಲ			
101 ಒಟ್ಟು ಪಂದ್ಯ	54 ಆಸ್ಟ್ರೇಲಿಯಾ ಗೆಲುವು	26 ದಕ್ಷಿಣ ಆಫ್ರಿಕಾ ಗೆಲುವು	21 ಡ್ರಾ

2023–25ರ ಡಬ್ಲ್ಯುಟಿಸಿ ಅಂಕಪಟ್ಟಿ (ಫೈನಲ್‌ವರೆಗೆ)

ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಅಂಕ	ಗೆಲುವಿನ ಸರಾಸರಿ
ದಕ್ಷಿಣ ಆಫ್ರಿಕಾ	12	8	3	1	100	69.44%
ಆಸ್ಟ್ರೇಲಿಯಾ	19	13	4	2	154	67.54%

17 ತಿಂಗಳ ಹಿಂದೆ ವಾರ್ನರ್ ನಿವೃತ್ತರಾದ ಬಳಿಕ ಆ ಸ್ಥಾನಕ್ಕೆ ಕಾಯಂ ಆದ ಆಟಗಾರನನ್ನು ಕಂಡುಕೊಳ್ಳಲು ಕಾಂಗರೂ ಪಡೆಗೆ ಸಾಧ್ಯವಾಗಿಲ್ಲ.

ಆದರೆ ಬೌಲಿಂಗ್ ಉತ್ತಮವಾಗಿದೆ. ಆಸ್ಟ್ರೇಲಿಯಾ ಪರ ಸಾರ್ವಕಾಲಿಕ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್‌ಗಳಲ್ಲಿ ನಾಲ್ವರು ಈ ತಂಡದಲ್ಲಿದ್ದಾರೆ. ನೇಥನ್ ಲಯನ್ (553), ಮಿಚೆಲ್ ಸ್ಟಾರ್ಕ್ (382), ಪ್ಯಾಟ್ ಕಮಿನ್ಸ್ (294), ಹ್ಯಾಜಲ್‌ವುಡ್ (279) ಈ ನಾಲ್ವರು.

ಸ್ಟೀವ್ ಸ್ಮಿತ್ ತಮ್ಮ ಕೊನೆಯ ಐದು ಟೆಸ್ಟ್‌ಗಳಲ್ಲಿ ನಾಲ್ಕು ಶತಕ ಬಾರಿಸಿ ಒಳ್ಳೆಯ ಲಯದಲ್ಲಿದ್ದಾರೆ. ಟೆಸ್ಟ್‌ನಲ್ಲಿ 10 ಸಹಸ್ರ ರನ್‌ಗಳ ಮೈಲಿಗಲ್ಲು ದಾಟಿದ್ದಾರೆ. ಲಾರ್ಡ್ಸ್‌ನಲ್ಲಿ ಅವರು 58ರ ಸರಾಸರಿಯಲ್ಲಿ ರನ್ ಗಳಿಸಿದ್ದಾರೆ.

ಖ್ವಾಜಾ ಅವರು ದಕ್ಷಿಣ ಆಫ್ರಿಕಾದ ಪ್ರಮುಖ ವೇಗಿ ರಬಾಡ ಬೌಲಿಂಗ್‌ನಲ್ಲಿ 10 ಬಾರಿ ಔಟ್ ಆಗಿದ್ದಾರೆ. 327 ವಿಕೆಟ್ ಪಡೆದಿರುವ ರಬಾಡ ಅವರಿಗೆ, ದಕ್ಷಿಣ ಆಫ್ರಿಕಾದ ಅಗ್ರ ಬೌಲರ್‌ಗಳ ಪಟ್ಟಿಯಲ್ಲಿ ಅಲನ್ ಡೊನಾಲ್ಡ್ ಅವರನ್ನು ಹಿಂದೆಹಾಕಿ ನಾಲ್ಕನೇ ಸ್ಥಾನ ಪಡೆಯಬೇಕಾದರೆ 3 ವಿಕೆಟ್‌ಗಳಷ್ಟೇ ಬೇಕಿವೆ. ರಬಾಡ ಅವರಿಗೆ ಮಾರ್ಕೊ ಯಾನ್ಸೆನ್ (ಡಬ್ಲ್ಯುಟಿಸಿಯ 6 ಪಂದ್ಯಗಳಿಂದ 29 ವಿಕೆಟ್) ಉತ್ತಮ ಬೆಂಬಲ ನೀಡುತ್ತಿದ್ದಾರೆ. ಲುಂಗಿ ಗಿಡಿ ತಂಡದ ಮೂರನೇ ವೇಗಿಯಾಗಿ ಸ್ಥಾನ ಪಡೆದಿದ್ದಾರೆ.

ಏಡನ್ ಮರ್ಕರಂ ಹಾಗೂ ರಿಯಾನ್ ರಿಕೆಲ್ಟನ್ ಅವರು ದಕ್ಷಿಣ ಆಫ್ರಿಕಾದ ಇನಿಂಗ್ಸ್ ಆರಂಭಿಸಲಿದ್ದಾರೆ. ನಾಯಕ ಬವುಮಾ ನಾಲ್ಕನೇ ಕ್ರಮಾಂಕದಲ್ಲಿ ಆಡಲಿದ್ದಾರೆ.

ತಂಡಗಳು: ಆಸ್ಟ್ರೇಲಿಯಾ: ಉಸ್ಮಾನ್ ಖ್ವಾಜಾ, ಮಾರ್ನಸ್ ಲಾಬುಶೇನ್, ಕ್ಯಾಮರೂನ್ ಗ್ರೀನ್, ಸ್ಟೀವ್ ಸ್ಮಿತ್, ಟ್ರಾವಿಸ್ ಹೆಡ್, ಬ್ಯೂ ವೆಬ್‌ಸ್ಟರ್ ಅಲೆಕ್ಸ್ ಕ್ಯಾರಿ (ವಿಕೆಟ್ ಕೀಪರ್), ಪ್ಯಾಟ್ ಕಮಿನ್ಸ್ (ನಾಯಕ), ಮಿಚೆಲ್ ಸ್ಟಾರ್ಕ್, ನೇಥನ್ ಲಯನ್, ಜೋಶ್ ಹ್ಯಾಜಲ್‌ವುಡ್.

ದಕ್ಷಿಣ ಆಫ್ರಿಕಾ: ಏಡನ್ ಮರ್ಕರಂ, ರಿಯಾನ್ ರಿಕೆಲ್ಟನ್, ವಿಯಾನ್ ಮುಲ್ಡರ್, ತೆಂಬಾ ಬವುಮಾ (ನಾಯಕ), ಟ್ರಿಸ್ಟನ್ ಸ್ಟಬ್ಸ್, ಡೇವಿಡ್ ಬೆಡಿಂಗಮ್, ಕೈಲ್ ವೆರಿಯನ್, ಮಾರ್ಕೊ ಯಾನ್ಸನ್, ಕೇಶವ ಮಹಾರಾಜ್, ಕಗಿಸೊ ರಬಾಡ, ಲುಂಗಿ ಗಿಡಿ.

ಪಂದ್ಯ ಆರಂಭ: ಮಧ್ಯಾಹ್ನ 3.00
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಹಾಟ್‌ಸ್ಟಾರ್.

ಹರ್ಮನ್ ಪಡೆಗೆ ಗೆಲುವಿನ ತವಕ

ಪ್ರೊ ಲೀಗ್: ಭಾರತಕ್ಕೆ ಇಂದು ಅರ್ಜೆಂಟೀನಾ ಎದುರಾಳಿ

ಆಮ್‌ಸ್ಟಲ್ವೀನ್ (ನೆದರ್ಲೆಂಡ್ಸ್) (ಪಿಟಿಐ): ಒಲಿಂಪಿಕ್ ಚಾಂಪಿಯನ್ ನೆದರ್ಲೆಂಡ್ಸ್ ವಿರುದ್ಧ ಸತತ ಎರಡು ಪಂದ್ಯಗಳಲ್ಲಿ ಸೋತಿರುವ ಭಾರತ ಪುರುಷರ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಬುಧವಾರ ಅರ್ಜೆಂಟೀನಾ ತಂಡವನ್ನು ಎದುರಿಸಲಿದೆ.

ಹರ್ಮನ್‌ಪ್ರೀತ್ ಸಿಂಗ್ ಬಳಗವು ಯುರೋಪಿಯನ್ ಲೆಗ್‌ನ ಮೊದಲೆರಡು ಪಂದ್ಯಗಳಲ್ಲಿ ಕ್ರಮವಾಗಿ 1-2 ಮತ್ತು 2-3ರಿಂದ ಆತಿಥೇಯ ತಂಡದ ವಿರುದ್ಧ ಎಡವಿತ್ತು. ತಂಡವು ಈ ಪಂದ್ಯಗಳಲ್ಲಿ ಎಸಗಿದ ತಪ್ಪನ್ನು ತಿದ್ದಿಕೊಂಡು ಗೆಲುವಿನ ಲಯಕ್ಕೆ ಮರಳುವ ವಿಶ್ವಾಸದಲ್ಲಿದೆ.

ಸೋಮವಾರ ನಡೆದ ಪಂದ್ಯದಲ್ಲಿ ಭಾರತಕ್ಕೆ ಬರೋಬ್ಬರಿ ಒಂಬತ್ತು ಪೆನಾಲ್ಟಿ ಕಾರ್ನರ್ ಅವಕಾಶ ದೊರಕಿತ್ತು. ಆದರೂ ಕೇವಲ ಒಂದನ್ನು ಮಾತ್ರ ಗೋಲಾಗಿ ಪರಿವರ್ತಿಸುವಲ್ಲಿ ಭಾರತದ ಆಟಗಾರರು ಯಶಸ್ವಿಯಾದರು. ಪಂದ್ಯ ಮುಕ್ತಾಯಕ್ಕೆ ಮೂರು ನಿಮಿಷ ಇರುವಂತೆ ಡಚ್ ಆಟಗಾರರು ಭಾರತದ ರಕ್ಷಣಾವ್ಯೂಹವನ್ನು ಭೇದಿಸಿ, ಗೆಲುವಿನ ಗೋಲು ದಾಖಲಿಸಿ ಸಂಭ್ರಮಿಸಿದ್ದರು.



ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್

ಭಾರತ ತಂಡಕ್ಕೆ ಟೂರ್ನಿಯಲ್ಲಿ ಇನ್ನೂ ಆರು ಪಂದ್ಯಗಳು ಬಾಕಿ ಉಳಿದಿವೆ. ಈತನಕ 10 ಪಂದ್ಯಗಳಲ್ಲಿ ಐದು ಗೆಲುವು ಸಾಧಿಸಿ 15 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್‌ಗೆ ಅರ್ಹತೆ ಪಡೆಯುವ ದೃಷ್ಟಿಯಿಂದ ಉಳಿದ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡುವ ಒತ್ತಡ ಹರ್ಮನ್ ಬಳಗದ ಮೇಲಿದೆ. ಅರ್ಜೆಂಟೀನಾ ತಂಡವು 10 ಪಂದ್ಯಗಳಲ್ಲಿ 12 ಅಂಕಗಳೊಂದಿಗೆ ಏಳನೇ ಸ್ಥಾನದಲ್ಲಿದೆ.

'ಅರ್ಜೆಂಟೀನಾ ವಿರುದ್ಧದ ಪಂದ್ಯದಲ್ಲಿ ನಾವು ಎದುರಿಸಬೇಕಾದ ಸವಾಲುಗಳ ಬಗ್ಗೆ ಅರಿವಿದೆ. ಎದುರಾಳಿ ತಂಡ ಬಲಿಷ್ಠವಾಗಿದ್ದು, ಉತ್ತಮ ಆಟದ ಪ್ರದರ್ಶನಕ್ಕೆ ಸಿದ್ಧರಾಗಿದ್ದೇವೆ' ಎಂದು ಹರ್ಮನ್‌ಪ್ರೀತ್ ಹೇಳಿದ್ದಾರೆ.

ಪಂದ್ಯ ಆರಂಭ: ಸಂಜೆ 6.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಎಂಎನ್‌ಕೆ ರಾವ್ ಪಾರ್ಕ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋನಕ್ ಅವರ ಆಕರ್ಷಕ ಆಟದ ಹೊರತಾಗಿಯೂ ಮೈಸೂರು ಜಿಲ್ಲೆ ಎ ತಂಡವು ಡಿ.ಎನ್. ರಾಜಣ್ಣ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ (18 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗದ ಪಂದ್ಯದಲ್ಲಿ 72-93ರಿಂದ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡಕ್ಕೆ ಮಣಿಯಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಮಂಗಳವಾರ ನಡೆದ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಮೈಸೂರು ಜಿಲ್ಲೆ ಎ ತಂಡದ ಪರ ರೋನಕ್ 40 ಅಂಕ ಗಳಿಸಿ, ಗಮನ ಸೆಳೆದರು.

ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡದ ಪರ ಅವಿನಾಶ್ 31 ಅಂಕ ಹಾಗೂ ಯಶಸ್ 18 ಅಂಕಗಳನ್ನು ಕಲೆಹಾಕಿದರು.

ಫಲಿತಾಂಶ: ರೌಂಡ್ ರಾಬಿನ್ ಲೀಗ್: **ಬಾಲಕರು:** ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡ 93-72ರಿಂದ ಮೈಸೂರು ಜಿಲ್ಲೆ ಎ ವಿರುದ್ಧ; ಹೂಪ್ಸ್ 7 ಬಿ.ಸಿ ತಂಡ 79-50ರಿಂದ ಎಚ್‌ಬಿಆರ್ ಬಿ.ಸಿ ತಂಡದ ವಿರುದ್ಧ ಗೆಲುವು ಸಾಧಿಸಿದವು.

ಬಾಲಕಿಯರು: ಮಂಡ್ಯ ಜಿಲ್ಲಾ ತಂಡವು 61-54ರಿಂದ ಬೆಂಗಳೂರು ವ್ಯಾನ್‌ಗಾರ್ಡ್ಸ್ ತಂಡದ ಎದುರು; ಮೈಸೂರು ಜಿಲ್ಲೆ ಎ ತಂಡ 41-25 ರಿಂದ ವಿವೇಕ್ಸ್ ಬಿ.ಸಿ ತಂಡದ ಎದುರು ಜಯ ಸಾಧಿಸಿದವು.

ಮೈಸೂರು ರೇಸ್

ನಾಟಿ ಪ್ಯಾಟನ್ ಗೆಲ್ಲುವ ನಿರೀಕ್ಷೆ

ಡಾ.ಎನ್.ಎಂ.ಶ್ರೀನಿವಾಸ್ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾಟಿ ಪ್ಯಾಟನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಬಿಡದಿ ಪ್ಲೇಟ್; 1600 ಮೀ. ಸ್ಟಾರ್ ಈಸ್ ಬ್ಯಾಕ್ 2, ಬ್ರಾಕ್‌ಸ್ಟನ್ 6, ಸೇಪಿಯೆಂಟ್ 5
2. ಅರಕಲಗೂಡು ಪ್ಲೇಟ್; 1200 ಮೀ. ಕೊಸೆಟ್ 7, ಮೈಂಡ್ ಗೇಮ್ಸ್ 3, ಏರಿಯನ್ 5
3. ಚೈತನ್ಯ ಚಕ್ರಂ ಪ್ಲೇಟ್; 1200 ಮೀ. ಕೂರ್ಗ್ ಜನರಲ್ 4, ಗೋಲ್ಡನ್ ಬರ್ಡ್ 2, ನ್ಯಾಚುರಲ್ ಫ್ಲೈ 7
4. ಕೊಳ್ಳೆಗಾಲ ಪ್ಲೇಟ್ – ಡಿ.1; 1200 ಮೀ. ಸ್ಟ್ರೀಟ್ ಸೆನ್ಸ್ 7, ಮ್ಯಾಂಡೊಲಿನ್ 2, ರಫಿಟಾನೊ 4
5. ಡಾ.ಎನ್.ಎಂ.ಶ್ರೀನಿವಾಸ್ ಮೆಮೋರಿಯಲ್ ಟ್ರೋಫಿ; 1400 ಮೀ. ನಾಟಿ ಪ್ಯಾಟನ್ 6, ಕಾಂಟ್ರಿಬ್ಯೂಟರ್ 5, ರೈಸ್ ಎಗೈನ್ 11
6. ಕೊಳ್ಳೆಗಾಲ ಪ್ಲೇಟ್ – ಡಿ.2; 1200 ಮೀ. ಮ್ಯಾಪಲ್ ಲೀಫ್ 2, ಗ್ರೇಸ್ 1, ಕೋರ್ಟ್ ಜೆಸ್ಟರ್ 3
7. ಮಳವಳ್ಳಿ ಪ್ಲೇಟ್; 1400 ಮೀ. ವಾಲ್ಟರ್ 1, ಚಾಯ್ಸ್ 3, ಮೇಬ್ಯೂರಿ 5

ಉತ್ತಮ ಬೆಟ್: ವಾಲ್ಟರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	3,4,5	5,6,7

ಇಳವೇನಿಲ್‌ಗೆ ಕಂಚು

ಮ್ಯೂನಿಕ್ (ಜರ್ಮನಿ) (ಪಿಟಿಐ): ಭಾರತದ ಶೂಟರ್ ಇಳವೇನಿಲ್ ವಳರಿವನ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್‌ನ ಮಹಿಳೆಯರ 10 ಮೀಟರ್ ಏರ್ ರೈಫಲ್ ಫೈನಲ್‌ನಲ್ಲಿ ಕಂಚಿನ ಪದಕ ಗೆದ್ದರು.



25 ವರ್ಷ ವಯಸ್ಸಿನ ಇಳವೇನಿಲ್ ಮಂಗಳವಾರ ನಡೆದ ಸ್ಪರ್ಧೆಯಲ್ಲಿ 231.2 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ಚೀನಾದ ವಾಂಗ್ ಜಿಫೀ (252.7 ಅಂಕ) ಮತ್ತು ದಕ್ಷಿಣ ಕೊರಿಯಾದ ಕ್ವಾನ್ ಯುಂಜಿ (252.6) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು. 2018ರಲ್ಲಿ ಇಲ್ಲಿ ನಡೆದ ವಿಶ್ವಕಪ್‌ನಲ್ಲಿ ಇಳವೇನಿಲ್ ನಾಲ್ಕನೇ ಸ್ಥಾನ ಗಳಿಸಿದ್ದರು.

ಹಾಂಗ್‌ಕಾಂಗ್‌ಗೆ ಮಣಿದ ಭಾರತ

ಏಷ್ಯನ್ ಕಪ್ ಅರ್ಹತಾ ಸುತ್ತು • ದುಬಾರಿಯಾದ ಕೊನೆಗಳಿಗೆಯ ಪೆನಾಲ್ಟಿ

ಕೌಲೂನ್, ಹಾಂಗ್‌ಕಾಂಗ್ (ಪಿಟಿಐ): ಭಾರತ ಪುರುಷರ ಫುಟ್‌ಬಾಲ್ ತಂಡವು ಮಂಗಳವಾರ ಇಲ್ಲಿ ನಡೆದ ಎಎಫ್‌ಸಿ ಏಷ್ಯನ್ ಕಪ್ ಅರ್ಹತಾ ಸುತ್ತಿನ ನಿರ್ಣಾಯಕ ಪಂದ್ಯದಲ್ಲಿ 0–1 ಗೋಲಿನಿಂದ ಆತಿಥೇಯ ಹಾಂಗ್‌ಕಾಂಗ್ ಎದುರು ಸೋಲು ಅನುಭವಿಸಿತು.

ಇಲ್ಲಿನ ಕೈ ತಕ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಸ್ಟೀಫನ್ ಪೆರೇರಾ (90+4ನೇ) ಅವರು ಇಂಜುರಿ ಅವಧಿಯಲ್ಲಿ ಗೆಲುವಿನ ಗೋಲು ದಾಖಲಿಸಿದರು. ಈ ಜಯದೊಂದಿಗೆ 'ಸಿ' ತಂಡಗಳ ಗುಂಪಿನಲ್ಲಿ ಹಾಂಗ್‌ಕಾಂಗ್ ತಂಡವು ಅಗ್ರಸ್ಥಾನಕ್ಕೆ ಏರಿದೆ. ಭಾರತ ಕೊನೆಯ ಸ್ಥಾನಕ್ಕೆ ಜಾರಿದೆ.

ಪಂದ್ಯ ಡ್ರಾನತ್ತ ಸಾಗುತ್ತಿರುವಂತೆ ಕಂಡಾಗ ಗೋಲಿನತ್ತ ಬಂದ ಚೆಂಡನ್ನು ಭಾರತದ ಗೋಲ್‌ಕೀಪರ್ ವಿಶಾಲ್ ಕೈತ್ ಅವರು ತಡೆಯಲು ಜಿಗಿದರು. ಈ ವೇಳೆ ಅವರು ಆಕಸ್ಮಿಕವಾಗಿ ಹಾಂಗ್‌ಕಾಂಗ್‌ನ ಮೈಕೆಲ್ ಉಡೆಬುಲುಜೋರ್ ಅವರಿಗೆ ಡಿಕ್ಕಿಹೊಡೆದರು. ಹೀಗಾಗಿ ರೆಫರಿ, ಹಾಂಗ್‌ಕಾಂಗ್‌ಗೆ ಪೆನಾಲ್ಟಿ ಅವಕಾಶ ನೀಡಿದರು. ಅದನ್ನು ಗೋಲಾಗಿ ಪರಿವರ್ತಿಸುವಲ್ಲಿ ಪೆರೇರಾ ಯಶಸ್ವಿ ಆದರು. ಈ ವೇಳೆ ಹೊಸ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರು ಸಂಭ್ರಮಿಸಿದರು.

ಭಾರತದ ಕೋಚ್ ಮನೊಲೊ ಮಾರ್ಕ್ವೆಝ್ ಅವರು ಅನುಭವಿ ಸ್ಟ್ರೈಕರ್ ಸುನಿಲ್ ಚೆಟ್ರಿ ಅವರನ್ನು ಆರಂಭಿಕ ಹನ್ನೊಂದರ ಬಳಗದಿಂದ ಹೊರಗಿಟ್ಟಿದ್ದರು. ಮೊದಲಾರ್ಧದ ಪಂದ್ಯ ಉತ್ತಮ ಪೈಪೋಟಿ ಕಂಡರೂ ಯಾವ ತಂಡಕ್ಕೂ ಗೋಲು ಗಳಿಸಲು ಸಾಧ್ಯವಾಗಲಿಲ್ಲ. ದ್ವಿತೀಯಾರ್ಧದಲ್ಲೂ ಉಭಯ ತಂಡಗಳಿಂದ ಮುನ್ನಡೆಗಾಗಿ ಜಿದ್ದಾಜಿದ್ದಿನ ಹೋರಾಟ ನಡೆಯಿತು.

ಎಎಫ್‌ಸಿ ಏಷ್ಯನ್ ಕಪ್‌ಗೆ ಅರ್ಹತೆ ಗಳಿಸುವ ದೃಷ್ಟಿಯಿಂದ ಈ ಸೋಲು ಭಾರತಕ್ಕೆ ಹಿನ್ನಡೆಯಾಗಿದೆ. ಮಾರ್ಚ್‌ನಲ್ಲಿ ತವರಿನಲ್ಲಿ ನಡೆದ ತನ್ನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಗೋಲುರಹಿತ ಡ್ರಾ ಮಾಡಿಕೊಂಡಿತ್ತು.



ಭಾರತ (ನೀಲಿ) ಮತ್ತು ಹಾಂಗ್‌ಕಾಂಗ್ ತಂಡದ ಆಟಗಾರರು ಚೆಂಡಿಗಾಗಿ ಪೈಪೋಟಿ ನಡೆಸಿದರು

ಎಕ್ಸ್ ಚಿತ್ರ

ಸಂಕ್ಷಿಪ್ತ ಸುದ್ದಿ

ಸಮ್ಮರ್ ಎರಡನೇ ವಿಶ್ವದಾಖಲೆ

ಮಾಂಟ್ರಿಯಲ್ (ಎಎಫ್‌ಪಿ): ಕೆನಡಾದ ಈಜುತಾರೆ ಸಮ್ಮರ್ ಮೆಕಿಂತೋಷ್ ಅವರು ಮೂರು ದಿನಗಳ ಅಂತರದಲ್ಲಿ ಎರಡನೇ ವಿಶ್ವದಾಖಲೆ ನಿರ್ಮಿಸಿದರು.




ಕೆನೆಡಿಯನ್ ಈಜು ಟ್ರಯಲ್ಸ್‌ನಲ್ಲಿ ಮಹಿಳೆಯರ 200 ಮೀಟರ್ ಮೆಡ್ಲೆ ಸ್ಪರ್ಧೆಯಲ್ಲಿ ದಶಕಗಳ ಹಿಂದಿನ ದಾಖಲೆಯನ್ನು ಮುರಿದರು.

18 ವರ್ಷ ವಯಸ್ಸಿನ ಮೆಕಿಂತೋಷ್ ಸೋಮವಾರ ನಡೆದ ಸ್ಪರ್ಧೆಯಲ್ಲಿ 2 ನಿಮಿಷ 05.70 ಸೆಕೆಂಡ್‌ಗಳಲ್ಲಿ ಗುರಿತಲುಪಿದರು. ಈ ಮೂಲಕ 2015ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಹಂಗೇರಿಯ ಕಟಿಂಕಾ ಹೊಸ್ಜು (2 ನಿ.06.12 ಸೆ) ಸ್ಥಾಪಿಸಿದ್ದ ದಾಖಲೆಯನ್ನು ಮುಳುಗಿಸಿದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮೂರು ಚಿನ್ನ ಗೆದ್ದಿರುವ ಮೆಕಿಂತೋಷ್ ಅವರು ಶನಿವಾರ 400 ಮೀಟರ್ಸ್ ಫ್ರೀಸ್ಟೈಲ್ ಈಜು ಸ್ಪರ್ಧೆಯಲ್ಲಿ ವಿಶ್ವದಾಖಲೆ ಬರೆದಿದ್ದರು. ಅವರು 3 ನಿಮಿಷ, 54.18 ಸೆಕೆಂಡುಗಳಲ್ಲಿ ಗುರಿ ತಲುಪಿದ್ದರು.

14ರಂದು ಹಾಕಿ ಟ್ರಯಲ್ಸ್



ಬೆಂಗಳೂರು: ಜಾರ್ಖಂಡ್‌ನ ರಾಂಚಿಯಲ್ಲಿ ಜುಲೈ 3ರಿಂದ 14ರವರೆಗೆ ನಡೆಯಲಿರುವ 15ನೇ ಹಾಕಿ ಇಂಡಿಯಾ ಸಬ್ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡದ ಆಯ್ಕೆ ಮಾಡಲು ಹಾಕಿ ಕರ್ನಾಟಕವು ಟ್ರಯಲ್ಸ್ ಆಯೋಜಿಸಿದೆ.

ಬೆಂಗಳೂರಿನ ಶಾಂತಿನಗರದ ಕೆ.ಎಂ.ಕಾರ್ಯಪ್ಪ ಹಾಕಿ ಅರೇನಾದಲ್ಲಿ ಇದೇ 14ರಂದು ಬೆಳಿಗ್ಗೆ 9.30ಕ್ಕೆ ಆಯ್ಕೆ ಟ್ರಯಲ್ಸ್ ನಡೆಯಲಿದೆ. 2009 ಜ.1ರ ನಂತರ ಜನಿಸಿದ ಆಟಗಾರ್ತಿಯರು ಟ್ರಯಲ್ಸ್‌ನಲ್ಲಿ ಭಾಗವಹಿಸಬಹುದು ಎಂದು ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂನಿಯರ್ ಹಾಕಿ ತಂಡ: ಹುಂಡಲ್ ನಾಯಕ

ನವದೆಹಲಿ (ಪಿಟಿಐ): ಅನುಭವಿ ಡ್ರ್ಯಾಗ್ ಫ್ಲಿಕ್ಕರ್ ಅರಿಜಿತ್ ಸಿಂಗ್ ಹುಂಡಲ್ ಅವರು ನಾಲ್ಕು ರಾಷ್ಟ್ರಗಳ ಜೂನಿಯರ್ ಪುರುಷರ ಹಾಕಿ ಟೂರ್ನಿಯಲ್ಲಿ ಆಡುವ ಭಾರತ ತಂಡಕ್ಕೆ ನಾಯಕರಾಗಿದ್ದಾರೆ. ರಕ್ಷಣೆ ಆಟಗಾರ ಅಮೀರ್ ಅಲಿ ಉಪನಾಯಕರಾಗಿದ್ದಾರೆ.

ಟೂರ್ನಿಯು ಬರ್ಲಿನ್‌ನಲ್ಲಿ ಜೂನ್ 21ರಂದು ಆರಂಭವಾಗಲಿದೆ. ವರ್ಷದ ಕೊನೆಗೆ ಚೆನ್ನೈ ಮತ್ತು ಮಧುರೈನಲ್ಲಿ ನಡೆಯಲಿರುವ ಜೂನಿಯರ್ ವಿಶ್ವ ಕಪ್‌ಗೆ ಅಭ್ಯಾಸದ ಭಾಗವಾಗಿ ಈ ಟೂರ್ನಿ ನಡೆಯಲಿದೆ. ಭಾರತದ ಜೊತೆಗೆ ಆತಿಥೇಯ ಜರ್ಮನಿ, ಸ್ಪೇನ್ ಮತ್ತು ಆಸ್ಟ್ರೇಲಿಯಾ ಭಾಗವಹಿಸುವ ಇತರ ಮೂರು ತಂಡಗಳು.

ವಿಕ್ರಮಜಿತ್ ಸಿಂಗ್ ಹಾಗೂ ವಿವೇಕ್ ಲಾಕ್ರಾ ಗೋಲ್‌ಕೀಪರ್‌ಗಳಾಗಿದ್ದಾರೆ.

ರೇಸ್ ವಾಕ್: ಮೊದಲ ಗೆಲುವು ಪಡೆದ ಪ್ರಿಯಾಂಕಾ

ನವದೆಹಲಿ (ಪಿಟಿಐ): ಭಾರತದ ಪ್ರಿಯಾಂಕಾ ಗೋಸ್ವಾಮಿ ಅವರು ಇನ್ಸ್‌ಬ್ರುಕ್‌ನಲ್ಲಿ ನಡೆದ ಆಸ್ಟ್ರಿಯನ್ ರೇಸ್ ವಾಕಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಕಿ.ಮೀ. ರೇಸ್ ವಾಕ್ ಸ್ಪರ್ಧೆಯಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ. ಆ ಮೂಲಕ ವರ್ಷದ ಗೆಲುವನ್ನು ಸಂಪಾದಿಸಿದ್ದಾರೆ.

29 ವರ್ಷ ವಯಸ್ಸಿನ ಪ್ರಿಯಾಂಕಾ ನಿಗದಿತ ದೂರವನ್ನು 47 ನಿ. 54 ಸೆ. ಗಳಲ್ಲಿ ಕ್ರಮಿಸಿದರು. ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಗಿಂತ 45ನಿ. 47 ಸೆ. (2022ರಲ್ಲಿ) ಕಡಿಮೆ ಆಗಿದೆ.

ಭಾರತದ 35 ಕಿ.ಮೀ. ರೇಸ್ ವಾಕ್ ಸ್ಪರ್ಧಿ ಸಂದೀಪ್ ಕುಮಾರ್ 2 ಗಂ.38ನಿ.45 ಸೆ.ಗಳ ಕಾಲಾವಧಿಯೊಡನೆ ಎರಡನೇ ಹಾಗೂ ರಾಮ್ ಬಾಬೂ 2ಗಂ.41ನಿ.47ಸೆ.ಗಳ ಕಾಲಾವಧಿಯೊಡನೆ ಮೂರನೇ ಸ್ಥಾನ ಪಡೆದರು.

ಪೂರನ್ ಹಠಾತ್ ವಿದಾಯ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ವೆಸ್ಟ್ ಇಂಡೀಸ್‌ನ ಆಕರ್ಷಕ ಬ್ಯಾಟರ್ ನಿಕೋಲಸ್ ಪೂರನ್ ಮಂಗಳವಾರ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ದಿಢೀರ್ ವಿದಾಯ ಹೇಳಿದರು. 29 ವರ್ಷದ ಆಟಗಾರನ ನಿರ್ಧಾರ ಕ್ರಿಕೆಟ್ ವಲಯಗಳಲ್ಲಿ ಆಘಾತ ಮೂಡಿಸಿದೆ.

ಈ ನಿರ್ಧಾರಕ್ಕೆ ಅವರು ನಿರ್ದಿಷ್ಟ ಕಾರಣ ತಿಳಿಸಿಲ್ಲ. ಆದರೆ ಸಾಕಷ್ಟು ಯೋಚಿಸಿ ನಿರ್ಧಾರಕ್ಕೆ ಬಂದಿರುವುದಾಗಿ ಎಡಗೈ ಆಟಗಾರ ತಿಳಿಸಿದ್ದಾರೆ. ಇಂಗ್ಲೆಂಡ್ ವಿರುದ್ಧ ಅವರು ಇತ್ತೀಚೆಗೆ ಟಿ20 ಸರಣಿಯಿಂದ ಹಿಂದೆಸರಿದಿದ್ದರು. ಟ್ರಿನಿಡಾಡಿನ ಈ ಆಟಗಾರ ವೆಸ್ಟ್ ಇಂಡೀಸ್ ಪರ ಅತಿ ಹೆಚ್ಚು, 106 ಟಿ20 ಪಂದ್ಯಗಳನ್ನು ಆಡಿದ್ದಾರೆ. ಅತಿ ಹೆಚ್ಚು ರನ್ (2,275) ಗಳಿಸಿದ ಶ್ರೇಯವೂ ಅವರದಾಗಿದೆ.

2016ರಲ್ಲಿ ಅವರು ಟಿ20 ಪಂದ್ಯ ಆಡುವ ಮೂಲಕ ರಾಷ್ಟ್ರೀಯ ತಂಡಕ್ಕೆ ಪದಾರ್ಪಣೆ ಮಾಡಿದ್ದರು. 61 ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಸೀಮಿತ ಓವರುಗಳ ತಂಡಕ್ಕೆ ನಾಯಕರೂ ಆಗಿದ್ದರು. ಆದರೆ ಒಂದೂ ಟೆಸ್ಟ್ ಆಡಿಲ್ಲ.

'ಕಡುಗೆಂಪು ಬಣ್ಣದ ಜರ್ಸಿ ಧರಿಸಿ ರಾಷ್ಟ್ರಗೀತೆಗೆ ನಿಲ್ಲುವುದು, ಫೀಲ್ಡ್‌ನಲ್ಲಿದ್ದಾಗ ನನ್ನಲ್ಲಿರುವ ಎಲ್ಲ ಆಟ ನೀಡುವುದು.... ಇದನ್ನೆಲ್ಲಾ ಪದಗಳಲ್ಲಿ ಹಿಡಿದಿಡುವುದು ಕಷ್ಟ. ತಂಡದ ನಾಯಕತ್ವ ವಹಿಸಿರುವುದು ಗೌರವದ ವಿಷಯ. ಇದು ನನ್ನ ಹೃದಯಕ್ಕೆ ಹತ್ತಿರವಾದುದು' ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಭಾವನಾತ್ಮಕವಾಗಿ ಬರೆದುಕೊಂಡಿದ್ದಾರೆ.



ನಿಕೋಲಸ್ ಪೂರನ್

2024ರಲ್ಲಿ ಅವರು ಅತಿ ಹೆಚ್ಚು ಸಿಕ್ಸರ್ (170) ಬಾರಿಸಿದ್ದರು. 2025ರ ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ಪರ 524 ರನ್ ಕಲೆಹಾಕಿದ್ದರು. ಇದರಲ್ಲಿ ಐದು ಅರ್ಧ ಶತಕಗಳಿದ್ದವು. ಅವರು 2023ರ ಏಕದಿನ ವಿಶ್ವಕಪ್ ಅರ್ಹತಾ ಸುತ್ತಿನಿಂದ ವೆಸ್ಟ್ ಇಂಡೀಸ್ ಹೊರಬಿದ್ದ ನಂತರ ಅವರು ಏಕದಿನ ತಂಡದಲ್ಲಿ ಆಡಿರಲಿಲ್ಲ. ಪ್ರವಾಸಿ ಬಾಂಗ್ಲಾದೇಶ ವಿರುದ್ಧ ಕಿಂಗ್‌ಸ್ಟನ್‌ನಲ್ಲಿ ಕೊನೆ ಬಾರಿ ವೆಸ್ಟ್ ಇಂಡೀಸ್ ತಂಡವನ್ನು (ಟಿ20 ಸರಣಿ) ಪ್ರತಿನಿಧಿಸಿದ್ದರು.



ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರ ನಡೆದ ಬ್ರಿಗೇಡಿಯರ್ ಆರ್.ಸಿ.ಆರ್. ಹಿಲ್ ಸ್ಮರಣಾರ್ಥ ರೇಸ್‌ನಲ್ಲಿ ವಿವೇಕ್ ಜಿ. ಸವಾರಿಯಲ್ಲಿ ಗೆದ್ದ 'ಈಗಲ್ ಡೇ' ಕುದುರೆ ತರಬೇತುದಾರ ಪಿ.ಶ್ರಾಫ್ ಅವರಿಗೆ ಬೆಂಗಳೂರು ಕ್ಲಬ್‌ನ ಅಧ್ಯಕ್ಷ ಅಶ್ವಿನ್ ಶೆಟ್ಟಿ ಟ್ರೋಫಿ ಪ್ರದಾನ ಮಾಡಿದರು. ಬಿಟಿಸಿಯಲ್ಲಿ ಹಿರಿಯ ಸ್ಟೀವರ್ಡ್ ಆಗಿದ್ದ ಆರ್.ಸಿ.ಆರ್. ಹಿಲ್ ಅವರು 1942 ರಿಂದ 1962 ರವರೆಗೆ ಬೆಂಗಳೂರು ಕ್ಲಬ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು

ಯಾರ್ಕ್‌ಶೈರ್‌ಗೆ ಋತುರಾಜ್ ಸೇರ್ಪಡೆ

ಲೀಡ್ಸ್ (ಇಂಗ್ಲೆಂಡ್) (ಪಿಟಿಐ): ಭಾರತದ ಬ್ಯಾಟರ್ ಋತುರಾಜ್ ಗಾಯಕವಾಡ್ ಅವರು ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಡಿವಿಷನ್ ತಂಡ ಯಾರ್ಕ್‌ಶೈರ್ ಕ್ಲಬ್ ಸೇರಿಕೊಂಡಿದ್ದಾರೆ. ಈ ತಂಡದ ಪರ ಐದು ಪಂದ್ಯಗಳನ್ನು ಆಡಲಿದ್ದಾರೆ. ಏಕದಿನ ಕಪ್‌ನಲ್ಲೂ ಆಡಲಿದ್ದಾರೆ.

ಜುಲೈನಲ್ಲಿ ಸರ್ರೆ ವಿರುದ್ಧದ ಪಂದ್ಯದ ಮೂಲಕ ತಂಡಕ್ಕೆ ಸೇರಲಿದ್ದಾರೆ ಎಂದು ಕ್ಲಬ್ ವೆಬ್‌ಸೈಟ್‌ನಲ್ಲಿ ತಿಳಿಸಿದೆ. 28 ವರ್ಷ ವಯಸ್ಸಿನ ಋತುರಾಜ್ ಪ್ರಸ್ತುತ ಭಾರತ ಎ ತಂಡದೊಂದಿಗೆ ಇಂಗ್ಲೆಂಡ್ ಪ್ರವಾಸದಲ್ಲಿದ್ದು ನಾಲ್ಕು ದಿನಗಳ ಎರಡು 'ಟೆಸ್ಟ್' ಪಂದ್ಯಗಳಲ್ಲಿ ಆಡಿದ್ದಾರೆ.

ರಣಜಿಯಲ್ಲಿ ಮಹಾರಾಷ್ಟ್ರ ತಂಡ ಪ್ರತಿನಿಧಿಸುವ ಅವರು, ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ನಾಯಕರಾಗಿದ್ದಾರೆ. ಭಾರತ ತಂಡದ ಪರ ಆರು ಏಕದಿನ ಪಂದ್ಯ ಮತ್ತು 23 ಟಿ20 ಪಂದ್ಯಗಳನ್ನು ಆಡಲಿದ್ದಾರೆ.

10 ತಂಡಗಳ ಕೌಂಟಿ ಮೊದಲ ಡಿವಿಷನ್ ಲೀಗ್‌ನಲ್ಲಿ ಯಾರ್ಕ್‌ಶೈರ್ ಪ್ರಸ್ತುತ ಕೊನೆಯಿಂದ ಎರಡನೇ ಸ್ಥಾನದಲ್ಲಿದೆ.

ಹಾಲ್ ಆಫ್ ಫೇಮ್‌ಗೆ ಧೋನಿ

ಹೇಡನ್, ಗ್ರೇಮ್ ಸ್ಮಿತ್ ಸೇರಿ ಏಳು ದಿಗ್ಗಜರಿಗೆ ಐಸಿಸಿ ಗೌರವ

ಲಂಡನ್ (ಪಿಟಿಐ): ಭಾರತ ತಂಡದ ಮಾಜಿ ನಾಯಕ ಎಂ.ಎಸ್.ಧೋನಿ ಸೇರಿ ಏಳು ಮಂದಿ ಕ್ರಿಕೆಟಿಗರು 2025ರ ಐಸಿಸಿ ಹಾಲ್ ಆಫ್ ಫೇಮ್ ಗೌರವಕ್ಕೆ ಸೋಮವಾರ ಪಾತ್ರರಾಗಿದ್ದಾರೆ.

ಧೋನಿ ಅವರೊಂದಿಗೆ ಆಸ್ಟ್ರೇಲಿಯಾದ ದಿಗ್ಗಜ ಆಟಗಾರ ಮ್ಯಾಥ್ಯೂ ಹೇಡನ್, ದಕ್ಷಿಣ ಆಫ್ರಿಕಾದ ಗ್ರೇಮ್ ಸ್ಮಿತ್, ಹಾಶಿಮ್ ಆಮ್ಲ ಮತ್ತು ನ್ಯೂಜಿಲೆಂಡ್‌ನ ಮಾಜಿ ನಾಯಕ ಡೇನಿಯಲ್ ವೆಟೋರಿ ಅವರು ಈ ಐವರು ಆಟಗಾರರು.

ಇಂಗ್ಲೆಂಡ್‌ನ ಬ್ಯಾಟರ್- ವಿಕೆಟ್ ಕೀಪರ್ ಸಾರಾ ಟೇಲರ್ ಮತ್ತು ಪಾಕಿಸ್ತಾನ ತಂಡದ ಮಾಜಿ ನಾಯಕಿ ಸನಾ ಮಿರ್ ಅವರು ಈ ಗೌರವಕ್ಕೆ ಪಾತ್ರರಾದ ಆಟಗಾರ್ತಿಯರು.

'ಧೋನಿ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 17,266 ರನ್ ಕಲೆಹಾಕಿದ್ದಾರೆ. ವಿಕೆಟ್ ಹಿಂದೆ 829 ಕ್ಯಾಚ್ ಪಡೆದಿದ್ದಾರೆ. ಮೂರೂ ಮಾದರಿಗಳಲ್ಲಿ 538 ಪಂದ್ಯಗಳನ್ನು (90 ಟೆಸ್ಟ್, 350 ಏಕದಿನ, 98 ಟಿ20 ಪಂದ್ಯ) ಆಡಿದ್ದಾರೆ. ಇದು ಅಂಕಿಗಳಷ್ಟೇ ಅಲ್ಲ, ಅವರ ಅಸಾಧಾರಣ ಸ್ಥಿರತೆ, ಫಿಟ್ನೆಸ್, ದೀರ್ಘ ಕಾಲ ಆಡುವ ಸಾಮರ್ಥ್ಯವನ್ನೂ ಪ್ರತಿಬಿಂಬಿಸುತ್ತದೆ' ಎಂದು ಐಸಿಸಿ ಬಣ್ಣಿಸಿದೆ.

2007ರ ಟಿ20 ವಿಶ್ವಕಪ್ ವಿಜೇತ ಭಾರತ ತಂಡದ ನಾಯಕರಾಗಿದ್ದ ಅವರು, 2011ರಲ್ಲಿ ಏಕದಿನ ವಿಶ್ವಕಪ್ ಗೆದ್ದ ತಂಡ ಮತ್ತು 2013ರ ಚಾಂಪಿಯನ್ಸ್ ಟ್ರೋಫಿ ಗೆದ್ದ ತಂಡವನ್ನೂ ಮುನ್ನಡೆಸಿದ್ದರು.



ಎಂ.ಎಸ್.ಧೋನಿ

'ಐಸಿಸಿ ಹಾಲ್‌ಆಫ್ ಫೇಮ್ ಗೌರವಕ್ಕೆ ಹೆಸರಿಸಿರುವುದು ನನ್ನ ಪಾಲಿಗೊದಗಿದ ಗೌರವ' ಎಂದು 43 ವರ್ಷ ವಯಸ್ಸಿನ ಧೋನಿ ಐಸಿಸಿಯ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಾಲ್ ಆಫ್ ಫೇಮ್‌ಗೆ ಸೇರ್ಪಡೆ ಕಾರ್ಯಕ್ರಮ ಲಂಡನ್ ಅಬ್ಬೇ ರೋಡ್ ಸ್ಟುಡಿಯೊದಲ್ಲಿ ನಡೆಯಿತು.

ಹಾಶಿಂ ಆಮ್ಲ ಅವರು ದಕ್ಷಿಣ ಆಫ್ರಿಕಾ ಪರ ಟೆಸ್ಟ್‌ನಲ್ಲಿ ತ್ರಿಶತಕ ಬಾರಿಸಿದ ಮೊದಲ ಆಟಗಾರ. ಅವರು ಓವಲ್‌ನಲ್ಲಿ 2012ರಲ್ಲಿ ಇಂಗ್ಲೆಂಡ್ ವಿರುದ್ಧ ಅಜೇಯ 311 ರನ್ ಬಾರಿಸಿದ್ದರು.

ಕೇವಲ 22ನೇ ವಯಸ್ಸಿನಲ್ಲಿ ನಾಯಕರಾದ ಗ್ರೇಮ್ ಸ್ಮಿತ್ 109 ಟೆಸ್ಟ್‌ಗಳಲ್ಲಿ ತಂಡವನ್ನು ಮುನ್ನಡೆಸಿದ್ದು ವಿಶ್ವ ದಾಖಲೆ. ಈ ಆರಂಭ ಆಟಗಾರನನ್ನು ಬಿಟ್ಟರೆ ಬೇರಾರೂ 100ಕ್ಕಿಂತ ಹೆಚ್ಚು ಪಂದ್ಯಗಳಿಗೆ ನಾಯಕರಾಗಿಲ್ಲ.

ಆರಂಭಿಕ ಆಟಗಾರ ಹೇಡನ್ ಟೆಸ್ಟ್‌ಗಳಲ್ಲಿ 50ಕ್ಕಿಂತ ಹೆಚ್ಚು ಸರಾಸರಿಯ ರನ್ ಗಳಿಸಿದ್ದು 30 ಶತಕಗಳನ್ನು ಬಾರಿಸಿದ್ದಾರೆ.


ಪ್ರಸ್ತುತ ಆಸ್ಟ್ರೇಲಿಯಾ ತಂಡದ ಸಹಾಯಕ ಕೋಚ್ ಆಗಿರುವ ಎಡಗೈ ಸ್ಪಿನ್ನರ್ ವೆಟೋರಿ, ಟೆಸ್ಟ್‌ಗಳಲ್ಲಿ 4000ಕ್ಕಿಂತ ಹೆಚ್ಚು ರನ್ ಮತ್ತು 300 ವಿಕೆಟ್‌ಗಳನ್ನು ಪಡೆದಿರುವ ಕೇವಲ ಮೂವರು ಆಟಗಾರರಲ್ಲಿ ಒಬ್ಬರಾಗಿದ್ದಾರೆ.

ವಿಕೆಟ್ ಕೀಪರ್ ಸಾರಾ ಅವರು ಇಂಗ್ಲೆಂಡ್ ತಂಡ 2017ರ ಮಹಿಳಾ ಏಕದಿನ ವಿಶ್ವಕಪ್ ಸೇರಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವು ಪ್ರಶಸ್ತಿಗಳನ್ನು ಗೆಲ್ಲಲು ನೆರವಾಗಿದ್ದಾರೆ.

ಆಫ್ ಸ್ಪಿನ್ನರ್ ಸನಾ ಮಿರ್, ಹಾಲ್ ಆಫ್ ಫೇಮ್‌ಗೆ ಸೇರ್ಪಡೆಗೊಂಡ ಪಾಕಿಸ್ತಾನ ಮೊದಲ ಆಟಗಾರ್ತಿ. ಏಕದಿನ ಪಂದ್ಯಗಳಲ್ಲಿ 151 ವಿಕೆಟ್ ಕಬಳಿಸಿದ್ದಾರೆ.

233ನೇ ಸ್ಥಾನಕ್ಕೆ ಕುಸಿದ ನಗಾಲ್

ನವದೆಹಲಿ (ಪಿಟಿಐ): ಎಟಿಪಿ ಸರ್ಕಿಟ್‌ನ ಸರಣಿ ಟೂರ್ನಿಗಳಲ್ಲಿ ಬೇಗನೇ ನಿರ್ಗಮಿಸಿದ ಕಾರಣ ಸುಮಿತ್ ನಗಾಲ್ ಅವರು ವಿಶ್ವ ಕ್ರಮಾಂಕದಲ್ಲಿ 233ನೇ ಸ್ಥಾನಕ್ಕೆ ಕುಸಿದಿದ್ದಾರೆ. ಇದು ಎರಡು ವರ್ಷಗಳಲ್ಲಿ ಭಾರತದ ಅಗ್ರ ಸಿಂಗಲ್ಸ್ ಆಟಗಾರನ ಕನಿಷ್ಠ ರ್‍ಯಾಂಕಿಂಗ್ ಆಗಿದೆ.



ನಗಾಲ್

45 ವರ್ಷ ವಯಸ್ಸಿನ ರೋಹನ್ ಬೋಪಣ್ಣ ಅವರು 15 ವರ್ಷಗಳಲ್ಲಿ ಇದೇ ಮೊದಲ ಬಾರಿ ಡಬಲ್ಸ್‌ನಲ್ಲಿ ಅಗ್ರ 50ರಿಂದ ಹೊರಬಿದ್ದಿದ್ದು, ಸದ್ಯ 53ನೇ ಸ್ಥಾನದಲಿದ್ದಾರೆ.

27 ವರ್ಷ ವಯಸ್ಸಿನ ನಗಾಲ್ ಜುಲೈ 2023ರಲ್ಲಿ 231ನೇ ರ್‍ಯಾಂಕ್ ಪಡೆದಿದ್ದರು. ಆದರೆ ನಂತರ ಉತ್ತಮ ಸಾಧನೆ ತೋರುತ್ತ 2024 ಜುಲೈನಲ್ಲಿ ಜೀವನಶ್ರೇಷ್ಠ 68ನೇ ಸ್ಥಾನಕ್ಕೆ ಏರಿದ್ದರು. ಕಳೆದ ಐದು ತಿಂಗಳಲ್ಲಿ ಅವರು 142 ಸ್ಥಾನಗಳಷ್ಟು ಕೆಳಗೆ ಕುಸಿದಿದ್ದಾರೆ. ಪ್ರಸ್ತುತ ಅವರ ನಂತರ ಶಶಿಕುಮಾರ್ ಮುಕುಂದ್ (430ನೇ ಸ್ಥಾನ) ದೇಶದ ಎರಡನೇ ಉತ್ತಮ ಆಟಗಾರ ಎನಿಸಿದ್ದಾರೆ.

ಯುಕಿ ಭಾಂಬ್ರಿ ದೇಶದ ಅಗ್ರ ಡಬಲ್ಸ್ ಆಟಗಾರ ಎನಿಸಿದ್ದಾರೆ. ಅವರು ಆರು ಸ್ಥಾನ ಮೇಲೇರಿ 35ನೇ ಕ್ರಮಾಂಕ ಪಡೆದಿದ್ದಾರೆ.